ದುಡಿಯುವ ಜನರ ಪ್ರಾಣ ಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ


ಸಂಪುಟ 11 | ಸಂಚಿಕೆ 18 | ಪುಟ 16 | ಏಪ್ರಿಲ್ 24-30, 2017 | ರೂ. 10/-

web: www.janashakthi.co.in | e-mail : js_weekly@yahoo.com

ವೆಂಕಟರಾಯಪ್ಪ

ಕಂಬಾಲಪಲ್ಲಿ ಸಾಕ್ಷಿ ನ್ಯಾಯ ಕಾಣದೆ ಸಾವು







ದೇವದಾಸಿ ಪದ್ಧತಿಯ ಕ್ರೌರ್ಯದ ವಿರುದ್ಧ ಹೋರಾಡಿ - ಸುಭಾಷಿಣಿ

ಚುನಾವಣಾ ಸುಧಾರಣೆಗೆ ಸಮಾವೇಶ - ಸಿಪಿಐ(ಎಂ)



ತ್ರಿವಳಿ ತಲಾಖ್- ಸರ್ಕಾರ ಏನು ಮುಚ್ಚಿಡುತ್ತಿದೆ: ಬೃಂದಾ



ಕಾಶ್ಮೀರ ದಬ್ಬಾಳಿಕೆ ನಿಲ್ಲಿಸಿ - ಕಾರಟ್

'ಜಾಗತೀಕರಣ' ಕೊನೆ? - ಪ್ರಭಾತ್

ತ್ರಿಪುರದಲ್ಲಿ ಮತಯಂತ್ರವನ್ನು ಪರಿಶೋಧನಾ ಕಾಗದದೊಂದಿಗೇ ಬಳಸಬೇಕು

ರಾಜ್ಯ ಬಿಜೆಪಿ ಅಧ್ಯಕ್ಷರ ನಿಂದನೆಯ ಹೇಳಿಕೆಯ ಹಿನ್ನೆಲೆಯಲ್ಲಿ ಚುನಾವಣಾ ಆಯೋಗಕ್ಕೆ ಯೆಚುರಿ ಪತ್ರ

ದೇಶದ ಆಳುವ ಪಕ್ಷ ಬಿಜೆಪಿಯ ತ್ರಿಪುರಾ ಘಟಕದ ಅಧ್ಯಕರೇ ಚುನಾವಣಾ ಆಯೋಗ ಇತ್ತೀಚೆಗೆ ಸಮರ್ಥಿಸಿಕೊಂಡಿರುವ ಇಲೆಕ್ಟ್ರಾನಿಕ್ ಮತದಾನ ಯಂತ್ರ (ಇವಿಎಂ)ದ ಕಾರ್ಯವೈಖರಿಯನ್ನು ನಿಂದಿಸುವ ರೀತಿಯ ಹೇಳಿಕೆ ನೀಡಿದ್ದಾರೆ. ಎಪ್ರಿಲ್ 12ರಂದು ರಾಜ್ಯದ ಕೊವಾಯ್ ಜಿಲ್ಲೆಯ ತೆಲಿಯಮುರದಲ್ಲಿ ಸಾರ್ವಜನಿಕ ರ್‍ಯಾಲಿಯಲ್ಲಿ ಮಾತಾಡುತ್ತ ಅವರು ಮತದಾರರು ಬೇರೆ ಯಾವುದೇ ಪಕ್ಷಕ್ಕೆ ಮತನೀಡಿದರೂ ಅವು ಬಿಜೆಪಿಗೇ ಹೋಗುತ್ತವೆ, ಸ್ವತಃ ಮಾಣಿಕ್ ಸರ್ಕಾರ್ ಕೂಡ ತನ್ನ ಸಿಪಿಐ(ಎಂ) ಪಕ್ಷಕ್ಕೆ ಹಾಕಿದ ಮತ ಕಮಲದ ಪರವಾಗಿ ದಾಖಲಾಗುತ್ತದೆ, ಗುಂಡಿಗೆಯಿದ್ದರೆ ನೀವು ಬಿಪ್ಲಬ್ ದೇವ್ ವಿರುದ್ಧ ದೂರು ಕೊಡಬಹುದು ಎಂದು ಹೇಳಿರುವುದಾಗಿ ವರದಿಯಾಗಿದೆ.

ಆಳುವ ಪಕ್ಷದ ರಾಷ್ಟ್ರೀಯ ಮುಖಂಡರೊಂದಿಗೆ ಮತ್ತು ಕೇಂದ್ರ ಸರಕಾರದ ಮುಖಂಡರೊಂದಿಗೆ ನಿಕಟ ಸಂಪರ್ಕ ಇರುವ ಮುಖಂಡರೊಬ್ಬರ ಇಂತಹ ತಿಕ್ಕಲುತನದ ಹೇಳಿಕೆ ಬಹಳ ಗಂಭೀರ ಸಂಗತಿ ಎಂದು ತ್ರಿಪುರ ಎಡರಂಗ ಸಮಿತಿ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದೆ.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿಯವರು ಇಂತಹ ಹೇಳಿಕೆಯ ಹಿನ್ನೆಲೆಯಲ್ಲಿ ತ್ರಿಪುರಾದಲ್ಲಿ ಈ ಮತಯಂತ್ರಗಳನ್ನು 'ಮತದಾರ ಪರೀಕ್ಷಿಸುವ ಮತ ಪರಿಶೋಧನಾ ಜಾಡು'(ವಿವಿಪಿಎಟಿ)ನೊಂದಿಗೇ ಬಳಸಬೇಕು ಎಂದು ಆಗ್ರಹಿಸುವ ಪತ್ರವನ್ನು ಚುನಾವಣಾ ಆಯೋಗಕ್ಕೆ ಬರೆದಿದ್ದಾರೆ.

ಅವರ ಪತ್ರದ ಪೂರ್ಣ ಪಾಟ ಹೀಗಿದೆ:

" ನಾನು ತ್ರಿಪುರ ರಾಜ್ಯದಿಂದ ಒಂದು ಗಂಭೀರ ಸಂಗತಿಯನ್ನು ತಮ್ಮ ಅವಗಾಹನೆಗೆ ಕಳಿಸುತ್ತಿದ್ದೇನೆ. ನೀವು ಈಗಾಗಲೇ ಸಿಪಿಐ(ಎಂ)ನ ತ್ರಿಪುರ ರಾಜ್ಯಸಮಿತಿಯಿಂದ ನೇರವಾಗಿ ಕೂಡ ಇದನ್ನು ಪಡೆದಿರಬಹುದು.

ಬಿಜೆಪಿಯ ತಿಪ್ರುರ ಘಟಕದ ಅಧ್ಯಕ್ಷ, ಶ್ರೀ ಬಿಪ್ಲಬ್ ದೇಬ್ ಒಂದು ಸಾರ್ವಜನಿಕ ಸಭೆಯಲ್ಲಿ ಇಲೆಕ್ಟ್ರಾನಿಕ್ ಮತದಾನ ಯಂತ್ರದ ಪ್ರಾಮಾಣಿಕತೆ ಮತ್ತು ನ್ಯಾಯಯುತತೆಯನ್ನು ನಿಂದಿಸುವ ಹೇಳಿಕೆಯನ್ನು ನೀಡಿದ್ದಾರೆ ಮತ್ತು ಧೈರ್ಯವಿದ್ದರೆ ತನ್ನ ವಿರುದ್ಧ ದೂರ ನೀಡಿ ಎಂದು ತ್ರಿಪುರ ಮುಖ್ಯಮಂತ್ರಿಗೆ ಹೇಳಿದ್ದಾರೆ. ಅವರ ಭಾಷಣದ ಸಂಬಂಧಪಟ್ಟ ಭಾಗದ ವಿಡಿಯೊ ಮತ್ತು ರಾಜ್ಯದ ಮುದ್ರಣ ಮಾಧ್ಯಮದ ದೈನಿಕಗಳಲ್ಲಿ ಪ್ರಕಟವಾದ ಸುದ್ದಿಗಳನ್ನೂ ನಿಮಗೆ ಸಲ್ಲಿಸಲಾಗಿದೆ.

ಇವಿಎಂಗಳ ತಟಸ್ಥತೆ ಮತ್ತು ನ್ಯಾಯಯುತತೆ-ಯ ಬಗ್ಗೆ ವ್ಯಾಪಕ ಸಂದೇಹಗಳು ದೇಶದ ಎಲ್ಲೆಡೆಗಳಿಂದ ವ್ಯಕ್ತವಾಗಿರುವಾಗ ಇಂತಹ ಆಕ್ರೋಶಕಾರಿ ಹೇಳಿಕೆಗಳು ಚುನಾವಣೆಗಳನ್ನು ಮುಕ್ತ ಮತ್ತು ನ್ಯಾಯಯುತವಾಗಿ ನಡೆಸುವ ಚುನಾವಣಾ ಆಯೋಗದ ಘೋಷಿತ ಗುರಿಯ ಬುನಾದಿಯನ್ನೇ ಧ್ವಂಸ ಮಾಡುತ್ತವೆ. ಒಂದು ಸಂವಿಧಾನಿಕ ಪ್ರಾಧಿಕಾರವಾದ ಚುನಾವಣಾ ಆಯೋಗ ನಮ್ಮ ಪ್ರಜಾಪ್ರಭುತ್ವದ ಅಡಿಪಾಯವಾದ ಮುಕ್ತ ಮತ್ತು ನ್ಯಾಯಯುತ ಚುನಾವಣೆಗಳು ನಡೆಯುವಂತೆ ಮಾಡಬಲ್ಲ ಏಕೈಕ ಸಂಸ್ಥೆ.

ಇಂತಹ ಆಕ್ರೋಶಕಾರಿ ಹೇಳಿಕೆಗಳ ಹಿನ್ನೆಲೆಯಲ್ಲಿ, ತಾವು ಜತೆಜತೆಗೇ, ಸಂಬಧಪಟ್ಟ ವ್ಯಕ್ತಿಯನ್ನು ಸೂಕ್ತವಾಗಿ ಶಿಕ್ಷಿಸುವ ಮತ್ತು ತ್ರಿಪುರದಲ್ಲಿ ಚುನಾವಣೆಯನ್ನು ಮುಕ್ತ ಹಾಗೂ ನ್ಯಾಯಯುತವಾಗಿ ನಡೆಸಲು ಬದ್ಧವಾಗಿದೆ ಎಂದು ರಾಜ್ಯದ ಜನತೆಗೆ ಭರವಸೆ ನೀಡುವ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸುತ್ತೇನೆ.

ಈ ಬೆಳವಣಿಗೆಗಳ ಬೆಳಕಿನಲ್ಲಿ, ತ್ರಿಪುರ ರಾಜ್ಯದಲ್ಲಿ ಬಳಸುವ ಇವಿಎಂಗಳನ್ನು 'ಮತದಾರ ಪರೀಕ್ಷಿಸುವ ಕಾಗದ ಪರಿಶೋಧನಾ ಜಾಡು'(ವಿವಿಪಿಎಟಿ) ವ್ಯವಸ್ಥೆಯೊಂದಿಗೆ ಜೋಡಿಸುವುದು ಅನಿವಾರ್ಯವಾಗಿದೆ. ಇದು ಮುಂಬರುವ ಚುನಾವಣೆಯಲ್ಲಿ ಚುನಾವಣಾ ಪ್ರಕ್ರಿಯೆಯ ಮುಕ್ತತೆ ಮತ್ತು ನ್ಯಾಯಯುತತೆಯ ಬಗ್ಗೆ ತ್ರಿಪುರಾದ ಮತದಾರರಲ್ಲಿ ಸ್ವಲ್ಪವಾದರೂ ವಿಶ್ವಾಸ ಮತ್ತೆ ಬರುವಂತೆ ಮಾಡಬಹುದಾದ ಕನಿಷ್ಟ ಕ್ರಮ".



'ಗೋರಕ್ಷಕ'ರಿಂದ ಹಾಲು ಉತ್ಪಾದಕ ರೈತನ ಕಗ್ಗೊಲೆ ವಿರುದ್ಧ ದಿಲ್ಲಿಯಲ್ಲಿ ಪ್ರತಿಭಟನಾ ಧರಣಿ: ಎಐಕೆಎಸ್‌ನಿಂದ ಕುಟುಂಬಕ್ಕೆ 3ಲಕ್ಷ ರೂ.ಗಳ ಚೆಕ್

ಎಪ್ರಿಲ್ 18 ರಂದು ದೇಶದ ರಾಜಧಾನಿಯ ಜಂತರ್‌ಮಂತರ್‌ನಲ್ಲಿ 'ಭೂಮಿ ಅಧಿಕಾರ್ ಆಂದೋಲನ್'(ಬಿಎಎ) ರಾಜಸ್ತಾನದಲ್ಲಿ 'ಗೋರಕ್ಷಕ'ರಿಂದ ಹರ್ಯಾಣದ ರೈತರ ಮೇಲೆ ಹಲ್ಲೆ ಮತ್ತು ಪೆಹಲೂ ಖಾನ್ ಕಗ್ಗೊಲೆ ನಡೆಸಿದವರ ವಿರುದ್ಧ ಕ್ರಮ ಹಾಗೂ ಪೆಹ್ಲೂ ಖಾನ್ ಕುಟುಂಬಕ್ಕೆ 1 ಕೋಟಿ ರೂ. ಪರಿಹಾರ, ರೈತರ ಅನುತ್ಪಾದಕ ಜಾನುವಾರುಗಳನ್ನು ಸರಕಾರ ಮಾರುಕಟ್ಟೆ ಬೆಲೆಗಳಲ್ಲಿ ಖರೀದಿಸಬೇಕು, ಜಾನುವಾರು ವ್ಯಾಪಾರದ ಹಕ್ಕು ಮತ್ತು ಆಹಾರದ ಹಕ್ಕನ್ನು ರಕ್ಷಿಸಬೇಕು ಎಂದು ಆಗ್ರಹಿಸಿ ಪ್ರತಿಭಟನಾ ಧರಣಿ ನಡೆಸಿತು.

ಎಐಕೆಎಸ್ ಅಧ್ಯಕ್ಷ ಹಾಗೂ ನಾಲ್ಕು ಬಾರಿ ರಾಜಸ್ತಾನ ವಿಧಾನಸಭಾ ಸದಸ್ಯರಾಗಿದ್ದ ಆಮ್ರ ರಾಮ್ ನೇತೃತ್ವ ವಹಿಸಿದ್ದರು. ಹರ್ಯಾಣ, ರಾಜಸ್ತಾನ ಮತ್ತು ಉತ್ತರಪ್ರದೇಶದ ನೂರಾರು ರೈತರಲ್ಲದೆ ಪೆಹ್ಲೂ ಖಾನ್ ತಾಯಿ ಮತ್ತು ಹಲ್ಲೆಗೊಳಗಾದವರ ಕುಟುಂಬಗಳ ಇತರ ಸದಸ್ಯರು ಹಾಗೂ ಅವರ ಹಳ್ಳಿಯ ಇತರರೂ ಇದರಲ್ಲಿ ಭಾಗವಹಿಸಿದ್ದರು. ರೈತ, ಕೃಷಿಕೂಲಿಕಾರ, ವಿದ್ಯಾರ್ಥಿ, ಯುವಜನ , ಆದಿವಾಸಿಗಳು, ದಲಿತರು, ಕಾರ್ಮಿಕರ ಮತ್ತು ಇತರ ಜನವಿಭಾಗಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಎಐಕೆಎಸ್ ಪ್ರಧಾನ ಕಾರ್ಯದರ್ಶಿ ಹನ್ನನ್ ಮೊಲ್ಲ ಪ್ರತಿಃಟನೆಯಲ್ಲಿ ಭಾಗವಹಿಸಿದ್ದವರ ಪರವಾಗಿ 3ಲಕ್ಷ ರೂ.ಗಳ ಒಂದು ಚೆಕ್ಕನ್ನು ಪೆಹ್ಲೂ ಖಾನ್ ತಾಯಿ ಅಂಗೂರಿ ಬೇಗಂಗೆ ಮತ್ತು 50,000 ರೂ.ಗಳ ಚೆಕ್ಕನ್ನು ಗಂಭೀರವಾಗಿ ಗಾಯಗೊಂಡಿರುವ ಅಜ್ಮತ್ ಖಾನ್ ಅವರಿಗೆ ನೀಡಿದರು.

ಪ್ರತಿಭಟನಾ ಧರಣಿಯನ್ನು ಉದ್ದೇಶಿಸಿ ಹನ್ನನ್ ಮೊಲ್ಲರವರಲ್ಲದೆ, ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮತ್ತು ಸುಭಾಷಿಣಿ ಅಲಿ ಹಾಗೂ ಇತರ ಎಡಪಕ್ಷಗಳು ಮತ್ತು ಸಂಘಟನೆಗಳ ಹಿರಿಯ ಮುಖಂಡರಾದ ಅತುಲ್ ಕುಮಾರ್ ಅಂಜನ್ನ ಡಿ..ರಾಜ ಮುಂತಾದವರು ಮಾತಾಡಿದರು.

ಇದಕ್ಕೆ ಮೊದಲು, ಎಪ್ರಿಲ್ 16ರಂದು ಪೆಹ್ಲೂ ಖಾನ್ ಕುಟುಂಬದ ಸ್ವಗ್ರಾಮ ಜೈಸಿಂಗ್‌ಪುರದಲ್ಲಿ ಸುಮಾರು 3000 ಮಂದಿ ಭಾಗವಹಿಸಿದ್ದ ಒಂದು ದೊಡ್ಡ ಸಂತಾಪ ಸಭೆ ನಡೆಯಿತು. ಈ ಕಗ್ಗೊಲೆ ಮತ್ತು ಹೀನಕೃತ್ಯ ನಡೆದು ಎರಡು ವಾರಗಳಾದರೂ, ವೀಡಿಯೋಗಳಲ್ಲಿ ಹಲ್ಲೆ ಮಾಡಿದ ವಿಹೆಚ್‌ಪಿ ಮತ್ತು ಭಜರಂಗ ದಳದ ಮಂದಿಗಳು ಯಾರೆಂದು ಗುರುತಿಸಬಹುದಾದರೂ ಇದುವರೆಗೂ ಯಾರನ್ನು ಬಂಧಿಸಿಲ್ಲ. ಹರ್ಯಾಣ ಭಿಜೆಪಿ ಸರಕಾರದ ಪರವಾಗಿ ಯಾರೂ ಈ ಕುಟುಂಬಗಳನ್ನು ಸಂತೈಸಲೂ ಬಂದಿಲ್ಲ. ಆದರೆ ರೈತ ಆಂದೋಲನ ಈ ಕುಟುಂಬಗಳಿಗೆ ನ್ಯಾಯ ಒದಗಿಸಲು ಕೈಲಾದ್ದನ್ನೆಲ್ಲ ಮಾಡುತ್ತದೆ ಎಂದು ಸಭೆಯಲ್ಲಿ ಘೋಷಿಸಲಾಯಿತು.

ಇದು ಹಿಂದು-ಮುಸ್ಲಿಂ ಅಥವ ಹಿಂದು-ದಲಿತ ಪ್ರಶ್ನೆಯಲ್ಲ, ಇದು ಒಂದು ಕೃಷಿ ಪ್ರಶ್ನೆ, ಇದರ ಮೇಲೆ ಹೋರಾಟ ತೀವ್ರಗೊಳ್ಳುತ್ತದೆ ಎಂದಿರುವ ಎಐಕೆಎಸ್ ಮುಖಂಡರು ಎಪ್ರಿಲ್30 ಅಥವ ಅದರ ಮೊದಲು ದೇಶಾದ್ಯಂತ ಕೋಮು ಸೌಹಾರ್ದ ಸಭೆಗಳನ್ನು ಸಂಘಟಿಸಲಾಗುವುದು, ಮತ್ತು ಪೆಹ್ಲೂ ಖಾನ್ ಕುಟುಂಬ ಪರಿಹಾರ ನಿಧಿಗೆ ಹಣ ಸಂಗ್ರಹ ಮಾಡಲಾಗುವುದು ಎಂದು ಹೇಳಿದ್ದಾರೆ.

ಮಾನವ ಗುರಾಣಿಯಾಗಿ ಕಾಶ್ಮೀರಿ ಯುವಕನ ಬಳಕೆ ಅತ್ಯಂತ ಆಕ್ರೋಶಕಾರಿ ಇದಕ್ಕೆ ಹೊಣೆಯಾದವರನ್ನು ಶಿಕ್ಷಿಸಬೇಕು-ಸಿಪಿಐ(ಎಂ) ಪೊಲಿಟ್‌ಬ್ಯುರೊ

ಕಾಶ್ಮೀರದಲ್ಲಿ ಕೇಂದ್ರೀಯ ಭದ್ರತಾ ಪಡೆಗಳ ಜೀಪಿಗೆ ಒಬ್ಬ ಯುವಕನನ್ನು ಕಟ್ಟಿ ಹಾಕಿ ಹತ್ತಾರು ಹಳ್ಳಿಗಳಲ್ಲಿ ಪ್ರದರ್ಶಿಸಲಾಯಿತು ಎಂಬ ವರದಿ ವ್ಯಾಪಕ ಆಕ್ರೋಶವನ್ನು ಉಂಟು ಮಾಡಿದೆ. ಆತನನ್ನು ಕಲ್ಲೆಸೆಯುವವರಿಗೆ ಎದುರಾಗಿ ಮಾನವ ಗುರಾಣಿಯಾಗಿ ಬಳಸಲಾಯಿತು ಎನ್ನಲಾಗಿದೆ. 26ವರ್ಷದ ಫರೂಕ್ ಅಹ್ಮದ್ ದರ್ ಕಾಶ್ಮೀರಿ ಶಾಲುಗಳಿಗೆ ಕಸೂತಿ ಹಾಕುವ ಕೆಲಸ ಮಾಡುವ ಯುವಕ. ತಾನು ಎಂದೂ ಕಲ್ಲೆಸೆಯುವ ಕೆಲಸ ಮಾಡಿಲ್ಲ ಎಂದು ಆತ ಮಾಧ್ಯಮಗಳಿಗೆ ಹೇಳಿದ್ದಾನೆ.

ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿಗಳು ಈ ಬಗ್ಗೆ ತನಿಖೆ ಮಾಡಲಾಗುವುದು ಎಂದು ಪ್ರಕಟಿಸಿರುವರಾದರೂ, ಒಬ್ಬ ಕಾಶ್ಮೀರಿ ಯುವಕನನ್ನು ಮಿಲಿಟರಿ ಜೀಪಿಗೆ ಕಟ್ಟಿ 8-10 ಹಳ್ಳಿಗಳಲ್ಲಿ ಪ್ರದರ್ಶಿಸಿರುವ ಆಕ್ರೋಶಕಾರಿ ಕೃತ್ಯವನ್ನು ನಡೆಸಿದವರು ಇದಕ್ಕೆ ಉತ್ತರ ಕೊಡುವಂತೆ ಮಾಡಬೇಕಾಗಿದೆ ಮತ್ತು ಅವರನ್ನು ಶಿಕ್ಷಿಸಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಚುನಾವಣಾ ಕರ್ತವ್ಯವನ್ನು ನಿಭಾಯಿಸುತ್ತಿದ್ದ ಸಿಆರ್‌ಪಿಎಫ್ ಸಿಬ್ಬಂದಿಯನ್ನು ಕಲ್ಲೆಸೆಯುವವರು ಕೆಣಕುವ ಮತ್ತು ಹಲ್ಲೆ ಮಾಡುವ ಒಂದು ವಿಡಿಯೋ ಸಾಮಾಜಿಕ ಮಾಧ್ಯಮಗಲಲ್ಲಿ ಹರಿದಾಡಿದ್ದರಿಂದ ಎದ್ದ ಕ್ರೋಧದ ಹಿನ್ನೆಲೆಯಲ್ಲಿ ಈ ಘಟನೆ ನೆಡೆದಿದೆ ಎನ್ನಲಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನಿಸಿದೆ.

ಕುಲಭೂಷಣ್ ಜಾಧವ್ ಮರಣದಂಡನೆ ಪ್ರಕರಣ: ಪಾಕಿಸ್ತಾನ ಸರಕಾರದ ನಿಲುವಿಗೆ ಎಸ್‌ಎಫ್‌ಐ ಖಂಡನೆ

ಭಾರತದ ಮಾಜಿ ನೌಕಾಪಡೆ ಸಿಬ್ಬಂದಿ ಕುಲಭೂಷಣ್ ಜಾಧವ್ ಅವರಿಗೆ ಪಾಕಿಸ್ತಾನದ ವಿರುದ್ಧ ಬೇಹುಗಾರಿಕೆ ಆರೋಪದ ಮೇಲೆ ಎಪ್ರಿಲ್10ರಂದು ಮರಣದಂಡನೆ ವಿಧಿಸಿರುವ ಬಗ್ಗೆ ಎಸ್‌ಎಫ್‌ಐ ಕೇಂದ್ರ ಕಾರ್ಯಕಾರಿ ಸಮಿತಿ ಆತಂಕ ವ್ಯಕ್ತಪಡಿಸಿದೆ. ಜಾಧವ್‌ರೊಡನೆ ರಾಜತಾಂತ್ರಿಕ ಸಂಪರ್ಕಕ್ಕೆ ಅವಕಾಶ ಮಾಡಿಕೊಡಬೇಕೆಂಬ ಭಾರತ ಸರಕಾರದ ಕೋರಿಕೆಯನ್ನು ಪಾಕಿಸ್ತಾನ ಸರಕಾರ ತಿರಸ್ಕರಿಸಿರುವುದನ್ನು ಅದು ಖಂಡಿಸಿದೆ.

ಜಾಧವ್ ವಿಚಾರಣೆಯ ಸಮಸ್ತ ವಿಧಾನ ಅತ್ಯಂತ ಗುಟ್ಟಾಗಿ ನಡೆದಿದ್ದು, ಇದರಲ್ಲಿ ಬಹಳಷ್ಟು ಕಾನೂನಾತ್ಮಕ ಲೋಪ-ದೋಷಗಳಿವೆ ಎಂದು ವಿಭಿನ್ನ ಟಿಪ್ಪಣಿಗಾರರು ಎತ್ತಿ ತೋರಿದ್ದಾರೆ. ಈ ಪ್ರಕರಣವನ್ನು ಎರಡೂ ದೇಶಗಳಲ್ಲಿ ಬಲಪಂಥೀಯ ಶಕ್ತಿಗಳು ಪರಸ್ಪರ ವೈರತ್ವವನ್ನು ಬಡಿದೆಬ್ಬಿಸಲು ಬಳುಸುತ್ತಿವೆ. ಭಾರತದ ಜೈಲುಗಳಲ್ಲಿರುವ ಯುದ್ಧ ಕೈದಿಗಳೊಂದಿಗೆ ಅಂತಹುದೇ ವ್ಯವಹಾರ ನಡೆಸಬೇಕು ಎಂಬ ಕೂಗು ಕರ್ಕಶಗೊಳ್ಳುತ್ತಿದೆ. ಆದರೆ ಇಂತಹ ದಾರಿ ಎರಡು ದೇಶಗಳ ನಡುವೆ ರಾಜತಾಂತ್ರಿಕ ಪ್ರಯತ್ನಗಳನ್ನು ಹಳಿ ತಪ್ಪಿಸುತ್ತವೆ ಎಂದಿರುವ ಎಸ್‌ಎಫ್‌ಐ, ಪಾಕಿಸ್ತಾನ ಸರಕಾರ ಸರಿಯಾದ ಕಾನೂನಿನ ಪ್ರಕ್ರಿಯೆಯನ್ನು ಅನುಸರಿಸಬೇಕು ಎಂದು ಆಗ್ರಹಿಸಿದೆ.

ಭಾರತ ಸರಕಾರ ಕುಲ್ಭೂಷಣ ಜಾಧವ್‌ಗೆ ನ್ಯಾಯ ಒದಗಿಸಲು ಎಲ್ಲ ಲಭ್ಯ ರಾಜತಾಂತ್ರಿಕ ದಾರಿಗಳನ್ನು ಬಳಸಿಕೊಳ್ಳಬೇಕು ಎನ್ನುತ್ತ ಎಸ್‌ಎಫ್‌ಐ, ಜಾಧವ್ ಅವರ ಕುಟುಂಬ ಮತ್ತು ಮಿತ್ರರ ದುಃಖದ ಈ ಸಂದರ್ಭದಲ್ಲಿ ಅವರೊಡನೆ ಇರುವುದಾಗಿ ಹೇಳಿದೆ.

ಬೆಳ್ಳಂದೂರಿನ ಎಚ್ಚರಿಕೆ ಗಂಟೆ

ಸಂಪಾದಕೀಯ

ಬೆಳ್ಳಂದೂರಿನ ಕೆರೆಯಲ್ಲಿ ನೊರೆ ಮತ್ತು ಬೆಂಕಿ ಕಾಣಿಸಿಕೊಂಡಿದೆ. ಬೆಳ್ಳಂದೂರು ಮಾತ್ರವಲ್ಲ, ವರ್ತೂರು ಕೆರೆಯಲ್ಲಿ ನೊರೆಹಾವಳಿ, ನಗರದ ಘನತ್ಯಾಜ್ಯ ನಿರ್ವಹಣೆಯಿಂದ ಹೊರವಲಯದಲ್ಲಿ ಸೃಷ್ಟಿಸಿದ ತೀವ್ರ ಮಾಲಿನ್ಯ, ಚರಂಡಿಗುಂಡಿಗೆ ಇಳಿಸಲಾದ ಪೌರಕಾರ್ಮಿಕರ ಸಾವುಗಳು, ಮೈಸೂರಿನ ಹೊರವಲಯದಲ್ಲಿ ಹರ್ಷಲ್ ಎಂಬ ಬಾಲಕನನ್ನು ಬಲಿತೆಗೆದುಕೊಂಡ ಕೆಮಿಕಲ್ ತ್ಯಾಜ್ಯ–ಇತ್ತೀಚೆಗೆ ಇಂತಹ ಹಲವು ಪ್ರಕರಣಗಳು ವರದಿಯಾಗಿವೆ. ಇವೆಲ್ಲಾ ಒಂದು ಪ್ರಮುಖ ವಿಷಯದತ್ತ ಬೊಟ್ಟು ಮಾಡುತ್ತಿವೆ. ಪರಿಸರ–ಸ್ನೇಹಿ, ಸುರಕ್ಷಿತ ಮತ್ತು ಸುಸ್ಥಿರ ಅಭಿವೃದ್ಧಿ ಪರಿಕಲ್ಪನೆ ಎಲ್ಲಾ ಅಭಿವೃದ್ಧಿ ಯೋಜನೆಗಳ ಭಾಗವಾಗಬೇಕು. ಅದಕ್ಕೆ ಬೇಕಾದ ತಂತ್ರಜ್ಞಾನ, ಪರಿಕರಗಳು, ಪರಿಣತಿಯಲ್ಲಿ ಪ್ರಜ್ಞಾಪೂರ್ವಕ ಹೂಡಿಕೆ ಮಾಡಬೇಕು. ಇಲ್ಲದಿದ್ದರೆ ಗಂಭೀರ ಅನಾಹುತಗಳು ಕಾದಿವೆ ಎಂಬ ಎಚ್ಚರಿಕೆ ಗಂಟೆಯನ್ನು ಈ ಪ್ರಕರಣಗಳು ಬಾರಿಸುತ್ತಿವೆ.

ಬೆಳ್ಳಂದೂರಿನ ಕೆರೆಗಳ ಸರಣಿಗೆ ನಿತ್ಯ 50 ಕೋಟಿ ಲೀಟರ್ ಕಲುಷಿತ ನೀರು ಸೇರುತ್ತಿದೆ. ಜಲಮಂಡಳಿ ಈ ನೀರನ್ನು ಸಂಸ್ಕರಿಸಿ ಬಿಡದಿರುವುದೇ ಇದಕ್ಕೆ ಕಾರಣ. ಕೆರೆಗಳ ನೈಸರ್ಗಿಕ ಸಂಸ್ಕರಣಾ ಸಾಮರ್ಥ್ಯ ಮೀರಿ ಕೊಳಚೆ ನೀರು ಅವುಗಳ ಉದರ ಸೇರುತ್ತಿದೆ. ರಾಸಾಯನಿಕಗಳಾದ ನೈಟ್ರೋಜನ್, ಕಾರ್ಬನ್, ಸೀಸ ಕೊಳಚೆ ನೀರಿನೊಂದಿಗೆ ಸೇರಿ ಕೆರೆಗಳನ್ನು ಕಲುಷಿತಗೊಳಿಸಿವೆ. ಕೋರಮಂಗಲ, ಚಲ್ಲಘಟ್ಟ, ಬೆಳ್ಳಂದೂರು ಕಣಿವೆಗಳ ಕೆರೆಗಳು ಒಂದಕ್ಕೊಂದು ಅಂತರ ಸಂಪರ್ಕ ಹೊಂದಿವೆ. ಈ ಕಣಿವೆಗಳ ಬೈಯಪ್ಪನಹಳ್ಳಿ, ಹಲ್ಸೂರು, ಕಸವನಹಳ್ಳಿ, ಕೈಕೊಂಡ್ರಹಳ್ಳಿ, ದೊಡ್ಡನೆಕ್ಕುಂದಿ, ವಿಭೂತಿಪುರ, ಕುಂದಲಹಳ್ಳಿ, ಚಿನ್ನಪ್ಪನಹಳ್ಳಿ, ಅಗರ, ಬೆಳ್ಳಂದೂರು ಮತ್ತು ವರ್ತೂರು ಕೆರೆಗಳು ಒಂದು ತುಂಬಿದ ಮೇಲೆ ಮತ್ತೊಂದಕ್ಕೆ ನೀರು ಹನಿಸುವ ನೈಸರ್ಗಿಕ ವ್ಯವಸ್ಥೆ ಇದೆ. ಹತ್ತೊಂಬತ್ತು ಕೆರೆಗಳು ಕೋಡಿ ಬಿದ್ದರೆ ಆ ನೀರು ಬೆಳ್ಳಂದೂರು ಕೆರೆ ಸೇರುತ್ತದೆ. ಕೆರೆ ಮಲಿನಗೊಳ್ಳತೊಡಗಿದ್ದು 1970ರ ದಶಕದಿಂದ. 2000ರ ಬಳಿಕ ಸಮಸ್ಯೆ ಗಂಭೀರ ಸ್ವರೂಪ ತಾಳಿತು. ಮಾಲಿನ್ಯ ಹೆಚ್ಚಳದಿಂದ ಪದೇ ಪದೇ ನೊರೆ ಸಮಸ್ಯೆ ಕಾಣಿಸಿಕೊಳ್ಳುತ್ತಿದ್ದ ಈ ಕೆರೆಯಲ್ಲಿ 2015ರ ಮೇನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಇತ್ತೀಚೆಗೆ ಮತ್ತೆ ದಟ್ಟ ಹೊಗೆ ಕಾಣಿಸಿಕೊಂಡಿತ್ತು.

ಈ ಕೆರೆ ಪುನರುಜ್ಜೀವನದ ರೂಪರೇಷೆ ತಯಾರಿಸಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ನೇತೃತ್ವದ ತಜ್ಞರ ಸಮಿತಿ ಯನ್ನು ಕಳೆದ ವರ್ಷ ರಚಿಸಲಾಗಿತ್ತು. ಕೆರೆ ಪುನರುಜ್ಜೀವನಕ್ಕೆ ಏನೆಲ್ಲ ಕ್ರಮ ಕೈಗೊಳ್ಳಬೇಕು. ಇದರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಜಲಮಂಡಳಿ, ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಗಳ ಜವಾಬ್ದಾರಿಗಳೇನು ಎಂಬುದನ್ನು ಈ ಸಮಿತಿ ಸ್ಪಷ್ಟಪಡಿಸಿದೆ. ಆದರೂ, ಕೆರೆಯ ಸ್ಥಿತಿಯಲ್ಲಿ ಈವರೆಗೆ ಹೆಚ್ಚಿನ ಬದಲಾವಣೆ ಆಗಿಲ್ಲ. ದಶಕಗಳ ಹಿಂದೆ ಸಮಸ್ಯೆಯನ್ನು ಬಗೆಹರಿಸುವ ಸುವರ್ಣ ಅವಕಾಶ ಜಲಮಂಡಳಿಗೆ ಲಭ್ಯವಾಗಿತ್ತು. ಆಗ ಮಂಡಳಿ ನಿರ್ಲಕ್ಷ್ಯ ಮಾಡಿತ್ತು. ಹೀಗಾಗಿ ಸಮಸ್ಯೆ ಬೆಟ್ಟದಷ್ಟಾಗಿದೆ. ಈಗ ತರಾತುರಿಯಲ್ಲಿ ಯೋಜನೆ ರೂಪಿಸುತ್ತಿದೆ. ಇದನ್ನು ಅನುಷ್ಠಾನ ಮಾಡಲು ಕನಿಷ್ಠ ರೂ.200 ಕೋಟಿಯಾದರೂ ಬೇಕು ಎನ್ನಲಾಗಿದೆ.

ನಗರದ ಹಿತ ಹಾಗೂ ನಾಗರಿಕರ ಬೇಡಿಕೆ ಎರಡನ್ನೂ ಕಡೆಗಣಿಸಿ ಬಿಲ್ಡರ್ಗಳ ಜತೆ ಶಾಮೀಲಾಗಿದ್ದನ್ನು ಹಲವು ಸಲ ಬಯಲುಗೊಳಿಸಿದ್ದರೂ ಆ ಪರಿಪಾಠವನ್ನು ಬಿಬಿಎಂಪಿ ಮುಂದುವರಿಸಿತ್ತು. ಪರಿಸರ ಸೂಕ್ಷ್ಮ ವಲಯ ಎಂಬ ಘೋಷಣೆ ಮಾಡಲಾದ ಕೆರೆ ಸುತ್ತಲಿನ ಪ್ರದೇಶದಲ್ಲೇ ಸರ್ಕಾರದ ವಿವಿಧ ಏಜೆನ್ಸಿಗಳು ನಿಯಮಾವಳಿ ಉಲ್ಲಂಘಿಸಿ ಬಿಲ್ಡರ್ಗಳ ಪರ ನಿಂತಿದ್ದವು. ಇದಕ್ಕೆ ಸಂಬಂಧ ಪಟ್ಟ ಎಲ್ಲಾ ಸಂಸ್ಥೆಗಳು – ಕೆರೆ ಅಭಿವೃದ್ಧಿ ಪ್ರಾಧಿಕಾರ ಬಿಡಿಎ, ಜಲಮಂಡಳಿ, ಕೇಂದ್ರ ಪರಿಸರ ಸಚಿವಾಲಯ, ಮಾಲಿನ್ಯ ನಿಯಂತ್ರಣ ಮಂಡಳಿ, ಬಿಬಿಎಂಪಿ ಹಾಗೂ ರಾಜ್ಯ ಸರ್ಕಾರದ ಮಾಮೂಲು ವಿಳಂಬ ನೀತಿ ಹಾಗೂ ತೀವ್ರ ನಿರ್ಲಕ್ಷ ಪ್ರದರ್ಶಿಸಿವೆ. ಕೆರೆಯ ಸುತ್ತಲು ಇರುವ 585 ಕೈಗಾರಿಕೆಗಳ ಮಾಲಿನ್ಯ ಸಂಸ್ಕರಣೆಗೆ ತಕ್ಕ ಕ್ರಮಗಳಿಗೆ ಬಾಧ್ಯ ಮಾಡದೆ, ಈಗ ಈ ಘಟಕಗಳನ್ನು ಮುಚ್ಚುವ ತೀವ್ರ ಕ್ರಮಕ್ಕೆ ಮಾಲಿನ್ಯ ನಿಯಂತ್ರಣ ಮಂಡಳಿ ಹೊರಟಿದೆ.

ಬಿಬಿಎಂಪಿ ಒಂದು ಹೆಜ್ಜೆ ಮುಂದೆ ಹೋಗಿ, "ಎನ್ಜಿಟಿಯು ಮೇಲ್ನೋಟಕ್ಕೆ ಒಂದು ಅರೆ ನ್ಯಾಯಿಕ ಸಂಸ್ಥೆಯಾಗಿದ್ದು, ಕಾನೂನು ರೂಪಿಸುವ ಯಾವುದೇ ಅಧಿಕಾರವನ್ನು ಹೊಂದಿಲ್ಲ. ಆದರೆ, ಬಿಬಿಎಂಪಿಯು ರಾಜ್ಯ ಸರ್ಕಾರವು ಶಾಸನಬದ್ಧವಾಗಿ ರೂಪಿಸುವ ಕಾನೂನುಗಳನ್ನು ಪಾಲಿಸುವ ಸಂಸ್ಥೆಯಾಗಿದೆ' ಎಂಬ ಅರ್ಥದ ಆಂತರಿಕ ಸುತ್ತೋಲೆಯನ್ನು ಹೊರಡಿಸಿತ್ತು. ಬೆಂಗಳೂರಿನ ವಿವಿಧೆಡೆ ಇರುವ ಕೆರೆಗಳ ಸಂರಕ್ಷಣೆ ನಿಟ್ಟಿನಲ್ಲಿ ಒತ್ತುವರಿ ತಡೆದು ಜಲಾನಯನ ಪ್ರದೇಶ ಮರೆ ಮಾಡುವ ನಿರ್ಮಾಣ ಕಾಮಗಾರಿ ತಡೆಯುವಂತೆ ಹಾಗೂ ಬಫರ್ ವಲಯದ ಸಂರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಬಿಬಿಎಂಪಿಗೆ ಅನೇಕ ಬಾರಿ ಸೂಚಿಸಿ ನೀಡಿರುವ ನಿರ್ದೇಶನವನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿಲ್ಲ ಎಂದು ಅಧಿಕಾರಿಗಳಿಗೆ ಸೂಚ್ಯವಾಗಿ ತಿಳಿಸುವುದೇ ಆಂತರಿಕ ಸುತ್ತೋಲೆಯ ಉದ್ದೇಶ ಎನ್ನಲಾಗಿದೆ. 'ಕೆರೆಕಟ್ಟೆಗಳಿಂದ 75 ಮೀಟರ್ ಅಂತರದಲ್ಲಿ ಕಟ್ಟಡ ನಿರ್ಮಿಸುವಂತಿಲ್ಲ' ಎಂದು ತಿಳಿಸಿದ್ದ ಎನ್ಜಿಟಿಯು, ತನ್ನ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿತ್ತು. ಆದರೆ, ಮಾರ್ಚ್ 30ರಂದು ಸುತ್ತೋಲೆ ಹೊರಡಿಸಿದ್ದ ಬಿಬಿಎಂಪಿ ಆಯುಕ್ತರು, ಕಾನೂನು ಇಲಾಖೆಯ ಅಭಿಪ್ರಾಯದ ಪ್ರಕಾರ ಸಕ್ಷಮ ಪ್ರಾಧಿಕಾರವೊಂದರಿಂದ ಈಗಾಗಲೇ ಬಡಾವಣೆಗಳ ವಿನ್ಯಾಸಕ್ಕೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸಿರುವ ನಿವೇಶನಗಳಲ್ಲಿ ನಿರ್ಮಾಣ ಕಾಮಗಾರಿ ನಡೆದಿದೆ. ಅಲ್ಲದೆ, ವಿನ್ಯಾಸಕ್ಕೆ ಅನುಮೋದನೆ ಪಡೆದಿರುವ ಬಡಾವಣೆಗಳಲ್ಲಿನ ಖಾಲಿ ಇರುವ ನಿವೇಶನಗಳಲ್ಲಿ ಕಟ್ಟಡ ನಿರ್ಮಿಸಬಹುದಾಗಿದೆ. ಎನ್ಜಿಟಿ ವಿಧಿಸಿರುವ ಷರತ್ತು ಇವುಗಳಿಗೆ ಅನ್ವಯವಾಗುವುದಿಲ್ಲ ಎಂದೂ ಅದರಲ್ಲಿ ಉಲ್ಲೇಖಿಸಿದ್ದರು.

'ಇಂತಹ ಸುತ್ತೋಲೆ ಹೊರಡಿಸಿದ್ದಕ್ಕೆ ಸಮರ್ಪಕ ಕಾರಣ ನೀಡದಿದ್ದರೆ ಅಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಿಕೊಳ್ಳುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ' ಎಂಬ ಎಚ್ಚರಿಕೆಯನ್ನೂ ಹಸಿರು ನ್ಯಾಯಮಂಡಳಿ ನೀಡಿತ್ತು. ಹಸಿರು ನ್ಯಾಯಮಂಡಳಿಯ ಕಾರ್ಯವೈಖರಿಯನ್ನೇ ಪ್ರಶ್ನಿಸುವಂತಹ ಆಂತರಿಕ ಸುತ್ತೋಲೆಯನ್ನು ಹೊರಡಿಸಿದ್ದಕ್ಕೆ ಬಿಬಿಎಂಪಿ ಅಧಿಕಾರಿಯು ಬೇಷರತ್ ಕ್ಷಮೆ ಯಾಚಿಸಿದ್ದರಿಂದ ಬೀಸುವ ದೊಣ್ಣೆಯಿಂದ ಪಾರಾದರು.

ಈಗ ಪರಿಸ್ಥಿತಿ ಎಷ್ಟು ಗಂಭೀರವಾಗಿದೆಯೆಂದರೆ, ರಾಷ್ಟ್ರೀಯ ಹಸಿರು ನ್ಯಾಯಮಂಡಳಿ, ಸಂಬಂಧ ಪಟ್ಟ ಎಲ್ಲಾ ಸಂಸ್ಥೆಗಳ ಮೇಲೆ ಚಾಟಿ ಬೀಸಬೇಕಾಗಿ ಬಂದಿದೆ. ಹಲವು ಬಾರಿ ಕೆರೆಯ ಗಂಭೀರ ಮಾಲಿನ್ಯ ನಿವಾರಣೆಗೆ ಮತ್ತು ಪುನರುಜ್ಜೀವನಕ್ಕೆ ಕ್ರಮ ಕೈಗೊಳ್ಳಬೇಕು ಎಂದು ಹಲವು ಗಡುವುಗಳನ್ನು ನೀಡಿದ್ದರೂ ಈ ಸಂಸ್ಥೆಗಳು ಅನುಸರಿಸುತ್ತಾ ಬಂದ ವಿಳಂಬ ನೀತಿ ಮತ್ತು ಉದ್ಧಟತನದಿಂದ ರೊಚ್ಚಿಗೆದ್ದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಒಂದು ತಿಂಗಳೊಳಗೆ ಈ ಕೆರೆ ಪುನರುಜ್ಜೀವನ ಮಾಡಬೇಕು ಎಂದು ಎಪ್ರಿಲ್ 19ರಂದು ಆದೇಶ ಹೊರಡಿಸಿದೆ. 'ಎರಡು ವಾರಗಳಲ್ಲಿ ಕೆರೆಯ ಸಮಗ್ರ ಸುಧಾರಣೆ ಮಾಡುವುದು ಕಷ್ಟಸಾಧ್ಯ. ಹೀಗಾಗಿ ನ್ಯಾಯಮಂಡಳಿಗೆ ಪತ್ರ ಬರೆಯಲು ರಾಜ್ಯ ಸರ್ಕಾರ ಯೋಜಿಸಿದೆ.

ಈಗಲಾದರೂ ರಾಜ್ಯ ಸರಕಾರ, ಬಿಬಿಎಂಪಿ ಮತ್ತು ಸಂಬಂಧಪಟ್ಟ ಸಂಸ್ತೆಥಗಳು ಎಚ್ಚತ್ತು ಬೆಳ್ಳಂದೂರಿನ ಮತ್ತು ಇತರ ಕೆರೆ ನಿರ್ವಹಣೆ ಬಗ್ಗೆ ಸಮಗ್ರ ನೀತಿಯನ್ನು ಅನುಸರಿಸಿ ಜಾರಿ ಮಾಡಬೇಕಾಗಿದೆ. ಆದರೆ ಈ ವರೆಗಿನ ಅವರ ರೆಕಾರ್ಡ್ ನೋಡಿದರೆ, ಈ ನೆಪದಲ್ಲಿ ಕೆಲವು ಕಾಂಟ್ರಾಕ್ಟುಗಳನ್ನು ಕೊಡುವುದು ಬಿಟ್ಟು ಅವು ಗಂಭೀರ ಕ್ರಮ ಕೈಗೊಳ್ಳುವ ಸಾಧ್ಯತೆ ಕಡಿಮೆ. ಪರಿಸರ–ಸ್ನೇಹಿ, ಸುರಕ್ಷಿತ ಮತ್ತು ಸುಸ್ಥಿರ ಅಭಿವೃದ್ಧಿ ಪರಿಕಲ್ಪನೆ ಎಲ್ಲಾ ಅಭಿವೃದ್ಧಿ ಯೋಜನೆಯ ಭಾಗವಾಗಬೇಕು ಎಂಬ ಹಕ್ಕೊತ್ತಾಯ ನವ–ಉದಾರವಾದಿ ನೀತಿಯನ್ನು ವಿರೋಧಿಸುವ ದುಡಿಯುವ ಜನರ ಪರ್ಯಾಯ ಅಭಿವೃದ್ಧಿ ನೀತಿಯ ಭಾಗವಾಗಬೇಕಾಗಿದೆ.

ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧಾರ

ಜನತೆಯ ನಾಲ್ಕು ಪ್ರಮುಖ ಪ್ರಶ್ನೆಗಳ ಮೇಲೆ ಪ್ರಚಾರಾಂದೋಲನ ಮತ್ತು ಹೋರಾಟಗಳು

ಚುನಾವಣಾ ಸುಧಾರಣೆ ಮತ್ತು ಕೋಮುವಾದೀ ಆಕ್ರಮಣಗಳ ವಿರುದ್ಧ ಸಮಾವೇಶಗಳು

ಎಪ್ರಿಲ್ 18 ಮತ್ತು 19ರಂದು ನಡೆದ ಸಿಪಿಐ(ಎಂ) ಕೇಂದ್ರ ಸಮಿತಿಯ ಸಭೆ ರೇಷನ್ ಕಡಿತ, ಮನರೇಗ ಕಡಿತ, ಖಾಸಗೀಕರಣದ ಧಾವಂತ ಮತ್ತು ರೈತರಿಗೆ ಕನಿಷ್ಟ ಬೆಂಬಲ ಬೆಲೆಗಳ ಪ್ರಶ್ನೆಗಳ ಮೇಲೆ ಮೇ ತಿಂಗಳ ಉತ್ತರಾರ್ಧದಲ್ಲಿ ವ್ಯಾಪಕ ಪ್ರಚಾರಾಂದೋಲನ ಮತ್ತು ಹೋರಾಟಗಳನ್ನು ನಡೆಸಬೇಕೆಂದು ನಿರ್ಧರಿಸಿದೆ.

ಸಿಪಿಐ(ಎಂ)ನ ರಾಜ್ಯ ಸಮಿತಿಗಳು ಜನಗಳ ಮೇಲೆ ಅಪಾರ ಯಾತನೆಗಳನ್ನು ಹೇರುತ್ತಿರುವ ಸರಕಾರದ ಇತ್ತೀಚಿನ ನಿರ್ಧಾರಗಳ ವಿರುದ್ಧ ಪ್ರತಿಭಟನಾ ಕಾರ್ಯಾಚರಣೆಗಳ ಒಂದು ವಾರದ ಕಾರ್ಯಕ್ರಮಗಳನ್ನು ಸಂಘಟಿಸುತ್ತವೆ.

ಈ ಕಾರ್ಯಕ್ರಮಗಳು ಈ ಕೆಳಗಿನವುಗಳ ಮೇಲೆ ಗಮನ ಕೇಂದ್ರೀಕರಿಸುತ್ತವೆ:

1. ಆಹಾರ ಭದ್ರತಾ ಕಾಯ್ದೆಗೆ ವ್ಯತಿರಿಕ್ತವಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ಪೂರೈಕೆಗಳಲ್ಲಿ ತೀವ್ರ ಕಡಿತ, ಸಕ್ಕರೆ ಮತ್ತು ಸೀಮೆಎಣ್ಣೆ ಒದಗಿಸುವುದನ್ನು ನಿಲ್ಲಿಸಿರುವುದು.
2. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ನೀಡಬೇಕಾದ್ದನ್ನು ಕೂಡ ತೀವ್ರವಾಗಿ ಕಡಿತಗೊಳಿಸಲಾಗಿದೆ. ಕೇಂದ್ರ ಸರಕಾರ ಪೂರ್ಣ 100ದಿನಗಳ ಉದ್ಯೋಗ ಒದಗಿಸಲು ಬೇಕಾಗುವಷ್ಟು ಹಣವನ್ನು ರಾಜ್ಯ ಸರಕಾರಗಳಿಗೆ ಒದಗಿಸಬೇಕು.
3. ಖಾಸಗೀಕರಣದತ್ತ ಧಾವಂತ ಈಗಾಗಲೇ ಇಳಿಮುಖವಾಗಿರುವ ಉದ್ಯೋಗ ಪರಿಸ್ಥಿತಿಯನ್ನು ಪ್ರತಿಕೂಲವಾಗಿ ತಟ್ಟುತ್ತದೆ. ಇದು ಉದ್ಯೋಗ ಮೀಸಲಾತಿಯಿಂದ ಪರಿಶಿಷ್ಟ ಜಾತಿಗಳು, ಬುಡಕಟ್ಟುಗಳು, ಒಬಿಸಿಗಳು ಮತ್ತು ವಿಕಲಾಂಗರಿಗೆ ಸಿಗುತ್ತಿದ್ದ ಅಲ್ಪ–ಸ್ವಲ್ಪ ಸೌಲಭ್ಯವನ್ನೂ ತಟ್ಟುತ್ತದೆ. ಆದ್ದರಿಂದ ಖಾಸಗೀಕರಣವನ್ನು ನಿಲ್ಲಿಸಬೇಕು.
4. ರೈತರಿಗೆ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟು ಕನಿಷ್ಟ ಬೆಂಬಲ ಬೆಲೆಯನ್ನು ಖಾತ್ರಿಗೊಳಿಸುವ ಬಿಜೆಪಿಯ ಚುನಾವಣಾ ಭರವಸೆಯನ್ನು ಕೇಂದ್ರ ಸರಕಾರ ಜಾರಿ ಮಾಡುವಂತೆ ಬಲವಂತ ಪಡಿಸಿದರೆ ಮಾತ್ರವೇ ಆಳವಾಗುತ್ತಿರುವ ಕೃಷಿ ಸಂಕಟವನ್ನು ಎದುರಿಸಲು ಸಾಧ್ಯ. ಈ ನಡುವೆ, ಸಾಲಮನ್ನಾಗಳು ಸ್ವಲ್ಪ ತಕ್ಷಣದ ಪರಿಹಾರ ನೀಡಬಹುದಷ್ಟೇ. ಆದರೆ ಅದು ಕೃಷಿ ಬಿಕ್ಕಟ್ಟಿಗೆ ಮತ್ತು ಭಾರತೀಯ ರೈತರ ಕಲ್ಯಾಣಕ್ಕೆ ದೀರ್ಘಕಾಲೀನ ಪರಿಹಾರವಲ್ಲ.

ಈ ನಾಲ್ಕು ಪ್ರಶ್ನೆಗಳ ಮೇಲೆ ಸಿಪಿಐ(ಎಂ) ಒಂದು ಪ್ರಚಾರಾಂದೋಲನ ಮತ್ತು ದೇಶಾದ್ಯಂತ ಜನತೆಯ ಹೋರಾಟಗಳನ್ನು ಆರಂಭಿಸುತ್ತದೆ.

ಕೇಂದ್ರ ಸಮಿತಿ ಎರಡು ಪ್ರತ್ಯೇಕ ಸಮಾವೇಶಗಳನ್ನು ನಡೆಸಲು ಮುತುವರ್ಜಿ ವಹಿಸಬೇಕೆಂದು ಕೇಂದ್ರ ಸಮಿತಿ ನಿರ್ಧರಿಸಿದೆ.

ಒಂದು, ಚುನಾವಣಾ ಸುಧಾರಣೆಗಳು ಮತ್ತು ಇತ್ತೀಚೆಗೆ ರಾಜಕೀಯ ನಿಧಿ ನೀಡಿಕೆಯ ಬಗ್ಗೆ ಮಾಡಿರುವ ಬದಲಾವಣೆಗಳನ್ನು ಕುರಿತಂತೆ. ಈ ಬದಲಾವಣೆಗಳು ರಾಜಕೀಯ ಭ್ರಷ್ಟಾಚಾರವನ್ನು ಕಾನೂನುಬದ್ಧ ಗೊಳಿಸಿವೆಯಷ್ಟೇ.

ಕೇಂದ್ರ ಸಮಿತಿ ಆರೆಸ್ಸೆಸ್–ಬಿಜೆಪಿಯ ಹೊಸದಾದ ಆಕ್ರಮಣಶೀಲತೆಯ ಹಿನ್ನೆಲೆಯಲ್ಲಿ ಒಂದು ಕೋಮುವಾದ–ವಿರೋಧಿ ಸಮಾವೇಶ ನಡೆಸಲು ಮುತುವರ್ಜಿ ವಹಿಸಬೇಕು ಎಂದೂ ನಿರ್ಧರಿಸಿದೆ.

ಕಾಶ್ಮೀರ ಸನ್ನಿವೇಶ ಕುರಿತಂತೆ ಸಮಾನಮನಸ್ಕ ರಾಜಕೀಯ ಶಕ್ತಿಗಳು, ಬುದ್ಧಿಜೀವಿಗಳು ಮತ್ತು ಸಾಮಾಜಿಕ ಆಂದೋಲನಗಳ ಒಂದು ಸಮಾವೇಶವನ್ನು ನಡೆಸಲು ಕೂಡ ಕೇಂದ್ರ ಸಮಿತಿ ನಿರ್ಧರಿಸಿದೆ.

ಮಹಿಳಾಮಸೂದೆ ಕುರಿತಂತೆ ಬಿಜೆಪಿ ಸರಕಾರದ ವಿಶ್ವಾಸಘಾತವನ್ನು ಪ್ರತಿಭಟಿಸಲು ಮುಂಬರುವ ಸಂಸತ್ತಿನ ಮಳೆಗಾಲದ ಅಧಿವೇಶನದ ಮೊದಲು ಈ ಮಸೂದೆಯನ್ನು ಅಂಗೀಕರಿಸ ಬೇಕೆಂದು ಆಗ್ರಹಿಸಿ ಒಂದು ದಿನದ ಪ್ರತಿಭಟನೆಗೆ ಕರೆ ನೀಡಲು ಕೇಂದ್ರ ಸಮಿತಿ ನಿರ್ಧರಿಸಿದೆ.

ಕೇಂದ್ರ ಸಮಿತಿ ಈ ಸಭೆಯಲ್ಲಿ ಚರ್ಚಿಸಿದ ಇತರ ವಿಷಯಗಳು ಹೀಗಿವೆ:



ಹೆಚ್ಚುತ್ತಿರುವ ಕೋಮುವಾದಿ ದಾಳಿಗಳು

ಉತ್ತರಪ್ರದೇಶ ಮತ್ತು ಉತ್ತರಾಖಂಡದಲ್ಲಿ ಚುನಾವಣಾ ವಿಜಯಗಳ ನಂತರ ಆರೆಸ್ಸೆಸ್–ಬಿಜೆಪಿ ವಿವಿಧ ರೀತಿಗಳಲ್ಲಿ ಕೋಮುವಾದಿ ಧ್ರುವೀಕರಣವನ್ನು ತೀಕ್ಷ್ಣಗೊಳಿಸುವ ಉದ್ದೇಶದ ತಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸಿದ್ದಾರೆ. ನರೇಂದ್ರ ಮೋದಿ ಪ್ರಧಾನ ಮಂತ್ರಿಯಾದ ನಂತರದ ಮೂರು ವರ್ಷಗಳಲ್ಲಿ ಆರೆಸ್ಸೆಸ್ ದೇಶದ ವಿವಿಧ ಭಾಗಗಳಲ್ಲಿ ತ್ವರಿತವಾಗಿ ಹರಡಿದೆ.

ಈ ವಿಜಯ ಮತ್ತು ನಂತರ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅಧಿಕಾರ ವಹಿಸಿಕೊಂಡ ಮೇಲೆ ಹೊಸದೊಂದು ಕೋಮುವಾದಿ ದಾಳಿಯನ್ನು ಹರಿಯ ಬಿಡಲಾಗಿದೆ. ಕಾನೂನುಬಾಹಿರ ಕಸಾಯಿಖಾನೆಗಳನ್ನು ಮುಚ್ಚುವ ಹೆಸರಿನಲ್ಲಿ ಉತ್ತರಪ್ರದೇಶದಲ್ಲಿ ಮಾಂಸ ವ್ಯಾಪಾರದ ಮೇಲೆ ಆಕ್ರಮಣಗಳು 24 ಲಕ್ಷಕ್ಕಿಂತಲೂ ಹೆಚ್ಚು ಜನಗಳ ಜೀವನಾಧಾರಗಳನ್ನು ಪ್ರತಿಕೂಲವಾಗಿ ತಟ್ಟಿವೆ ಮತ್ತು ಮಾಂಸ ರಫ್ತುಗಳ ಮೇಲೆ ಬಹಳ ದುಷ್ಪರಿಣಾಮ ಬೀರಿದೆ. ಭಾರತದ ಮಾಂಸ ರಫ್ತುಗಳ ಆದಾಯಗಳಲ್ಲಿ

ಪುಟ 7 ಕ್ಕೆ



ಕೇಂದ್ರ ಸರ್ಕಾರ ರೈತರ ವಿರೋಧಿಯಾಗಿದೆ: ಡಾ. ವಿಜು ಕೃಷ್ಣನ್

'ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳು ಮುಗಿಯುತ್ತಾ ಬಂದರೂ ಈ ದೇಶದ ರೈತರಿಗೆ ಅವರು ಚುನಾವಣೆ ಸಂದರ್ಭದಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲಾ. ದೇಶಕ್ಕೆ ಅನ್ನ ನೀಡುವ ರೈತರು ನೇಣಿಗೆ ಕೊರಳು ಒಡ್ಡುವಂತಹ ನೀತಿಗಳನ್ನು ಸರ್ಕಾರ ಅನುಸರಿಸುತ್ತಿದೆ. ಕಾಂಗ್ರೆಸ್‌ನ ಭ್ರಷ್ಟಾಚಾರ ಮತ್ತು ಆಡಳಿತ ವಿರೋಧಿ ಅಲೆಯ ಮೇಲೆ ತೇಲಿ ಅಧಿಕಾರ ಹಿಡಿದ ಬಿಜೆಪಿ ದೇಶದ ಹಿತವನ್ನು ಮರೆತು ಬಂಡವಾಳಶಾಹಿಗಳನ್ನು ರಕ್ಷಿಸುತ್ತಿದೆ.' ಎಂದು ಅಖಿಲ ಭಾರತ ಕಿಸಾನ ಸಭಾದ ಜಂಟಿ ಕಾರ್ಯದರ್ಶಿ ಡಾ. ವಿಜು ಕೃಷ್ಣನ್ ಹೇಳಿದ್ದಾರೆ.

ಅಂಕೋಲಾದ ಸ್ವಾತಂತ್ರ್ಯ ಸಂಗ್ರಾಮ ಸ್ಮಾರಕ ಭವನದಲ್ಲಿ ಭಾನುವಾರ ಏರ್ಪಡಿಸಲಾಗಿದ್ದ ಕರ್ನಾಟಕ ರಾಜ್ಯ ಪ್ರಾಂತ ರೈತ ಸಂಘದ ಉತ್ತರ ಕನ್ನಡ ಜಿಲ್ಲಾ 4ನೇ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸಾಹಿತಿ ವಿಷ್ಣು ನಾಯ್ಕ ಮಾತನಾಡಿ, ಉಳ್ಳವರ ಪರವಾದ ಪ್ರಭುತ್ವದ ವಿರುದ್ದ ಹೋರಾಡುವವರು ಗಟ್ಟಿ ಗುಂಡಿಗೆ ಹೊಂದರಬೇಕು. ಸೈದ್ಧಾಂತಿಕ ಬದ್ದತೆ, ಶಿಸ್ತಿನ ಸಂಘಟನಾ ಶಕ್ತಿಯಿಂದ ಮಾತ್ರ ಭೂಹೀನರಿಗೆ ಹಕ್ಕು ಪತ್ರಗಳನ್ನು ಕೊಡಿಸಲು ಸಾಧ್ಯವಿದೆ ಎಂದರು.

ಹೋರಾಟಗಾರ ರವೀಂದ್ರನಾಥ ನಾಯ್ಕ ಮಾತನಾಡಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಅತಿಕ್ರಮಣ ಸಕ್ರಮಕ್ಕಾಗಿ ಸಲ್ಲಿಸಲಾಗಿದ್ದ 24 ಸಾವಿರ ಅರ್ಜಿಗಳಲ್ಲಿ ಸರ್ಕಾರ ಕೇವಲ 8803 ಅರ್ಜಿಗಳನ್ನು ಮಾತ್ರ ಮಾನ್ಯ ಮಾಡಿದೆ. ಉಳಿದ ಅರ್ಜಿಗಳನ್ನು ಏಕೆ ತಿರಸ್ಕರಿಸಲಾಗಿದೆ ಎಂಬ ಮಾಹಿತಿಯನ್ನು ಅಧಿಕಾರಿಗಳು ನೀಡುತ್ತಿಲ್ಲಾ ಎಂದರು.

ಪ್ರಾಂತ ರೈತ ಸಂಘ ಜಿಲ್ಲಾ ಸಮಿತಿ ಕಾರ್ಯದರ್ಶಿ ಶಾಂತಾರಾಮ ನಾಯಕ ಅಧ್ಯಕ್ಷತೆ ವಹಿಸಿದ್ದರು. ಭೂಮಿ ಹೋರಾಟಗಾರರ ಸಂಗಮ ಕಾರ್ಯಕ್ರಮ ನಡೆಯಿತು. ರಾಜ್ಯ ಉಪಾಧ್ಯಕ್ಷ ಜಿ.ಸಿ. ಬಯ್ಯಾರೆಡ್ಡಿ, ವಿವಿಧ ಸಂಘಟನೆಗಳ ಮುಖಂಡರಾದ ಸಿ.ಆರ್. ಶಾನಭಾಗ, ಚಂದ್ರಕಾಂತ ಕೊಚರೆಕರ್, ಯಮುನಾ ಗಾಂವಕರ, ಶ್ರೀಧರ ಶೆಟ್ಟಿ ಭಟ್ಕಳ, ವೀರಭದ್ರ ನಾಯ್ಕ ಸಿದ್ದಾಪುರ ಮುಂತಾದವರು ಮಾತನಾಡಿದರು. ಶ್ಯಾಮನಾಥ ನಾಯ್ಕ ಸ್ವಾಗತಿಸಿದರು. ಸಮ್ಮೇಳನ ಪ್ರಾರಂಭದಲ್ಲಿ ಹಳಿಯಾಳದ ರೈತ ಮುಖಂಡ ಆರ್.ಎಂ. ಮುಲ್ಲಾ ಸಂಘಟನೆಯ ಧ್ವಜಾರೋಹಣ ನೆರವೇರಿಸಿದರು. ಗೌರೀಶ ನಾಯಕ ವಂದಿಸಿದರು. ಸಮ್ಮೇಳನಕ್ಕೂ ಮುನ್ನ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಾವಿರಾರು ರೈತರಿಂದ ಮೆರವಣಿಗೆ ನಡೆಯಿತು.

ಸಮಾರೋಪ: ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಮಾರಕವಾದ ಕಸ್ತೂರಿ ರಂಗನ್ ವರದಿ ವಿರೋಧಿಸಿ ಜಿಲ್ಲೆಯಾದ್ಯಂತ ಸಹಿ ಸಂಗ್ರಹ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ಏಪ್ರಿಲ್ 26ರಂದು ಮನವಿ ಸಲ್ಲಿಸಲು ಕರ್ನಾಟಕ ಪ್ರಾಂತ ರೈತ ಸಂಘದ 4ನೇ ಜಿಲ್ಲಾ ಮಟ್ಟದ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ತೀರ್ಮಾನಿಸಲಾಯಿತು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಭವನದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಈ ಕುರಿತು ಚರ್ಚೆ ನಡೆಸಿ ನಿರ್ಧರಿಸಲಾಯಿತು. ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿ ಇದ್ದು, ಕುಡಿಯುವ ನೀರು, ದನಕರುಗಳಿಗೆ ಮೇವು ಒದಗಿಸಲು ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುವ ನಿರ್ಣಯಿಸಲಾಗಿದೆ ಎಂದು ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ ಶಾಂತಾರಾಮ ನಾಯಕ ಹೇಳಿದರು.

ಕರ್ನಾಟಕ ಪ್ರಾಂತ ರೈತ ಸಂಘದ 4ನೇ ಜಿಲ್ಲಾ ಸಮ್ಮೇಳನ ನಗರದಲ್ಲಿ 2 ದಿನ ನಡೆದು ಇಂದು ಸಮಾರೋಪಗೊಂಡಿತು. ಸಮ್ಮೇಳನದಲ್ಲಿ ಪ್ರಮುಖ ನಿರ್ಣಯಗಳನ್ನು ಪಾಸುಮಾಡಲಾಯಿತು. ಗ್ರಾಮೀಣ ಪರದೇಶದ ಅಭಿವೃದ್ಧಿಗೆ ಮಾರಕವಾದ ಕಸ್ತೂರಿ ರಂಗನ್ ವರದಿ ವಿರೋಧಿಸಿ ಜಿಲ್ಲೆಯಾದ್ಯಂತ ಸಹಿ ಸಂಗ್ರಹ ನಡೆಸಿ ಜಿಲ್ಲಾಧಿಕಾರಿಗಳ ಮೂಲಕ ಸರಕಾರಕ್ಕೆ ಏಪ್ರಿಲ್ 26ರಂದ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು.

ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿ ಇದ್ದು, ಕುಡಿಯುವ ನೀರು, ದನಕರುಗಳಿಗೆ ಮೇವು ಒದಗಿಸಲು ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಸಮ್ಮೇಳನದಲ್ಲಿ ಅಂಗೀಕರಿಸಲಾಯಿತು. ಅರಣ್ಯ ಅತಿಕ್ರಮಣ ಸಮಸ್ಯೆಗೆ ಜಂಟಿ ಹೋರಾಟ, ರೇಷನ್ ಸಮರ್ಪಕ ವಿತರಣೆಗೆ ಒತ್ತಾಯ, ಹಾಲಕ್ಕಿ, ಕುಣಬಿ, ಕುಂಬ್ರಿ ಮರಾಠಿ, ಗೌಳಿ ಸಮುದಾಯ ಬುಡಕಟ್ಟಿಗೆ ಸೇರಿಸಲು ಆಗ್ರಹ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗೆ ವಿಶೇಷ ಅನುದಾನ ನೀಡಲು ಒತ್ತಾಯಿಸಿ ಸಮ್ಮೇಳನ ತೀರ್ಮಾನಗಳನ್ನು ತೆಗೆದುಕೊಂಡಿತು.

ಈ ಸಂದರ್ಭದಲ್ಲಿ ಸಮ್ಮೇಳನದ ಸ್ವಾಗತ ಸಮಿತಿ ಕಾರ್ಯದರ್ಶಿ ಗೌರೀಶ ನಾಯಕ, ಪ್ರಮುಖರಾದ ರಮಾನಂದ ನಾಯಕ ಅಚವೆ, ಸಂತೋಷ ನಾಯ್ಕ, ದೇವಿ ಗೌಡ ಇತರರಿದ್ದರು.

ನೂತನ ಜಿಲ್ಲಾ ಸಮಿತಿ ಆಯ್ಕೆ :

ಕರ್ನಾಟಕ ಪ್ರಾಂತ ರೈತ ಸಂಘದ 4ನೇ ಜಿಲ್ಲಾ ಸಮ್ಮೇಳನದಲ್ಲಿ ನೂತನ ಜಿಲ್ಲಾಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಶಾಂತಾರಾಮ ನಾಯಕ, ಕಾರ್ಯದರ್ಶಿಯಾಗಿ ಶ್ಯಾಮನಾಥ ನಾಯ್ಕ, ಕದ್ರಾ ಆಯ್ಕೆಯಾದರು. ಉಪಾಧ್ಯಕ್ಷರಾಗಿ ತಿಮ್ಮಪ್ಪ ಗೌಡ ಹೊನ್ನಾವರ, ಗೌರೀಶ ನಾಯಕ ಅಂಕೋಲಾ, ಆರ್. ಎಂ. ಮುಲ್ಲಾ ಹಳಿಯಾಳ, ಸಹಕಾರ್ಯದರ್ಶಿಗಳಾಗಿ ಪ್ರೇಮಾನಂದ ವೇಳಿಪ ಜೋಯಿಡಾ, ಶ್ರೀಧರ ಶೆಟ್ಟಿ ಭಟ್ಕಳ, ಗಣೇಶ ಭಂಡಾರಿ ಹೊನ್ನಾವರ, ಸಂತೋಷ ನಾಯ್ಕ ಅಂಕೋಲಾ ಆಯ್ಕೆಯಾದರು.

ನಾಳಿನ ಕಾರ್ಯಕ್ರಮಗಳು

- **ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮ್ಮೇಳನ ಏಪ್ರಿಲ್ 25–27,** ಹುಬ್ಬಳ್ಳಿ
- **"ಕಾರ್ಮಿಕ ಹಕ್ಕುಗಳ ರಕ್ಷಣೆ, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ರಕ್ಷಣಾ ಯೋಜನೆಗಳ ಜಾರಿ ಹಾಗು**
- **ಸಾರ್ವಜನಿಕ ಉದ್ಧಿಮೆಗಳ ಉಳಿವಿಗಾಗಿ"** ಮೇ 1 2017 ಕಾರ್ಮಿಕ ದಿನಾಚರಣೆ
- **"ಮುಸ್ಲಿಂ ಯುವ ಸಮಾವೇಶ್"** ಮೇ 14–15, ಡಿವೈಎಫ್ಐ ಮಂಗಳೂರು
- **"ಕೆಲಸದ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ"** ಕಾರ್ಯಾಗಾರ, ಜೂನ್ 3–4, ಬೆಂಗಳೂರು
- **ಕಟ್ಟಡ ಕಾರ್ಮಿಕರ ರಾಜ್ಯ ಸಮ್ಮೇಳನ** ಜುಲೈ 1–2, ಕುಂದಾಪುರ

ಸ್ವಾಮಿನಾಥನ್ ವರದಿ ಜಾರಿ ಸಾಧ್ಯವಿಲ್ಲವೆಂದ ಮೋದಿ ಸರಕಾರ

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೆ ತರುತ್ತಿರುವ ಕೃಷಿ ಮತ್ತು ರೈತ ವಿರೊಧಿ ನೀತಿಗಳಿಂದಾಗಿ ರೈತರು ವ್ಯವಚಿಸಾಯವನ್ನು ತೊರೆಯುವಂತೆ ಮಾಡಲಾಗುತ್ತಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಯು.ಬಸವರಾಜು ಹೇಳಿದರು. ನಗರದ ಸಂಸ್ಕೃತ ಭವನದಲ್ಲಿ ಇಂದು ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಜಿಲ್ಲಾ ಸಮಿತಿ ಆಯೋಜಿಸಿದ್ದ ಬಗರ್ ಕುಕುಂ ಸಾಗುವಳಿ ಸಕ್ರಮಕ್ಕಾಗಿ, ತೆಂಗು ಬೆಳೆ ನಾಶಕ್ಕೆ ಕೇರಳ ಮಾದರಿಯಲ್ಲಿ ಪರಿಹಾರಕ್ಕಾಗಿ ಒತ್ತಾಯಿಸಿ, ಕೃಷಿ ಸಮಗ್ರ ಅಭಿವೃದ್ಧಿಗೆ ಆಗ್ರಹಿಸಿ, ರೈತರ ಆತ್ಮಹತ್ಯೆ ತಡೆಗಟ್ಟಲು ಎಲ್ಲಾ ರೀತಿ ಸಾಲ ಮನ್ನಾಕ್ಕೆ ಒತ್ತಾಯಿಸಿ ನಡೆದ ಜಿಲ್ಲಾ ರೈತ ಸಮಾವೇಶವನ್ನು ಉಧ್ಘಾಟಿಸಿ ಮಾತನಾಡುತ್ತಿದ್ದ ಅವರು ವ್ಯವಸಾಯಕ್ಕಾಗಿ ಮಾಡಿದ ಸಾಲವನ್ನು ತೀರಿಸಲಾಗದೆ ರೈತರು ಆತ್ಮಹತ್ಯೆಯ ದಾರಿಯನ್ನು ಹಿಡಿಯುತ್ತಿದ್ದಾರೆ. ಚುನಾವಣಾ ಸಂದರ್ಭದಲ್ಲಿ ಕೃಷಿ ಉತ್ಪನ್ನಗಳಿಗೆ ಬೆಲೆ ನಿಗದಿಮಾಡಲು ಉತ್ಪಾದನಾ ವೆಚ್ಚಕ್ಕೆ ಶೇಖಡ 50 ರಷ್ಟನ್ನು ಸೇರಿಸಿ ಡಾ.ಸ್ವಾಮಿನಾಥನ್ ರವರ ಆಯೋಗದ ಶಿಫಾರಸ್ಸಿನಂತೆ ಬೆಲೆ ನಿಗದಿ ಮಾಡಲಾಗುವುದು ಎಂದು ಹೇಳಿ ಅಧಿಕಾರಕ್ಕೆ ಬಂದ ಕೂಡಲೇ ಸ್ವಾಮಿನಾಥನ್ ವರದಿ ಶಿಫಾರಸ್ಸುಗಳನ್ನು ಜಾರಿಗೆ ತರಲು ಸಾಧ್ಯವಿಲ್ಲವೆಂದು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಇದು ಅತ್ಯಂತ ರೈತ ವಿರೊಧಿ ನೀತಿಯಾಗಿದ್ದು ರೈತರನ್ನು ಮತ್ತಂದಷ್ಟು ಸಂಕಷ್ಟಕ್ಕೆ ತಳ್ಳುತ್ತಿದೆ ಎಂದರು.

ಕೃಷಿ ಮತ್ತು ರೈತ ಸಮುದಾಯ ಇಷ್ಟೊಂದು ಬಿಕ್ಕಟ್ಟಿನಲ್ಲಿರುವಾಗ ರೈತರನ್ನು ಜಾಗೃತ ಮೂಡಿಸಿ ಸಂಘಟಿಸುವ ಮೂಲಕ ಚಳುವಳಿಗಳನ್ನು ಕಟ್ಟಿದರೆ ಮಾತ್ರ ರೈತ ವಿರೊಧಿ ನೀತಿಗಳನ್ನು ಹಿಮ್ಮೆಟ್ಟಿಸಲು ಸಾಧ್ಯ ಎಂದು ರೈತ ಸಮುದಾಯಕ್ಕೆ ಕರೆ ನೀಡಿದರು.

ಮುಖ್ಯ ಅಥಿತಿಗಳಾಗಿ ಭಾಗವಹಿಸಿದ ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಧರ್ಮೇಶ್ ಮಾತನಾಡಿ ಇವು ರೈತರ ಆತ್ಮಹತ್ಯೆಗಳಲ್ಲ ಬದಲಾಗಿ ಸರ್ಕಾರಿ ಪ್ರಾಯೋಜಿತ ಕೊಲೆಗಳು ಏಕೆಂದರೆ ಸರ್ಕಾರದ ನೀತಿಗಳಿಂದಾಗಿಯೇ ರೈತರು ಆತ್ಮಹತ್ಯೆಯ ದಾರಿಯನ್ನು ಹಿಡಿಯುವಂತಾಗಿದೆ ಎಂದರು. ಹಲವು ವರ್ಷಗಳಿಂದ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ನಡೆದ ಹೋರಾಟದಿಂದಾಗಿ ಇಂದು ರಾಜ್ಯ ಸರ್ಕಾರ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮ ಮಾಡಲು ಮುಂದಾಗಿದೆ ಎಂದರು.

ಸಮಾವೇಶದಲ್ಲಿ ತೆಂಗುಬೆಳೆಗಾರರ ಹೋರಾಟ ಸಮಿತಿಯ ಸಂಚಾಲಕರಾದ ಎಚ್.ಎಸ್. ಮಂಜುನಾಥ್, ಕೆಪಿಆರ್‌ಎಸ್ ಸಕಲೇಶಪುರ ತಾಲ್ಲೂಕು ಕಾರ್ಯದರ್ಶಿ ಗಿಡ್ಡೇಗೌಡ ಹಾಜರಿದ್ದರು ಸಮಾವೇಶದ ಅಧ್ಯಕ್ಷತೆಯನ್ನ ಕೆಪಿಆರ್‌ಎಸ್‌ನ ಜಿಲ್ಲಾ ಅಧ್ಯಕ್ಷರಾದ ಎಚ್.ಆರ್.ನವೀನ್‌ಕುಮಾರ್ ವಹಿಸಿದ್ದರು ಕಾರ್ಯದರ್ಶಿಗಳಾದ ವಸಂತ್‌ಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು, ಮುಖಂಡರಾದ ಶಿವಲಿಂಗೇಗೌಡ ಸ್ವಾಗತಿಸಿದರು.

ಸಮಾವೇಶದಲ್ಲಿ ಫೆಬ್ರವರಿ 25 ರಿಂದ 27 ರವರೆಗೆ ಹುಬ್ಬಳ್ಳಿಯಲ್ಲಿ ನಡೆಯುವ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು. ಮತ್ತು ಈ ಕೆಳಗಿನ ನಿರ್ಣಯಗಳನ್ನು ಕೈಗೊಳ್ಳಲಾಯಿತು.

- ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮ ಮಾಡಲು ಕೋರಿ



- ಜಿಲ್ಲೆಯ ಎಲ್ಲಾ ಕೆರೆಗಳಿಗೂ ನೀರು ತುಂಬಿಸುವ ಶಾಶ್ವತ ಯೋಜನೆಗಾಗಿ ಒತ್ತಾಯಿಸಿ
- ತೆಂಗು ಬೆಳೆ ನಾಶಕ್ಕೆ ಕೇರಳ ಮಾದರಿಯಲ್ಲಿ ಪರಹಾರಕ್ಕೆ ಒತ್ತಾಯಿಸಿ ನಿರ್ಣಯ
- ರೈತರ ಎಲ್ಲಾ ರೀತಿಯ ಸಾಲಗಳನ್ನು ಮನ್ನಾ ಮಾಡಿ ಡಾ.ಸ್ವಾಮಿನಾಥನ್ ಆಯೋಗದಂತೆ ಕೃಷಿ ಬೆಲೆ ನಿಗದಿಗೆ ಒತ್ತಾಯಿಸಿ

ವಿಜಯಪುರ ಪೌರ ಕಾರ್ಮಿಕರು ವೇತನವಿಲ್ಲದೆ 3 ತಿಂಗಳಿನಿಂದ ಹೈರಾಣು

ಪಾಲಿಕೆಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರು, ಹಳೆ ಮಹಾನಗರ ಪಾಲಿಕೆಯಿಂದ ಪ್ರಾರಂಭಗೊಂಡು ಬಸವೇಶ್ವರ ವೃತ್ತ, ಬಸ್ ನಿಲ್ದಾಣ ಮುಖಾಂತರ ಘೋಷಣೆ ಕೂಗುತ್ತ ಹೊಸ ಮಹಾನಗರ ಪಾಲಿಕೆಯವರೆಗೂ ಪ್ರತಿಭಟನಾ ಮರವಣಿಗೆಯಲ್ಲಿ ಹೋದರು. ಕರ್ನಾಟಕ ರಾಜ್ಯ ಮುನ್ಸಿಪಲ್ ಕಾರ್ಮಿಕರ ಸಂಘ ಸಿ.ಐ.ಟಿ.ಯು ನೇತೃತ್ವದಲ್ಲಿ ಪ್ರತಿಭಟನೆ ಮಾಡಲಾಯಿತು. ಮಹಾನಗರ ಪಾಲಿಕೆ ಪೌರಾಯುಕ್ತ ಹರ್ಷ ಶೆಟ್ಟಿ ಅವರು ವೇತನದ ಚೆಕ್ಕನ್ನು ನೀಡಿದ ನಂತರವೇ ಮುಷ್ಕರವನ್ನು ಹಿಂಪಡೆದರು. ಹಾಗೂ ಇತರೆ ಬೇಡಿಕೆಗಳಿಗಾಗಿ 25–04–2017 ರಂದು ಸಭೆ ಕರೆಯಲು ಆಯುಕ್ತರು ಭರವಸೆ ನೀಡಿದರು.

ಲಕ್ಷ್ಮಣ ಹಂದ್ರಾಳ ಮಾತನಾಡಿ ಪೌರ ಕಾರ್ಮಿಕರು ವೇತನವಿಲ್ಲದೆ ಮೂರು ತಿಂಗಳಿನಿಂದ ಹೈರಾಣಾಗಿದ್ದಾರೆ. ಮಹಾನಗರ ಪಾಲಿಕೆ ಆಯುಕ್ತರು ದಿನಾಂಕ 15–04–2017 ರಂದು ಎರೆಡು ತಿಂಗಳ ವೇತನ ಕೊಡುತ್ತೇನೆ ಎಂದು ಭರವಸೆ ನೀಡಿದ್ದರು. ಆದರೂ ಅವರು ಮಾತಿನಂತೆ ನಡೆದುಕೊಂಡಿಲ್ಲ ಅದರ ಭಾಗವಾಗಿ ಈ ಪ್ರತಿಭಟನೆ ಹಮ್ಮಿಕೊಂಡಿದ್ದು, ಕಾರ್ಮಿಕರ ಬೇಡಿಕೆಗಳಾದ ಈ..ಎಸ್.ಐ ಕಾರ್ಡ ವಿತರಣೆ ಮಾಡಿರುವುದಿಲ್ಲ ಹಾಗೂ 2012 ರಿಂದ ಕಟಾವಣೆಯಾದ ಪಿ.ಎಫ್ (ಭವಿಷ್ಯ ನಿಧಿ) ಕಾರ್ಮಿಕರಿಗೆ ಹಣ ಕಟಾವಣೆ ಮಾಡಿದ ಸರಿಯಾದ ಮಾಹಿತಿಯನ್ನು ನೀಡಿರುವುದಿಲ್ಲ. ಈ ಹಣವನ್ನು ಕಾರ್ಮಿಕರ ಖಾತೆಗೆ ಜಮೇ ಮಾಡಬೇಕು.

ಸೋಮಪ್ಪ ಆಯಟ್ಟಿ ಮಾತನಾಡಿ ಮಹಾನಗರಪಾಲಿಕೆಯಲ್ಲಿ ಕೆಲಸ ಮಾಡುವ ಮನೆ ಮೆನೆ ಕಸತುಂಬುವ ಟಿಪ್ಪರ ಗಾಡಿಯಲ್ಲಿ ಕಾರ್ಮಿಕರಿಗೆ ಸರ್ಕಾರ ನಿಗದಿ ಪಡಿಸಿದ ವೇತನವನ್ನು ನೀಡದೆ ಕಡಿಮೇ ವೇತನವನ್ನು ನೀಡಿ ಕಾರ್ಮಿಕರನ್ನು ಮಹಾನಗರ ಪಾಲಿಕೆ ಹಾಗೂ ಗುತ್ತಿಗೆದಾರರು ವಂಚಿಸುತ್ತಿದ್ದಾರೆ. ಬೆಳಿಗ್ಗೆ ನೀಡುವ ಉಪಹಾರ ಕಳಪೆ ಗುಣಮಟ್ಟದಾಗಿರುತ್ತದೆ. ಇದನ್ನು ಮಹಾನಗರ ಪಾಲಿಕೆಯ ಗಮನಕ್ಕೆ ತಂದರೂ ಮಹಾನಗರ ಪಾಲಿಕೆ ಕಿವುಡಾಗಿದೆ.



ನಿವೇಶನ ರಹಿತರಿಂದ ಶಾಸಕರ ಮನೆ ಚಲೋ



ಭೂಮಿ ಹಕ್ಕಿನ ಹೋರಾಟದ ಅಂಗವಾಗಿ ಮನೆ, ನಿವೇಶನಕ್ಕೆ ಆಗ್ರಹಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಉಡುಪಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಕುಂದಾಪುರ ಶಾಸಕರ ಮನೆ ಚಲೋ ಹೋರಾಟ ಕಾರ್ಯಕ್ರಮವನ್ನು ಹಾಲಾಡಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಹಾಲಾಡಿ ಬಸ್ ನಿಲ್ದಾಣದ ಬಳಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷ ನಿತ್ಯಾನಂದ ಸ್ವಾಮಿ ಮಾತನಾಡಿ, ಕಳೆದ 6 ವರ್ಷಗಳಿಂದ ಹೋರಾಟ ಮಾಡುತ್ತಿದ್ದರೂ ಸರಕಾರ ನಿವೇಶನ ರಹಿತರಿಗೆ ನಿವೇಶನ ನೀಡುತ್ತಿಲ್ಲ. ಈ ಬಗ್ಗೆ ಗ್ರಾಮ ಪಂಚಾಯತ್‌ಗಳು ನಿವೇಶನ ರಹಿತ ಫಲಾನುಭವಿಗಳ ಅಂತಿಮ ಪಟ್ಟಿ ತಯಾರಿಸಿದ್ದರೂ ಅಧಿಕಾರಿಗಳ ಮೇಲೆ ಶಾಸಕರು ಒತ್ತಡ ಹೇರುತ್ತಿಲ್ಲ. ಆದುದರಿಂದ ಶಾಸಕರು ಈ ಕೂಡಲೇ ಇತ್ತ ಗಮನಹರಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಆಗ್ರಹಿಸಿದರು. ನಂತರ ಮನೆ ನಿವೇಶನ ರಹಿತರು ಮೆರವಣಿಗೆ ಮೂಲಕ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿಯವರ ಮನೆಗೆ ತೆರಳಿ ಮನವಿ ಸಲ್ಲಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ಶಾಸಕರು ಈ ಕುರಿತು ಸದನದಲ್ಲಿ ಮಾತನಾಡಿ ತಮ್ಮ ಬೇಡಿಕೆ ಈಡೇರಿಸುವ ಪ್ರಯತ್ನ ಮಾಡಲಾಗುವುದು. ಏಪ್ರಿಲ್ 25 ರೊಳಗೆ ಅಧಿಕಾರಿಗಳ ಜಂಟಿ ಸಭೆ ಕರೆದು ಈ ಬಗ್ಗೆ ಚರ್ಚೆ ನಡೆಸಲಾಗುವುದು ಎಂದು ಭರವಸೆ ನೀಡಿದರು.

ಬೈಂದೂರು ಶಾಸಕರ ಮನೆ ಚಲೋ :

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಮನೆ ನಿವೇಶನಕ್ಕೆ ಆಗ್ರಹಿಸಿ ಬೈಂದೂರು ಶಾಸಕರ ಮನೆ ಚಲೋ ಹೋರಾಟ ಕಾರ್ಯಕ್ರಮವನ್ನು ದಿನಾಂಕ : 18 ಏಪ್ರಿಲ್ 2017 ರ ಮಂಗಳವಾರ ಹಮ್ಮಿಕೊಳ್ಳಲಾಗಿತ್ತು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷ ಯು. ದಾಸಭಂಡಾರಿ, ಇದಕ್ಕೂ ಮೊದಲು ಹೆಮ್ಮಾಡಿ ಪೇಟೆಯಲ್ಲಿ ನಡೆದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದರು. ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಿವೇಶನ ರಹಿತ ಅರ್ಜಿದಾರರು ಶಾಸಕ ಕೆ.ಗೋಪಾಲ ಪೂಜಾರಿ ಮನೆ ಇರುವ ಕಟ್‌ಬೆಲ್ತೂರುವರೆಗೆ 3 ಕಿ.ಮೀ. ಉರಿ ಬಿಸಿಲಿನಲ್ಲೇ ಜಾಥಾ ನಡೆಸಿದ ನಿವೇಶನ ರಹಿತರು ಶಾಸಕರ ಮನೆ ಎದುರಿನ ತೆಂಗಿನ ತೋಟದ ನೆರಳಿನಲ್ಲಿ ವಿಶ್ರಾಂತಿ ಪಡೆದರು. ನಿಗದಿತ ಸಮಯಕ್ಕಿಂತ ಒಂದು ತಾಸು ವಿಳಂಬವಾಗಿ ಆಗಮಿಸಿದ ಶಾಸಕ ಕೆ.ಗೋಪಾಲ ಪೂಜಾರಿ ಅವರು ನಿವೇಶನ ರಹಿತರಿಂದ ಮನವಿ ಸ್ವೀಕರಿಸಿ ಮಾತನಾಡಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇರುವ ಆಕ್ಷೇಪ ರಹಿತ ಸರಕಾರಿ ಭೂಮಿಗಳನ್ನು ಗುರುತಿಸಿ ಬಡವರಿಗಾಗಿ ಕಾಯ್ದಿರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಇದೇ 26 ರಂದು ಕುಂದಾಪುರ ತಹಶೀಲ್ದಾರ್, ಬೈಂದೂರು ವಿಶೇಷ ತಹಶೀಲ್ದಾರ್ ಕಂದಾಯ ಇಲಾಖಾ ಅಧಿಕಾರಿಗಳು, ಪಂಚಾಯತ್ ಪಿಡಿಓಗಳು ಹಾಗೂ ಕೃಷಿ ಕೂಲಿಕಾರರ ಸಂಘದ ಪ್ರತಿನಿಧಿಗಳೊಂದಿಗೆ ಜಂಟಿ ಸಭೆ ನಡೆಸಿ ನಿವೇಶನ ರಹಿತ ಅರ್ಜಿದಾರರ ಸಮಸ್ಯೆ ಪರಿಹಾರ ಕಂಡು ಕೊಳ್ಳುವ ಪ್ರಯತ್ನ ಮಾಡುತ್ತೇನೆ ಎಂದರು.

ಬಹಿರಂಗ ಸಭೆ ಮೊದಲು ಶಾಸಕರು ಹಾಗೂ ಕೃಷಿ ಕೂಲಿಕಾರರ ಸಂಘದ ಪ್ರತಿನಿಧಿಗಳೊಂದಿಗೆ ನಡೆದ ಸಭೆಯಲ್ಲಿ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ, ಮಾತನಾಡಿದರು.

ಸಿಐಟಿಯೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಶಂಕರ ಮುಖಂಡರಾದ ಬಾಲಕೃಷ್ಣ ಶೆಟ್ಟಿ, ಮಹಾಬಲ ವಡೇರ ಹೋಬಳಿ, ಎಚ್. ನರಸಿಂಹ, ಸುರೇಶ್ ಕಲ್ಲಾಗರ, ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಎಚ್. ವಿಠಲ ಪೂಜಾರಿ, ಕವಿರಾಜ್ ಎಸ್. ನಾಗರತ್ನ ನಾಡ, ರಾಜೀವ ಪಡು–ಕೋಣೆ, ಶೀಲಾವತಿ ಪಡುಕೋಣೆ, ಪದ್ಮಾವತಿಶೆಟ್ಟಿ, ಮಾನ್ಸೂರ್ ಇಬ್ರಾಹಿಂ ಮರವಂತೆ, ಸಂತೋಷ ಹೆಮ್ಮಾಡಿ, ಜಗದೀಶ ಆಚಾರ್, ಗಣೇಶ ಮೊಗವೀರ ಬೈಂದೂರು, ಕುಶಲ, ರಮೇಶ ಪೂಜಾರಿ ಗುಲ್ವಾಡಿ, ಸಿಂಗಾರಿ ನಾವುಂದ, ಚಿಕ್ಕ ಮೊಗವೀರ ಗಂಗೊಳ್ಳಿ, ಅರುಣ ಗಂಗೊಳ್ಳಿ, ಶ್ರೀನಿವಾಸ ಪೂಜಾರಿ ಗುಜ್ಜಾಡಿ, ರಾಜೀವ ವಡೇರ ಹೋಬಳಿ, ಕರಿಯದೇವಾಡಿಗ ಕೋಟೇಶ್ವರ, ಮುಂದಾಳತ್ವ ವಹಿಸಿದ್ದರು.



ತುಟ್ಟಿಭತ್ತೆಗೆ ಒತ್ತಾಯಿಸಿ ಬೀಡಿ ಕಾರ್ಮಿಕರ ಬೃಹತ್ ಪ್ರತಿಭಟನೆ

2015 ಎಪ್ರಿಲ್ 1 ರಿಂದ ನೀಡಬೇಕಾದ ರೂಪಾಯಿ 12.75 ಪೈಸೆ ತುಟ್ಟಿಭತ್ತೆಯನ್ನು ಬೀಡಿ ಕಾರ್ಮಿಕರಿಗೆ ಲೆಕ್ಕ ಹಾಕಿ ಕೂಡಲೇ ಪಾವತಿಸಬೇಕೆಂದು ಎಸ್. ಕೆ.ಬೀಡಿ ವರ್ಕರ್ಸ್ ಫೆಡರೇಶನ್ (ಸಿಐಟಿಯು) ನೇತೃತ್ವದಲ್ಲಿ ಬೀಡಿ ಕಾರ್ಮಿಕರು ಬೃಹತ್ ಪ್ರತಿಭಟನಾ ಪ್ರದರ್ಶನ ನಡೆಸಿದರು. ದಿನಾಂಕ 18–04–2017 ರಂದು ಸಹಾಯಕ ಕಾರ್ಮಿಕ ಆಯುಕ್ತರ ಕಚೇರಿ, ಮಂಗಳೂರು ಇವರ ಮುಂದುಗಡೆ ನಡೆದ ಪ್ರತಿಭಟನಾ ಪ್ರದರ್ಶನಗಾರರನ್ನು ಉದ್ದೇಶಿಸಿ ಫೆಡರೇಶನ್ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿಯವರು ಮಾತನಾಡುತ್ತಾ ಕರ್ನಾಟಕ ಸರಕಾರ 2015ರ ತುಟ್ಟಿಭತ್ತೆಯನ್ನು ಕಾರ್ಮಿಕರಿಗೆ ಪಾವತಿಸುವಲ್ಲಿ ಮಾಲೀಕರಿಗೆ ವಿನಾಯಿತಿ ನೀಡಿತ್ತು. ಇದಕ್ಕೆ ಕಾರ್ಮಿಕ ಅಧಿಕಾರಿಗಳೂ ಶಿಫಾರಸು ನೀಡಿರುವುದು ಖೇದಕರ. ಈ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಕಾರ್ಮಿಕ ಸಂಘಟನೆಗಳು ರಾಜ್ಯದ ಉಚ್ಛ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದ್ದು, ನ್ಯಾಯಾಲಯ ಇದನ್ನು ಪುರಸ್ಕರಿಸಿ ಸರಕಾರದ ಆದೇಶವನ್ನು ತಿರಸ್ಕರಿಸಿದೆ. ಆದುದ–ರಿಂದ ಬೀಡಿ ಮಾಲೀಕರು 2015 ರಿಂದ ನೀಡಬೇಕಾದ ತುಟ್ಟಿಭತ್ತೆಯನ್ನು ಕಾರ್ಮಿಕರಿಗೆ ಲೆಕ್ಕಹಾಕಿ ನೀಡಬೇಕೆಂದು ಕಾರ್ಮಿಕ ಅಧಿಕಾರಿಗಳು ನಿರ್ದೇಶನ ನೀಡಬೇಕು. ಅದಕ್ಕಾಗಿ ಕೂಡಲೇ ತ್ರಿಪಕ್ಷೀಯ ಸಂದಾನ ಸಭೆಯನ್ನು ನಿಗದಿಪಡಿಸಬೇಕೆಂದು ಅವರು ಒತ್ತಾಯಿಸಿದರು. ಅವರು ಮುಂದುವರಿದು ವಿಪರೀತ ಬೆಲೆ ಏರಿಕೆಯಾಗಿರುವ ಈ ಸಂದರ್ಭದಲ್ಲಿ ಬೀಡಿ ಕಾರ್ಮಿಕರು ಕಂಗಾಲಾಗಿದ್ದಾರೆ. 2017ರ ತುಟ್ಟಿಭತ್ತೆ ಪಾಯಿಂಟ್ ಕೂಡಾ ತುಂಬಾ ಕಡಿಮೆ ಗೊಳಿಸಿ ಕಾರ್ಮಿಕರಿಗೆ ಮೋಸ ನಡೆದಿರುತ್ತದೆ. ಕಾರ್ಮಿಕರ ಪರ ವಹಿಸಬೇಕಾದ ಸರಕಾರ ಮಾಲಿಕರ ಪರ ನೀತಿಯನ್ನು ಅಳವಡಿಸುತ್ತಿರುವುದು ಖಂಡನೀಯ ಎಂದರು. ಆದಷ್ಟು ಬೇಗ ತುಟ್ಟಿಭತ್ತೆ ಮೊತ್ತವನ್ನು ಬೀಡಿಕಾರ್ಮಿಕರಿಗೆ ವಿತರಿಸದಿದ್ದರೆ ತೀವ್ರತರದ ಹೋರಾಟವನ್ನು ಸಂಘಟಿಸಲಾಗುವುದೆಂದು ಅವರು ಎಚ್ಚರಿಕೆ ನೀಡಿದರು.

ಕಾರ್ಮಿಕ ಸಂಘಟನೆಗಳ ಮುಂದಾಳುಗಳಾದ ಯು.ಬಿ. ಲೋಕಯ್ಯ, ವಸಂತ ಆಚಾರಿ, ರಮಣಿ ಮೂಡಬಿದ್ರಿ, ಪದ್ಮಾವತಿ ಶೆಟ್ಟಿ, ಜಯಂತಿ ಬಿ.ಶೆಟ್ಟಿ, ಸದಾಶಿವ ದಾಸ್ ಮುಂತಾದವರು ಭಾಷಣ ಮಾಡಿದರು.

ಸಹಾಯಕ ಕಾರ್ಮಿಕ ಆಯುಕ್ತರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಮನವಿಯನ್ನು ಸ್ವೀಕರಿಸಿ ಭರವಸೆಯನ್ನು ನೀಡಿದರು.

ಜೆ. ಬಾಲಕೃಷ್ಣ ಶೆಟ್ಟಿ

ಡೊನೇಷನ್ ನಿಯಂತ್ರಣಕ್ಕಾಗಿ 'ಜಿಲ್ಲಾ ಶಿಕ್ಷಣ ರೆಗ್ಯುಲೇಟಿಂಗ್ ಪ್ರಾಧಿಕಾರದ ಸಭೆ ಶಿಕ್ಷಣ ಸಂಸ್ಥೆಗಳಿಗೆ ಜಿಲ್ಲಾಧಿಕಾರಿಗಳ ಎಚ್ಚರಿಕೆ

ಜಿಲ್ಲೆಯಾದ್ಯಂತ ಇರುವ ಖಾಸಗಿ ಶಿಕ್ಷಣ ಸಂಸ್ಥೆಗಳು ಕರ್ನಾಟಕ ಶಿಕ್ಷಣ ಕಾಯಿದೆಯ ನಿಯಮ ಪಾಲಿಸುವಂತೆ ಹಾಗೂ ಅನಧಿಕೃತವಾಗಿ ಹೆಚ್ಚು ಡೊನೇಷನ್ ವಸೂಲಿ ಮಾಡದಂತೆ ಜಿಲ್ಲಾಧಿಕಾರಿಗಳಾದ ಡಾ॥ ಎಂ.ವಿ.ವೆಂಕಟೇಶ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಎಚ್ಚರಿಕೆ ನೀಡಿದರು. ಎಸ್‌ಎಫ್‌ಐ ಹಾವೇರಿ ಜಿಲ್ಲಾ ಸಮಿತಿಯು ಇದೇ ತಿಂಗಳು 5ರಂದು ಜಿಲ್ಲೆಯಾದ್ಯಂತ ಪ್ರತಿಭಟನೆ ನಡೆಸಿ ಡೋನೆಷನ್ ಹಾವಳಿ ತಡೆಗಟ್ಟುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿತ್ತು ಅದರ ಭಾಗವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಜಿಲ್ಲಾ ಉಪನಿರ್ದೇಶಕರಾದ ಎಸ್.ಬಿ.ಪಾಟೀಲ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಖಾಸಗಿ ಶಿಕ್ಷಣ ಸಂಸ್ಥೆ ಹಾಗೂ ಎಸ್‌ಎಫ್‌ಐ ಮುಖಂಡರ ಜಂಟಿ ಸಭೆಯನ್ನು ಜಿಲ್ಲಾಡಳಿತ ಭವನದಲ್ಲಿ ಸಭೆ ಕರೆಯಲಾಗಿತ್ತು.

ಸಬೆಯಲ್ಲಿ ಮಾತನಾಡಿದ ಜಿಲ್ಲಾಧಿಕಾರಿಗಳು ಕರ್ನಾಟಕ ಶಿಕ್ಷಣ ಕಾಯಿದೆಯ ನಿಯಮಗಳ ಬಗ್ಗೆ ವಿವರಣೆಯನ್ನು ನೀಡಿ ಮಾತನಾಡಿದ ಅವರು ನಿಯಮದ ಪ್ರಕಾರ ಡೋನೆಷನ್ ಪಡೆಯಲು ಮಾತ್ರ ಅವಕಾಶವಿದ್ದು ನಿಯಮ ಮೀರಿ ಹೆಚ್ಚಿಗೆ ವಂತಿಗೆಯನ್ನು ಪಡೆಯಬಾರದು, ವಿದ್ಯಾರ್ಥಿಗಳಿಗೆ ಮಾನಸಿಕ ಕಿರುಕುಳ ನೀಡಬಾರದು, ಪೋಷಕರಿಗೆ ಒತ್ತಡ ಹೇರಬಾರದು ಮಕ್ಕಳ ಶಿಕ್ಷಣ ಕಾಯಿದೆ ಪ್ರಕಾರ ಮಗುವಿನ ಪ್ರವೇಶಾತಿ ಸಂದರ್ಭದಲ್ಲಿ ವಿದ್ಯಾರ್ಥಿಯನ್ನು ಹಾಗೂ ಪೋಷಕರಿಗೆ ಯಾವುದೇ ಸಂದರ್ಶನಗಳನ್ನು ನಡಸಬಾರದು, ಪರೀಕ್ಷೆಗಳನ್ನು ನಡೆಸಬಾರದು, ಶಿಕ್ಷಣ ಸಂಸ್ಥೆಯಲ್ಲಿ ಲಭ್ಯವಿರುವ ಸೀಟಗಳ ಕುರಿತು ನೋಟಿಸ್ ಬೋರ್ಡನಲ್ಲಿ ಪರಿಶಿಷ್ಟ ಜಾತಿ \ ಪರಿಶಿಷ್ಟ ಪಂಗಡಗಳು, ಅಲ್ಪಸಂಖ್ಯಾತರ ಹಾಗೂ ಇತರೆ ವಿದ್ಯಾರ್ಥಿಗಳ ಕೋಟಾಗಳ ಕುರಿತು ಮಾಹಿತಿ ಹಾಕಬೇಕು. ನಿಯಮಗಳನ್ನು ಮೀರುವ ಖಾಸಗಿ ಶಿಕ್ಷಣ ಸಂಸ್ಥೆಗೆ 25 ಸಾವಿರ ರೂಪಾಯಿಗಳ ದಂಡ ವಿಧಿಸಲಾಗುವುದು, ಎರಡನೇ ಬಾರಿ ಇದೇ ತಪ್ಪು ಮುಂದುವರೆದರೆ 50 ಸಾವಿರ ರೂಪಾಯಿವರೆಗೆ ದಂಡ ವಿಧಿಸಲಾಗುವದು ಎಂದು ಎಚ್ಚರಿಸಿದರು. ಖಾಸಗಿ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ಸಿಬ್ಬಂದಿಗೆ ಬ್ಯಾಂಕ್ ಖಾತೆಗೆ ಸಂಬಳವನ್ನು ಜಮಾ ಮಾಡಬೇಕು ಎಂದು ತಿಳಿಸಿದರು. ಮಕ್ಕಳ ರಕ್ಷಣೆ ಬಗ್ಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

ಸುಭಾಸ ಎಂ



ಶಾದಿಪುರ ಕೆರೆಯ ಕಾಮಗಾರಿ ಆರಂಭ ಶ್ರಮಿಕ ಕೈಗಳಿಗೆ ಕೆಲಸದ ಆಶಾಕಿರಣ.

20.4.2017 ರಂದು ಚಿಂಚೋಳಿ ತಾಲ್ಲೂಕಿನ ಶಾದಿಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಕೆರೆಯಲ್ಲಿ 321 ಶ್ರಮಿಕರಿಗೆ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿಯಡಿಯಲ್ಲಿ



ಕಾವ್ಂಗಾರಿಂಬ್ಂನ್ಂ ಆರಂಭಿಸಲಾಯಿತು. ಕಳೆದ ನಾಲ್ಕು ದಿನಗಳಿಂದ ಜನವಾದಿ ಮಹಿಳಾ ಸಂಘಟನೆ ಮತ್ತು ಪ್ರಜ್ಞಾ ಕಾನೂನು ಸಲಹಾ ಸಮಿತಿ ಉದ್ಯೋಗ ಖಾತ್ರಿ ಅನುಷ್ಠಾನದ ಅಭಿಯಾನ ನಡೆಸಿ ಶಾದಿಪುರ ಮತ್ತು ವೆಂಕಟಾಪುರ ಗ್ರಾಮ ಪಂಚಾಯತ್ ವ್ಯಾಪ್ತಿಯ ಗ್ರಾಮ ಮತ್ತು ಥಾಂಡಾಗಳಿಂದ ಮೂರುವರೆ ಸಾವಿರದಷ್ಟು ಕಾರ್ಮಿಕರಿಗೆ ಕೆಲಸಕ್ಕಾಗಿ ಅರ್ಜಿಗಳನ್ನು ಸಲ್ಲಿಸಲಾಗಿತ್ತು. ಈ ಹಿನ್ನೆಲೆಯಲ್ಲಿ 321 ಜನರ ಹೆಸರಿಗೆ ಕೆಲಸ ಒದಗಿಸುವ ಯಾದಿಯನ್ನು ಸಿದ್ದಗೊಳಿಸಿ ಎನ್.ಎಂ.ಆರ್. ಸೃಜಿಸಿ ಸಾಮೂಹಿಕವಾಗಿ ಕೆಲಸ ದೊರೆಯುವಂತೆ ಕ್ರಮ ಕೈಗೊಳ್ಳಲಾಗಿತ್ತು. ಶಾದಿಪುರ ವ್ಯಾಪ್ತಿಯ ಕೆರೆಯ ಹೂಳೆತ್ತುವ ಕಾಮಗಾರಿಯನ್ನು 20.4.2017ರಂದು ಉದ್ಘಾಟನೆ ಮಾಡಲಾಯಿತು.

ಸೋವಿಯತ್ ಮತ್ತು ರಷ್ಯನ್ ಸಿನೆಮಾ


ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ



ಜಗತ್ತಿನಲ್ಲೇ ಮೊದಲ ಬಾರಿಗೆ ಸಮಾಜವಾದೀ ಸರ್ಕಾರವನ್ನು ಸೋವಿಯತ್ ರಷ್ಯಾದಲ್ಲಿ ಪ್ರತಿಷ್ಠಾಪಿಸಲು ಕಾರಣವಾದ ಅಕ್ಟೋಬರ್ 1917 ರ ಮಹಾಕ್ರಾಂತಿಯ ಶತಮಾನೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ ರಷ್ಯನ್ ಸಿನೆಮಾ ನಡೆದುಬಂದ ದಾರಿಯನ್ನೂ ಅವಲೋಕಿಸಬಹುದು. 1908 ರ ಹೊತ್ತಿಗಾಗಲೇ ರಷ್ಯಾದ ಮೊತ್ತ ಮೊದಲ ಕಥಾಚಿತ್ರ ತಯಾರಾಗಿತ್ತು. ಝಾರ್ ದೊರೆಗಳ ಆಳ್ವಿಕೆಯ ಕ್ರಾಂತಿಪೂರ್ವ ರಷ್ಯಾದಲ್ಲಿ, 1914 ರಿಂದ ಸಿನೆಮಾ ಪ್ರಚಾರ ಮಾಧ್ಯಮವಾಗಿ ಬಳಕೆಗೆ ಬಂತು. ಮಹಾಕ್ರಾಂತಿಯ ನಂತರ ಸಮಾಜವಾದಿ ದೃಷ್ಟಿಕೋನದ ಸಿನೆಮಾ ಉದಯವಾಗಿ ಸಂವಹನ, ಶಿಕ್ಷಣ, ಮತ್ತು ಪ್ರಚಾರ ಮಾಧ್ಯಮವಾಗಿ ರಷ್ಯಾದಲ್ಲಿ ನೆಲೆನಿಂತಿತು.


ಬಂಡವಾಳಶಾಹಿ–ಸಮಾಜವಾದಿ ಸಿನೆಮಾ

ಫ್ರಾನ್ಸ್‌ನಲ್ಲಿ ಹುಟ್ಟಿ ಹಣಗಳಿಸುವ ಮಾಂತ್ರಿಕ ಮಾಧ್ಯಮವೆನಿಸಿದ್ದ ಸಿನೆಮಾ ಅಮೆರಿಕಾದ ಬಂಡವಳಿಗರ ಕೈಗೆ ಸಿಕ್ಕಿದ ಮೇಲೆ ಬಂಡವಾಳಶಾಹಿ ದೃಷ್ಟಿಕೋನವನ್ನು ಪ್ರಚಾರಮಾಡುವ ಪ್ರಬಲ ಮಾಧ್ಯಮವಾಗಿ, ಮನರಂಜನಾ ಉದ್ಯಮದ ಪ್ರಮುಖ ಸಾಧನವಾಗಿ ವಿಶ್ವದಾದ್ಯಂತ ಜನಪ್ರಿಯವಾಯಿತು. ಹಿಟ್ಲರ್ ಆಳ್ವಿಕೆಯ ಯುದ್ಧಕಾಲದ ಜರ್ಮನಿಯಲ್ಲಿ ದೃಶ್ಯ ದಾಖಲೆಯ ಸಾಧನವಾಗಿ, ಫ್ಯಾಸಿಸ್ಟ್ ಅಪಪ್ರಚಾರದ ಸಲಕರಣೆಯಾಗಿ, ಯುದ್ಧ ಕುರಿತಾದ ಸುಳ್ಳು–ಅರೆಸತ್ಯಗಳನ್ನು ಪೂರ್ಣಸತ್ಯವೆಂದು ಬಿಂಬಿಸುವ ಸುದ್ದಿಚಿತ್ರಗಳಿಗಾಗಿ 16 ಎಮ್.ಎಮ್. ಸಿನೆಮಾ ಆವಿಷ್ಕಾರಗೊಂಡಿತು. ಸಿನೆಮಾ ತಯಾರಿ–ಕೆ ಮತ್ತು ಪ್ರದರ್ಶನಗಳ ತಂತ್ರಜ್ಞಾನ, ಕಲೆಗಾರಿಕೆ ವಿಕಾಸಗೊಳ್ಳುತ್ತಾ ಹೋದಂತೆ ಸಮಾಜವಾದೀ ಮತ್ತು ಬಂಡವಾಳವಾದೀ ತಾತ್ವಿಕ ಮೂಲದ ಚಿಂತಕರು, ದೃಶ್ಯಕಲಾಕಾರರು ಮತ್ತು ಲಲಿತಕಲೆಗಳಲ್ಲಿ ಪರಿಣತಿ ಪಡೆದ ವಿವಿಧ ದೃಷ್ಟಿಕೋನಗಳ ಜನರು ಸಿನೆಮಾ ತಯಾರಿಕೆಯಲ್ಲಿ ತೊಡಗಿದರು. ಪ್ರಾದೇಶಿಕತೆ, ಸಂಸ್ಕೃತಿ, ಭಾಷೆಗಳ ಗಡಿಗಳನ್ನು ದಾಟಿ ಜಾಗತಿಕ ಆಯಾಮವನ್ನು ಪಡೆದುಕೊಂಡಿತು. ಪ್ರಾರಂಭದಲ್ಲಿ ಕೆಲಕಾಲ ಊಳಿಗಮಾನ್ಯ ದೃಷ್ಟಿಕೋನವು ಆರಾಧನಾ ವಾಸ್ತವತೆ, ಪೌರಾಣಿಕ ಸೌಂದರ್ಯ ಪ್ರಜ್ಞೆ ಮತ್ತು ರಾಜಮನೆತನದ ಧಾರ್ಮಿಕ ಆಯ್ಕೆಗಳನ್ನು ಮುನ್ನೆಲೆಗೆ ತಂದರೂ ಚಾರಿತ್ರಿಕವಾಗಿ ಪ್ರಗತಿಶೀಲವಾದ ಬಂಡವಾಳಶಾಹಿಯು ತನ್ನ ಕೈಗೆ ಸಿಕ್ಕಿದ ಎಲ್ಲವನ್ನೂ ಹಣಗಳಿಕೆಗಾಗಿ ಬಳಸಿಕೊಳ್ಳುವಂತೆ



ಸಜ್ಜುಗೊಳಿಸಿದಂಥ ಸಿನೆಮಾ ಪ್ರಕಾರದ ಮೇಲೆ ಬಹುಬೇಗ ತನ್ನ ವ್ಯಾಪಾರೀ ಹಿಡಿತವನ್ನು ಸಾಧಿಸಿತು. ಜಾಗತಿಕ ಬಂಡವಾಳಶಾಹಿಗೆ ಏಕೈಕ ಜಾಗತಿಕ ಪರ್ಯಾಯವಾದ ಸಮಾಜವಾದವು ಕಲಾತ್ಮಕತೆ, ಸೃಜನಶೀಲತೆ ಮತ್ತು ತಾತ್ವಿಕತೆಗಳನ್ನು ಒಳಗೊಂಡ ಸಾಮಾಜಿಕ ವಾಸ್ತವತೆಯನ್ನು ಜನಸಮುದಾಯಕ್ಕೆ ಮುಟ್ಟಿಸಬಲ್ಲ ಸಿನಿಮಾವನ್ನು ತನ್ನ ಗಂಭೀರ ಆಯ್ಕೆಯನ್ನಾಗಿ ಮಾಡಿಕೊಂಡಿತು.

ಭೌತಿಕ ವಾಸ್ತವದ ಸೃಜನಾತ್ಮಕ ನಿರೂಪಣೆಯಲ್ಲಿ ದ್ವಂದ್ವಾತ್ಮಕ ಮತ್ತು ಗತಿತಾರ್ಕಿಕ ಚಿಂತನಾ ವಿಧಾನಗಳು ಸಿನೆಮಾ ಭಾಷೆಗೆ ಬಹು ಹತ್ತಿರವಾದವುಗಳು. ದೃಶ್ಯ–ಅದೃಶ್ಯ, ನೆರಳು–ಬೆಳಕು, ವಾಸ್ತವ–ಭ್ರಮೆ, ಸತ್ಯ–ಅಸತ್ಯ ಮುಂತಾದ ಪರಸ್ಪರ ವಿರೋಧವಾದ ಅಂಶಗಳನ್ನು ಬಳಸಿ, ಎರಡೂ ಅಲ್ಲ ಅಥವಾ ಹೌದು ಎನ್ನಬಹುದಾದ ಮೂರನೆಯ ಆಯಾಮದ ಅನುಭವಸತ್ಯವನ್ನು ಸಿನೆಮಾ ಸೃಷ್ಟಿಸುತ್ತದೆ. ಪರಸ್ಪರ ವಿರುದ್ಧವಾದ ಚಿತ್ರ–ದೃಶ್ಯಗಳನ್ನು




ಕೌಶಲದಿಂದ ಜೋಡಿಸಿ ಪರಿಣಾಮಕಾರಿಯಾದ ಅನುಭವಸತ್ಯವನ್ನು ಸೃಷ್ಟಿಸಬಹುದೆಂದು ಮೊಟ್ಟಮೊದಲು ತೋರಿಸಿಕೊಟ್ಟವರು ರಷ್ಯಾದ ಪುಡೋವ್‌ಕಿನ್. ಆಧುನಿಕ ಸಿನೆಮಾ ದಲ್ಲಿ ದೃಶ್ಯ ಸಂಕಲನದ ಸಾಧ್ಯತೆಗಳನ್ನು ಎಷ್ಟೇ ವಿಸ್ತರಿಸಿದ್ದರೂ ಇಂದಿಗೂ ಪುಡೋವ್‌ಕಿನ್ ರೂಪಿಸಿದ ಸಂಕಲನಕಲೆ ಸಿನಿಮಾದ ಜೀವಾಳವಾಗಿದೆ. ಸಿನೆಮಾ ಅಂತಿಮವಾಗಿ ರೂಪುಗೊಳ್ಳುವುದು ಸಂಕಲನಕಾರನ/ಳ ಕೈಯಲ್ಲೇ ಎಂಬುದು ಸಿನೆಮಾ ತಯಾರಿಕೆಯಲ್ಲಿ ಬಹುಜನರಿಂದ ಒಪ್ಪಿತವಾದ ಸತ್ಯ.

ಪೂರ್ಣ ಅರ್ಥದಲ್ಲಿ ಸಿನೆಮಾ ಎಂಬುದು ಸಂಗೀತ, ನಾಟ್ಯ, ದೃಶ್ಯ ಮತ್ತು ಕಾವ್ಯವನ್ನು ಛಾಯಾಗ್ರಹಣದ ನುಡಿಗಟ್ಟಿನಲ್ಲಿ ಸೌಂದರ್ಯಾತ್ಮಕವಾಗಿ ಬೆಸೆದು ರೂಪಿಸಿದ ಜೀವನಾನುಭವದ ಸಂಕೀರ್ಣಕೃತಿ. ರಷ್ಯಾದ ಸಿರ್ಗೇಯ್ ಐಸೆನ್‌ಸ್ಟೀನ್ ಅಕ್ಟೋಬರ್ ಮಹಾಕ್ರಾಂತಿಯ, ಸಮಾಜವಾದಿ ಭಿತ್ತಿಯಲ್ಲಿ ನಿರ್ಮಿಸಿರುವ "ಬ್ಯಾಟಲ್‌ಷಿಪ್ ಪೊಟೆಂಕಿನ್" ಎಂಬ ಚಿತ್ರ ಇಂದಿಗೂ ಜಾಗತಿಕವಾಗಿ ಎಲ್ಲ ಕಾಲಕ್ಕೂ ಸಲ್ಲುವ ವಿಶ್ವದ ಮಹಾನ್ ಚಿತ್ರಗಳಲ್ಲಿ ಪ್ರಮುಖವಾದುದು.

"ಚಪೇಯ್"

ಮೂವತ್ತರ ದಶಕದ ರಷ್ಯನ್ ಸಿನೆಮಾ, ಲೆನಿನ್‌ರ ಮುಂದಾಳತ್ವದಲ್ಲಿ, ಅಕ್ಟೋಬರ್ ಮಹಾಕ್ರಾಂತಿಯನ್ನು ಸಾಧ್ಯಮಾಡಿದ ಸಾವಿರಾರು ಸೈನಿಕರು, ಕಾರ್ಮಿಕರು ಮತ್ತು ರೈತರ ತ್ಯಾಗ, ಬಲಿದಾನ, ಮಾನವೀಯತೆ, ತಾತ್ವಿಕನಿಷ್ಠೆ ಮತ್ತು ಅಪ್ರತಿಮ ದೇಶಪ್ರೇಮಗಳನ್ನು ಕೀರ್ತಿಸುತ್ತದೆ. ಹಳ್ಳಿಗಾಡಿನ ಹಿನ್ನೆಲೆಯ ನಿರಕ್ಷರಕುಕ್ಷಿಯಾದ ಚಪೇಯ್ ಎಂಬ ಹೆಸರಿನ ಯೋಧನೊಬ್ಬ ಕ್ರಾಂತಿಕಾರಿ ಕೆಂಪು ಸೈನಿಕರನ್ನು ಪ್ರೀತಿ ಮತ್ತು ಮಿಲಿಟರಿ ಕೌಶಲ್ಯಗಳಿಂದ ಸಮರ್ಥವಾಗಿ ಸಂಘಟಿಸಿ ಝಾರ್‌ಗೆ ನಿಷ್ಠರಾದ ಬಿಳಿಸೈನಿಕರನ್ನು ಹಿಮ್ಮೆಟ್ಟಿಸಿ ಹೋರಾಡಿ ಹುತಾತ್ಮನಾಗುವ ಕಥಾಚಿತ್ರ ಚಪೇಯ್. ನೀನು ಕಮುನಿಸ್ಟನೋ, ಬೋಲ್ಷೆವಿಕ್ ನಿಷ್ಠನೋ ಎಂಬ ಮುಗ್ಧ–ಲೇವಡಿಯ ಪ್ರಶ್ನೆಗೆ, ಉತ್ತರಿಸಲಾಗದಷ್ಟು ಮುಗ್ಧನಾದರೂ ತಾನು ಇಂಟರ್‌ನ್ಯಾಶನಲಿಸ್ಟ್ ಎಂದು ಎದುರಾಳಿಯನ್ನು ಬಾಯಿ ಮುಚ್ಚಿಸುವ; ಓದಲು ಬಾರದಿದ್ದರೂ ಆಲೂಗೆಡ್ಡೆಗಳನ್ನು ಬಳಸಿ ತನ್ನ ಕದನ ಕೌಶಲ ಮತ್ತು ವ್ಯೂಹ ಸಾಮರ್ಥ್ಯವನ್ನು ವಿವರಿಸುವ; ದೇಶಕ್ಕಾಗಿ ಹೋರಾಡಿದರೂ ಗ್ರಾಮವಾಸಿಗಳ ಪಶುಗಳನ್ನು ಕದಿಯುವುದು ತಪ್ಪೆಂದು, ಕದ್ದ ಪಶುಗಳನ್ನು ಅವುಗಳ ಮಾಲೀಕರಿಗೆ ಹಿಂದಿರುಗಿಸುವ; ಸೈನಿಕರು ಮತ್ತು ಸೇನಾಧಿಪತಿಗಳ ನಡುವಿನ ಶ್ರೇಣೀಕೃತ ಅಂತರ ಯುದ್ಧರಂಗದಲ್ಲಿ ಮಾತ್ರ. ಉಳಿದಂತೆ ಸಂಗಾತಿಗಳಾಗಿ ಎಲ್ಲರೂ ಸಮಾನರೇ ಎಂದು ಸಾರುವ; ಸೈನಿಕನಾಗಿ ಸಾಯುವುದು ಏಕೆ? ಎಂಬ ತಾತ್ವಿಕ ಪ್ರಶ್ನೆ ಹಾಕಿಕೊಂಡು, ಸಾಯುವುದು ಬದುಕಿಗಾಗಿ, ಯುದ್ಧ ಮುಗಿದಮೇಲೆ ಬದುಕಿನ ಪ್ರೀತಿ ಇಮ್ಮಡಿಗೊಳ್ಳುತ್ತದೆ ಎಂದು ತಾನೇ ಉತ್ತರಿಸುವ ಚಪೇಯ್, ರಷ್ಯಾದ ಮಹಾಕ್ರಾಂತಿಯಲ್ಲಿ ಪಾಲುಗೊಂಡ ಸಾಮಾನ್ಯರಲ್ಲಿ ಸಾಮಾನ್ಯರನ್ನು ಪ್ರತಿನಿಧಿಸುತ್ತಾನೆ. ನಗರ ಹಿನ್ನೆಲೆಯ ಮಿಲಿಟರಿ ಅಧಿಕಾರಿ ಗ್ರಾಮೀಣ ಹಿನ್ನೆಲೆಯ ಚಪೇಯ್, ಕೆಂಪುಸೈನ್ಯದ ತುಕಡಿಯಲ್ಲಿನ ಏಕೈಕ ಯೋಧೆ ತನಗೊಪ್ಪಿಸಿದ ಮೆಷಿನ್‌ಗನ್ ಅನ್ನು ಶುಭ್ರವಾಗಿ ಒರೆಸಿ ಬಳಸುವ ಶ್ರದ್ಧೆ, ಸಾವಿನ ನೆರಳಲ್ಲಿದ್ದುಕೊಂಡೇ ವ್ಯಕ್ತವಾಗುವ ಸಂಗಾತಿ ಹುಡುಗನೊಂದಿಗಿನ ಆಕೆ–ಯ ಪ್ರೀತಿ, ಹೀಗೆ ಮೇಲುನೋಟಕ್ಕೆ ಸರಳ ನಿರೂಪಣೆಯಂತೆ ತೋರುವ ಚಪೇಯ್ ನೋಡುತ್ತಾ ನೋಡುತ್ತಾ ಅದರ ವಿವಿಧ ಪದರುಗಳ ಒಳಕ್ಕೆ ನೋಡುಗರನ್ನು ಸೇರಿಸಿಕೊಂಡಬಿಡುತ್ತದೆ. 1934 ರಲ್ಲಿ ತಯಾರಾದ ಈ ಚಿತ್ರವನ್ನು ಒಂದೇ ವರ್ಷದಲ್ಲಿ 3 ಕೋಟಿ ಜನ ವೀಕ್ಷಿಸಿದರೆಂಬ ಸಂಗತಿ ಆಶ್ಚರ್ಯವನ್ನೇನೂ ಹುಟ್ಟಿಸುವುದಿಲ್ಲ.

19 ವರ್ಷ ವಯಸ್ಸಿನ ಹುಡುಗನೊಬ್ಬ ನಾಝಿಗಳ ವಿರುದ್ಧ ನಡೆಯುವ ಯುದ್ಧದಲ್ಲಿ ರೇಡಿಯೋ ಸಂದೇಶಕನಾಗಿ, ಧೀರ ಕರ್ತವ್ಯನಿಷ್ಠ ಸೈನಿಕನಾಗಿ, ರೈಲು ಪ್ರಯಾಣದ ಇಕ್ಕಟ್ಟುಗಳಲ್ಲಿ ಅಚಾನಕ್ಕಾಗಿ ಸಿಗುವ ಹುಡುಗಿಯ ಪ್ರೀತಿಯನ್ನು ಅನುಭವಿಸಲಾಗದೆ, ಸಹೋದ್ಯೋಗಿಗಳಿಗೆ ಸಹಾಯಕ್ಕೆಂದು ತನ್ನ ಎರಡುದಿನದ ರಜೆಯನ್ನು ಸವೆಸಿದ್ದರಿಂದಾಗಿ ತಾಯಿಯೊಂದಿಗೆ ಕೆಲ ಗಳಿಗೆಯಾದರೂ ಇರಲಾಗದೆ ಸೈನ್ಯಕ್ಕೆ ಹಿಂದಿರುಗುವ ದಾರಿಯಲ್ಲಿ ಬಾಂಬ್ ದಾಳಿಗೆ ತುತ್ತಾಗಿ ಸಾಯುವ "ಬ್ಯಾಲೆಡ್ ಆಫ್ ಎ ಸೋಲ್ಜರ್", ಅಕ್ಕರೆ, ಪ್ರೀತಿ, ಮಾನವೀಯತೆ, ದೇಶಪ್ರೇಮ, ಕರ್ತವ್ಯಪ್ರಜ್ಞೆ ಮತ್ತು ಫ್ಯಾಸಿಸಂ ಅನಿವಾರ್ಯವಾಗಿಸಿದ ಯುದ್ಧದಲ್ಲಿ ಸಿಕ್ಕಿ ನಲುಗಿದ ಸಾಮಾನ್ಯ ಜನರ ಕತೆಯಾಗಿ ಈ ಚಿತ್ರ ರೂಪುತಾಳಿದೆ. ಯುದ್ಧವನ್ನು ವೈಭವೀಕರಿಸಿ ರೋಮಾಂಚಕಾರಿಯಾಗಿಸಿ ಹಣ ಮಾಡುವ ಹಾಲಿವುಡ್ ಚಿತ್ರಗಳಿಗೂ, ಯುದ್ಧ ವಿರೋಧಿಯಾಗಿ ಪ್ರೀತಿ–ಶಾಂತಿಗಳ ಮಹತ್ವವನ್ನು ಸಾರುವ ಈ ಚಿತ್ರಕ್ಕೂ ಇರುವ ತಾತ್ವಿಕ ವ್ಯತ್ಯಾಸ ಢಾಳಾಗಿದೆ. "ಕ್ರೇನ್ಸ್ ಆರ್ ಫ್ಲೈಯಿಂಗ್" ಯುದ್ಧವನ್ನು ಹಿನ್ನೆಲೆಯಾಗಿಸಿ ಪ್ರೀತಿ–ನಿಷ್ಠೆಗಳ ತಾಕಲಾಟಗಳನ್ನು ಚಿತ್ರಿಸುವ ಅಂಥದೇ ಮತ್ತೊಂದು ಚಿತ್ರ.



ಸ್ಟ್ರೈಕ್, ಅಲೆಗ್ಸಾಂಡರ್ ನೆವಸ್ಕಿ, ಅಕ್ಟೋಬರ್ ರೆವಲ್ಯೂಷನ್, ಟೆನ್ ಡೇಸ್ ದಟ್ ಷುಕ್ ದ ವರ್ಲ್ಡ್, ಪೀಟರ್ ದ ಗ್ರೇಟ್ ಮುಂತಾದ ಸಂಘರ್ಷ ಕೇಂದ್ರಿತ ಚಿತ್ರಗಳಲ್ಲದೆ ಆ ಕಾಲದಲ್ಲೇ ಬೆಡ್ ಅಂಡ್ ಸೋಫಾ ದಂಥ ಹಾಸ್ಯ ಕೇಂದ್ರಿತ ಚಿತ್ರಗಳೂ ತಯಾರಾಗಿವೆ. ಹಾಗೆಯೇ ಲೆನಿನ್ ಬಗ್ಗೆ ಅಗಾಧ ಪ್ರೀತಿ–ಗೌರವಗಳನ್ನು ಇಟ್ಟುಕೊಂಡು ವರ್ಟೋವ್ ಮಾಡಿದ ಗಂಭೀರ ಸಾಕ್ಷ್ಯಚಿತ್ರಗಳೂ ಇವೆ. ಆದ–ರೆ ಪ್ರಚಾರ–ಲಭ್ಯತೆಗಳ ಅಭಾವದಿಂದಾಗಿ ಸಿನಿಮಾ ಸಹೃದಯರಿಗೆ ಇವು ಅಷ್ಟು ಪರಿಚಿತವಲ್ಲ.

ರಷ್ಯನ್ ಸಾಹಿತ್ಯಕೃತಿಗಳನ್ನು ಆಧರಿಸಿ ತಯಾರಾದ ಮಕ್ಸಿಮ್ ಗಾರ್ಕಿಯ ತಾಯಿ, ತಾಲ್‌ಸ್ತಾಯ್ ಅವರ ರಿಸರಕ್ಷನ್, ದಾಸ್ತೋವೆಸ್ಕಿಯ ಕ್ರೈಮ್ ಅಂಡ್ ಪನಿಷ್‌ಮೆಂಟ್ ಮುಂತಾದ ರಷ್ಯನ್ ಚಿತ್ರಗಳು ಸಾಹಿತ್ಯದ ವಿದ್ಯಾರ್ಥಿಗಳಿಗೆ ಪರಿಚಿತವಾಗಿರುವಷ್ಟು ಸಿನಿಮಾಪ್ರಿಯರಿಗೆ ಇಲ್ಲ.

ಸೋವಿಯೆಟೋತ್ತರ ವಿಘಟನೆ ಸಿನೆಮಾದಲ್ಲಿ

ಫಿಲ್ಮ್ ಸೊಸೈಟಿಗಳು ಸಕ್ರಿಯವಾಗಿದ್ದ ಎಪ್ಪತ್ತರ ದಶಕಗಳಲ್ಲಿ ರಷ್ಯನ್ ರಾಯಭಾರಿ ಕಚೇರಿ–ಚಿತ್ರಭಂಡಾರಗಳ ಮೂಲಕ ಸಿನೆಮಾ ಪ್ರಿಯರನ್ನು ತಲುಪುತ್ತಿದ್ದವು. ಡಾಟರ್–ಇನ್–ಲಾ, ದೆರಸು ಉಝಾಲ, ಮಾಸ್ಕೋ ಡಸ್ ನಾಟ್ ಬಿಲಿವ್ ಇನ್ ಟಿಯರ್ಸ್ ಅಂಥ ಚಿತ್ರಗಳು. ಅಕ್ಟೋಬರ್ ಮಹಾಕ್ರಾಂತಿಯ ಅವಧಿಯ ಆಸುಪಾಸಿನಲ್ಲಿ ಮತ್ತು ಸೋವಿಯತ್ ಒಕ್ಕೂಟ ವಿಘಟನೆಗೊಳ್ಳುವ ಮೊದಲೂ ಸಹ ತಯಾರಾದ ನೂರಾರು ಚಿತ್ರಗಳು ಅವುಗಳ ಸಿನಿಮಾತ್ಮಕ ಗುಣಮಟ್ಟ ಮತ್ತು ತಾತ್ವಿಕ ಶ್ರದ್ಧೆ, ಆಳುವವರೊಂದಿಗಿನ ಭಿನ್ನಾಭಿಪ್ರಾಯಗಳಿಗಾಗಿ ಸಿನಿಮಾಪ್ರೀತಿಯನ್ನು ಇಟ್ಟುಕೊಂಡವರನ್ನು ಆಕರ್ಷಿಸುತ್ತವೆ. ತಾರ್‌ಕೋವ್‌ಸ್ಕಿ, ಸೊಕುರೋವ್, ಡಾನಸ್ಕೋಯ್, ಮಿಖಾಲ್ಕೋವ್, ಕೋಝಿನ್‌ತ್ಸೇವ್, ದೋವ್‌ಷೆಂಕೊ, ಪಿತ್ರೋವ್ ಮುಂತಾದವರು ರಷ್ಯಾದ ಮಹತ್ವದ ಚಿತ್ರನಿರ್ದೇಶಕರು.

ಮಹಾಕ್ರಾಂತಿಯು ಶತಮಾನ ಕಂಡ ಈ ಅವಧಿಯಲ್ಲಿ, ಸೋವಿಯತ್ ಒಕ್ಕೂಟ ವಿಘಟನೆಗೊಂಡು ರಷ್ಯಾ ಮತ್ತು ವಿಘಟನಪೂರ್ವ ಸದಸ್ಯ ರಾಷ್ಟ್ರಗಳಲ್ಲಿ ಸಂಭವಿಸಿರುವ ತಾತ್ವಿಕ, ರಾಜಕೀಯ ಮತ್ತು ಸಾಮಾಜಿಕ ಏರುಪೇರುಗಳು ರಷ್ಯನ್ ಸಿನೆಮಾದಲ್ಲಿ ಪ್ರತಿಫಲಿತವಾಗುತ್ತಿವೆ. ಫ್ರಾನ್ಸ್ ಮುಂತಾದ ದೇಶಗಳ ಚಿತ್ರ ತಯಾರಕರ ಸಹನಿರ್ಮಾಣದಲ್ಲಿ ತಯಾರಾಗಿ ಅಂತಾರಾಷ್ಟ್ರೀಯ ಚಿತ್ರೋತ್ಸವಗಳ ಮೂಲಕ ಸಿನಿಮಾ ಪ್ರಿಯರನ್ನು ತಲುಪುವ ರಷ್ಯನ್ ಸಿನೆಮಾಗಳು ಆ ದೇಶದ ಅಧಿಕಾರಶಾಹಿಯ ಭ್ರಷ್ಟತೆ–ಜನವಿರೋಧಿ ನಿಲುವುಗಳನ್ನು ನಿಸ್ಸಂಕೋಚವಾಗಿ ಟೀಕಿಸುತ್ತವೆ. ಪಾಶ್ಚಿಮಾತ್ಯ ದೇಶಗಳ ಪ್ರಜಾಪ್ರಭುತ್ವ ಮಾದರಿಗೆ ಮಾರುಹೋಗಿ ಸಮಾಜವಾದೀ ತಾತ್ವಿಕತೆಯನ್ನು ಕೈಬಿಟ್ಟು ತಪ್ಪು ಮಾಡಿದ್ದೇವೆಯೋ ಎಂಬ ಅಳುಕನ್ನೂ ಅಲ್ಲಲ್ಲಿ ಧ್ವನಿಸುತ್ತವೆ. ಅಂಥ ಚಿತ್ರಗಳಿಗೆ ರಷ್ಯಾದ ಸರ್ಕಾರಿ ಸಂಸ್ಥೆಯ ಸಾಂಸ್ಕೃತಿಕ ವಿಭಾಗ ಅನುದಾನವನ್ನೂ ಕೊಡುತ್ತದೆ. "ಸ್ಟೂಡೆಂ ಟ್", "ಉಚ್ಚೆನಿಕ್ (ಶಾಲಾವಿದ್ಯಾರ್ಥಿ) ಫೂಲ್, "ಲೆವಿಯಾಥನ್" ಮುಂತಾದವು ಈ ಧಾಟಿಯ ಚಿತ್ರಗಳು.

ಫ್ರಾನ್ಸ್, ಇಟಲಿ, ಜರ್ಮನಿ ಮುಂತಾದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಆಯೋಜಿಸುವ ಪ್ರತಿಷ್ಠಿತ ಚಿತ್ರ ಸ್ಪರ್ಧೆಗಳಲ್ಲಿ ಅತ್ಯುತ್ತಮ ವಿದೇಶಿ ಚಿತ್ರ ಎಂಬ ವಿಭಾಗದಲ್ಲಿ ಪ್ರಶಸ್ತಿಗಳಿಗೆ ಪಾತ್ರವಾಗುವ ರಷ್ಯನ್ ಸಿನೆಮಾ ಅನೇಕ ಬಗೆಯ ದ್ವಂದ್ವಗಳನ್ನು ಒಳಗೊಂಡಿದೆಯೆಂದು ನನ್ನ ಭಾವನೆ. ಇವಕ್ಕೆ ಸಿಗುತ್ತಿರುವ ಪ್ರಶಸ್ತಿಗಳು ಅವುಗಳ ಕಲಾತ್ಮಕತೆಗಾಗಿ ಮಾತ್ರವಲ್ಲ ಅವು ಪ್ರತಿನಿಧಿಸುವಂತೆ ತೋರುವ ಸಮಾಜವಾದ ವಿರೋಧಿ ನಿಲುವಿನ ಪ್ರಶಂಸಾತ್ಮಕ ಪುರಸ್ಕಾರವೂ ಅದರಲ್ಲಿ ಸೇರಿದೆ. ಇಡೀ ವಿಶ್ವದಲ್ಲೇ ಮೊತ್ತ ಮೊದಲ ಬಾರಿಗೆ ಸಮಾಜವಾದೀ ಆರ್ಥಿಕತೆಯ ಸಮ ಸಮಾಜದ ರಾಜಕೀಯ ಪ್ರಯೋಗಶಾಲೆಯಾಗಿದ್ದ ಸೋವಿಯತ್ ಒಕ್ಕೂಟ ನವ ಉದಾರವಾದದ ಹೊಡೆತಕ್ಕೆ ಸಿಕ್ಕಿ ವಿಘಟನೆಗೊಂಡ ಮೇಲೆ ಅಲ್ಲಿನ ಯುವಜನಾಂಗವು ಪಾಶ್ಚಿಮಾತ್ಯ ಮಾದರಿಯ ಪ್ರಜಾಪ್ರಭುತ್ವವನ್ನು ಅನಿವಾರ್ಯವೆಂದು ಭಾವಿಸಿರುವಂತೆ ಅನ್ನಿಸುತ್ತದೆ. ಆದರೆ ಬಂಡವಾಳಶಾಹಿ ದೇಶಗಳಲ್ಲಿ ಮತ್ತೆ ಮತ್ತೆ ಕಾಣಿಸಿಕೊಂಡ ಆರ್ಥಿಕ ಕುಸಿತಗಳು ರಷ್ಯಾದಲ್ಲಷ್ಟೇ ಅಲ್ಲ, ಜಗತ್ತಿನಾದ್ಯಂತ ರಾಜಕೀಯ ಚಿಂತಕರು ಮತ್ತೆ ಕ್ಯಾಪಿಟಲ್ ಅಧ್ಯಯನದ ಕಡೆ ಗಮನಹರಿಸುವಂತೆ ಮಾಡಿವೆ. ಜೊತೆಗೆ, ದೇಶೀಯ ಆಡಳಿತಗಾರರ ಬಗ್ಗೆ ಅಸಮಧಾನ, ಭ್ರಷ್ಟ ಅಧಿಕಾರಶಾಹಿಯ ಬಗ್ಗೆ ಕೋಪ, ಬಂಡವಾಳಶಾಹಿಗೆ ಪರ್ಯಯವಾಗಿ ಸಮಾಜವಾದ ಅನಿವಾರ್ಯವೆ? ಎಂಬ ಪ್ರಶ್ನೆಗಳು. ಹಾಗಿಲ್ಲದಿದ್ದರೆ ಪರ್ಯಾಯ ಮಾದರಿ ಯಾವುದು? ಇಂಥ ತಾಕಲಾಟಗಳು ಇತ್ತೀಚಿನ ರಷ್ಯನ್ ಸಿನೆಮಾದಲ್ಲಿ ಕಾಣಿಸಿಕೊಳ್ಳತೊಡಗಿವೆ. ಕಳೆದ ವರ್ಷ ಚಿತ್ರೋತ್ಸವಗಳಲ್ಲಿ ಪ್ರದರ್ಶನಗೊಂಡ ರಷ್ಯನ್ ಚಿತ್ರ "ಅಂಡರ್ ಎಲೆಕ್ಟ್ರಿಕ್ ಕ್ಲೌಡ್ಸ್" ಅಂಥ ತಾಕಲಾಟಗಳನ್ನು, ಹೊಸ ಪರ್ಯಾಯಕ್ಕಾಗಿ ರಷ್ಯನ್ ಸಿನೆಮಾ ಚಿಂತಕರು ಮಾಡುತ್ತಿರುವ ಅನ್ವೇಷಣೆಯನ್ನು ಬಿಂಬಿಸುತ್ತದೆ.



ಕಾಶ್ಮೀರಿ ಜನತೆಯನ್ನು ಬಗ್ಗು ಬಡಿಯಲು ಬಲಪ್ರಯೋಗ ಮಾಡುವ ತಂತ್ರವನ್ನು ಕೇಂದ್ರದ ಬಿಜೆಪಿ ನೇತೃತ್ವದ ಸರಕಾರವು ಹಿಂದೂತ್ವ ಅಜೆಂಡವನ್ನು ಮುಂದೊತ್ತುವ ತನ್ನ ಸಿನಿಕ ರಾಜಕೀಯ ಹಿತಗಳಿಗೆ ಅನುಕೂಲವಾಗಲು ಅಳವಡಿಸಿಕೊಂಡಿದೆ. ದೇಶದ ಇತರ ಭಾಗಗಳಲ್ಲಿ ಹಿಂದೂ ರಾಷ್ಟ್ರೀಯವಾದದ ಭಾವನೆಗಳನ್ನು ಕೆರಳಿಸಲು ಕಾಶ್ಮೀರ ವಿಷಯವನ್ನು ಬಳಸಿಕೊಳ್ಳುವುದು ಅದರ ಉದ್ದೇಶವಾಗಿದೆ.



ಪ್ರಕಾಶ್ ಕಾರಟ್

ಕಾಶ್ಮೀರ: ಬರ್ಬರ ದಬ್ಬಾಳಿಕೆ ನಿಲ್ಲಿಸಿ, ಮಾತುಕತೆ ಆರಂಭಿಸಿ

ಇಡೀ ಕಾಶ್ಮೀರ ಕಣಿವೆಯ ಜನರು ಭಾರತೀಯ ಪ್ರಭುತ್ವದ ವಿರುದ್ಧ ಬಂಡೆದ್ದಿದ್ದಾರೆ. ಕಳೆದ ವಾರ ಇದು ಸ್ಫುಟವಾಗಿ ಅನಾವರಣಗೊಂಡಿದೆ. ಶ್ರೀನಗರ ಲೋಕಸಭೆ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಕೇವಲ ಶೇಕಡಾ 7.2 ಮತದಾನ ಆಗಿದೆ. ಇಷ್ಟು ಕಡಿಮೆ ದಾಖಲೆಯ ಮತದಾನ ಯಾರದೇ ಬಲವಂತ ಅಥವಾ ಒತ್ತಡದಿಂದ ಆದದ್ದಲ್ಲ, ಆದರೆ ಮುಖ್ಯವಾಗಿ ಚುನಾವಣೆಯಲ್ಲಿ ಭಾಗವಹಿಸಲು ಜನರು ನಿರಾಕರಿಸಿದ್ದರಿಂದ ಹಾಗಾಗಿದೆ. ಮತದಾನದ ದಿನ ಚುನಾವಣೆಯನ್ನು ವಿರೋಧಿಸಿದ ಜನರ ಮೇಲೆ ನಡೆದ ಭದ್ರತಾ ಪಡೆಗಳ ದಾಳಿಗೆ ಎಂಟು ತರುಣರು ಬಲಿಯಾಗಿದ್ದಾರೆ.

2016ರ ಬಂಡಾಯದ ನಂತರದಲ್ಲಿ ಪ್ರತಿಭಟನೆಗಳು ಮತ್ತು ಭದ್ರತಾ ಪಡೆಗಳ ಬರ್ಬರ ದಬ್ಬಾಳಿಕೆಯ ಚಕ್ರ ಇನ್ನೂ ನಿಂತಿಲ್ಲ. ಪುಲ್ವಾಮಾ ಪದವಿ ಕಾಲೇಜಿನ ವಿದ್ಯಾರ್ಥಿಗಳ ವಿರುದ್ಧ ಕ್ರಮ ಕೈಗೊಂಡ ನಂತರ ಕಳೆದ ಕೆಲವು ದಿನಗಳಿಂದ ರಾಜ್ಯದಾದ್ಯಂತ ಶಾಲೆ–ಕಾಲೇಜ್‌ಗಳಲ್ಲಿ ಪ್ರತಿಭಟನೆಗಳು ನಡೆಯುತ್ತಿವೆ. ಪೊಲೀಸ್ ಕಾರ್ಯಾಚರಣೆಯಲ್ಲಿ 54 ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ. ಆಡಳಿತವು ಎಲ್ಲಾ ಕಾಲೇಜ್‌ಗಳು ಮತ್ತು ಮಾಧ್ಯಮಿಕ ಶಾಲೆಗಳನ್ನು ಮುಚ್ಚಿದೆ. ಆದಾಗ್ಯೂ, ಗಣನೀಯ ಸಂಖ್ಯೆಯ ವಿದ್ಯಾರ್ಥಿನಿಯರೂ ಸೇರಿದಂತೆ ವಿದ್ಯಾರ್ಥಿಗಳು ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ.

ಪ್ರತಿಭಟನೆಗಳನ್ನು ನಿಭಾಯಿಸಲು ಮೋದಿ ಸರಕಾರ ಏಕೈಕ ವಿಧಾನವನ್ನು ಬಳಸುತ್ತಿದೆ– ಅದೆಂದರೆ ಗರಿಷ್ಠ ಬಲ ಪ್ರಯೋಗ. ಪೆಲ್ಲೆಟ್ ಗನ್‌ಗಳಿಂದ ಆದ ಅನಾಹುತ ಕಣ್ಣೆದುರಿಗಿದ್ದರೂ ಕೊನೆಯ ಅಸ್ತ್ರವಾಗಿ ಅದನ್ನು ಬಳಸುವುದಾಗಿ ಕೇಂದ್ರ ಸರಕಾರ ಇನ್ನೂ ಹೇಳುತ್ತಿದೆ. ಸೇನಾ ಕಾರ್ಯಾಚರಣೆಗಳನ್ನು ವಿರೋಧಿಸುವವರನ್ನು 'ಭಯೋತ್ಪಾದಕರಿಗೆ ನೆರವಾಗುವವರು' ಎಂದು ಪರಿಗಣಿಸುವುದಾಗಿ ಭೂಸೇನೆಯ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡ ಕೂಡಲೇ ಭೂಸೇನೆ ಮುಖ್ಯಸ್ಥ ಜನರಲ್ ರಾವತ್ ಘೋಷಿಸಿದ್ದರು. ಅಂದಿನಿಂದ ಸೇನೆ ಮತ್ತು ಕೇಂದ್ರೀಯ ಪೊಲೀಸ್ ಪಡೆಗಳು ಅನೇಕ ಯುವಜನರ ಮೇಲೆ ಗುಂಡು ಹಾರಿಸಿವೆ. ಉಗ್ರಗಾಮಿಗಳ ವಿರುದ್ಧ ಕಾರ್ಯಾಚರಣೆ ನಡೆಸುವಾಗ ತಮ್ಮತ್ತ ಕಲ್ಲೆಸೆದಿದ್ದಕ್ಕಾಗಿ ಪಡೆಗಳು ಹೀಗೆ ಮಾಡಿವೆ.

ಪ್ರತಿಯೊಂದು ಸಾವೂ ಇನ್ನಷ್ಟು ಪ್ರತಿಭಟನೆಗಳಿಗೆ ನಾಂದಿ ಹಾಡುತ್ತಿದೆ. ಕಲ್ಲು ಬಿಟ್ಟು ಬೇರಾವುದೇ ಅಪಾಯಕಾರಿಯಾದ ಅಸ್ತ್ರಗಳಿಂದ ಸಜ್ಜಿತರಾಗದ ತರುಣರ ವಿರುದ್ಧ ಬರ್ಬರ ಬಲಪ್ರಯೋಗ ಮಾಡುವಂಥ ರೋಷ ಹುಟ್ಟಿಸುವ ಸನ್ನಿವೇಶಕ್ಕೆ ಸೇನೆ ಮತ್ತು ಸಿಆರ್‌ಪಿಎಫ್ ಸಿಬ್ಬಂದಿಯನ್ನು ತಳ್ಳಲಾಗಿದೆ.

ಭದ್ರತಾ ಪಡೆಗಳ ದಬ್ಬಾಳಿಕೆಯನ್ನು ಸಮರ್ಥಿಸಲು ಕೇಂದ್ರ ಸರಕಾರ ಭಾರೀ ಪ್ರಯತ್ನಗಳನ್ನು ಮಾಡುತ್ತಿದೆ. ಫರೂಕ್ ದರ್ ಎಂಬ ಯುವಕನನ್ನು ಸೇನೆಯ ಜೀಪೊಂದಕ್ಕೆ ಕಟ್ಟಿ ಹಲವು ಹಳ್ಳಿಗಳ ಮೂಲಕ ಎಳೆದೊಯ್ದ ಒಂದು ವಿಡಿಯೋ ಇತ್ತೀಚೆಗೆ ಪ್ರಸಾರ ಆಗಿತ್ತು. ಸೇನೆಯ ಮೇಲೆ ಕಲ್ಲೆಸೆಯುವುದನ್ನು ತಡೆಯಲು ಹೀಗೆ ಮಾಡಲಾಯಿತು ಎಂದು ಸೇನೆಯ ಅಧಿಕಾರಿ ಹೇಳಿದ್ದರು. ರಾಷ್ಟ್ರೀಯ ರೈಫಲ್ಸ್ ದಳದ ಸಿಬ್ಬಂದಿ ಒಬ್ಬ ನಾಗರಿಕನನ್ನು ಈ ರೀತಿಯಾಗಿ ಮಾನವ ಗುರಾಣಿಯಾಗಿ ಬಳಸಿದ್ದನ್ನು ಅಟಾರ್ನಿ ಜನರಲ್ ಮುಕುಲ್ ರೋಹಟ್ಗಿ ಸಮರ್ಥಿಸಿಕೊಂಡಿದ್ದಾರೆ. ಸೇನಾ ಸಿಬ್ಬಂದಿಯ ಸುರಕ್ಷತೆಗೆ ಈ ಕ್ರಮ ಅಗತ್ಯವಾಗಿತ್ತು ಎಂದವರು ಹೇಳಿದ್ದಾರೆ.

ರಾಜಕೀಯ ಪ್ರತಿಕ್ರಿಯೆ ಕೊರತೆ ಮತ್ತು ಬಲಪ್ರಯೋಗ ಹಾಗೂ ದಬ್ಬಾಳಿಕೆ ಮೇಲಿನ ಅವಲಂಬನೆಯು ಕಾಶ್ಮೀರದ ಜನತೆ ಮತ್ತು ಭಾರತ ಸರಕಾರದ ನಡುವಣ ಸಂಬಂದವನ್ನು ಅಕ್ಷರಶಃ ಕಡಿದು ಹಾಕುವಂತೆ ಮಾಡಿದೆ. ಶ್ರೀನಗರ ಉಪ ಚುನಾವಣೆಯ ಬಹಿಷ್ಕಾರ ಇದರ ಸೂಚನೆಯಾಗಿದೆ.

ಕಾಶ್ಮೀರಿ ಜನತೆಯನ್ನು ಬಗ್ಗು ಬಡಿಯಲು ಬಲಪ್ರಯೋಗ ಮಾಡುವ ಈ ತಂತ್ರವನ್ನು ಕೇಂದ್ರದ ಬಿಜೆಪಿ ನೇತೃತ್ವದ ಸರಕಾರವು ಹಿಂದೂತ್ವ ಅಜೆಂಡವನ್ನು ಮುಂದೊತ್ತುವ ತನ್ನ ಸಿನಿಕ ರಾಜಕೀಯ ಹಿತಗಳಿಗೆ ಅನುಕೂಲವಾಗಲು ಅಳವಡಿಸಿಕೊಂಡಿದೆ. ದೇಶದ ಇತರ ಭಾಗಗಳಲ್ಲಿ ಹಿಂದೂ ರಾಷ್ಟ್ರೀಯವಾದದ ಭಾವನೆಗಳನ್ನು ಕೆರಳಿಸಲು ಕಾಶ್ಮೀರ ವಿಷಯವನ್ನು ಬಳಸಿಕೊಳ್ಳುವುದು ಅದರ ಉದ್ದೇಶವಾಗಿದೆ. ಎಲ್ಲಾ ಪ್ರತಿಭಟನೆಕಾರರು ಭಯೋತ್ಪಾದಕರ ಸಹಾಯಕರು ಹಾಗೂ ಪಾಕಿಸ್ತಾನದ ಕಾಲಾಳುಗಳು (ಸ್ಟೂಜ್) ಎಂಬುದು ಸರಕಾರದ ಅಧಿಕೃತ ವಿವರಣೆಯಾಗಿದೆ. ವಾಸ್ತವವಾಗಿ, ಬಿಜೆಪಿ ಸಾಮಾಜಿಕ ಮಾಧ್ಯಮದಲ್ಲಿ ಒಂದು ಪ್ರಚಾರವನ್ನೇ ಹರಿಯಬಿಟ್ಟಿತು. ಅನಾಣ್ಯೀಕರಣದಿಂದಾಗಿ ಕಾಶ್ಮೀರ ಕಣಿವೆಯಲ್ಲಿ ಕಲೆಸೆತದ ಪ್ರಕರಣಗಳು ತುಂಬಾ ಕಡಿಮೆಯಾಗಿವೆ. ಯಾಕೆಂದರೆ ಕಲ್ಲೆಸೆಯುವವರಿಗೆ ನೀಡಲು ಹಣವಿಲ್ಲ ಎಂಬುದು ಈ ಪ್ರಚಾರದ ಹೂರಣ.

ಕಾಶ್ಮೀರಿ ಜನತೆಯ ಬರ್ಬರ ದಮನ ಮತ್ತು ಅವರ ಮೂಲಭೂತ ಹಕ್ಕುಗಳ ಉಲ್ಲಂಘನೆಯನ್ನು ಭಯೋತ್ಪಾದನೆ ಮತ್ತು ಪಾಕಿಸ್ತಾನ ತಂತ್ರಗಳನ್ನು ದಮನಿಸುವ ಮೋದಿ ಸರಕಾರದ ಬಿಗಿ ಕ್ರಮವಾಗಿದೆ ಎಂದು ಬಿಂಬಿಸಲಾಗಿದೆ.

ಕಾಶ್ಮೀರದ ಜನರು ಮೋದಿ ಸರಕಾರದ ನಿಜವಾದ ಗುಣವನ್ನು ಮತ್ತು ಅದರ ಉದ್ದೇಶ ಏನೆಂಬುದನ್ನು ಕಾಣಬಹುದಾಗಿದೆ. ಎಲ್ಲಾ ಬಗೆಯ ರಾಜಕೀಯ ಅಭಿಪ್ರಾಯ ಹೊಂದಿರುವವರೊಂದಿಗೆ ಹಾಗೂ ಸಂಬಂಧಪಟ್ಟ ಎಲ್ಲರೊಂದಿಗೆ ಮಾತುಕತೆ ಆರಂಭಿಸಲು ರಾಜಕೀಯ ಹೆಜ್ಜೆಗಳನ್ನು ಇಡುವುದಾಗಿ ಪಿಡಿಪಿ–ಬಿಜೆಪಿ ಮೈತ್ರಿಕೂಟ ಅಂಗೀಕರಿಸಿದ್ದ ಸಾಮಾನ್ಯ ಕಾರ್ಯಕ್ರಮದಲ್ಲಿ ನೀಡಿದ್ದ ಭರವಸೆಯ ಅನುಷ್ಠಾನದ ಯಾವ ಸುಳಿವೂ ಇಲ್ಲದಿರುವುದರಿಂದ ಪ್ರಭುತ್ವದ ದಮನಕಾರಿ ವ್ಯವಸ್ಥೆಗೆ ತಲೆಬಾಗದಿರಲು ಕಾಶ್ಮೀರದ ಜನರು ನಿರ್ಧರಿಸಿದ್ದಾರೆ.

ಕಾಶ್ಮೀರ ಕಣಿವೆಯಲ್ಲಿನ ದಬ್ಬಾಳಿಕೆಯನ್ನು ನಿಸ್ಸಂಕೋಚವಾಗಿ ಎಲ್ಲರೂ ಖಂಡಿಸಲೇಬೇಕು. ತನ್ನ ಸಂಕುಚಿತ ಹಾಗೂ ಅತಿರಂಜಿತ–ರಾಷ್ಟ್ರೀಯವಾದಿ ಅಜೆಂಡಾದ ಗುರಿಯನ್ನು ಸಾಧಿಸಿಕೊಳ್ಳುವ ಮೋದಿ ಸರಕಾರದ ಪ್ರಯತ್ನಗಳಿಗೆ ಅವಕಾಶ ನೀಡಬಾರದು. ಸಿಂಹೀಯ ದಬ್ಬಾಳಿಕೆಯ ಕ್ರಮಗಳಿಗೆ ಇತಿಶ್ರೀ ಹಾಡಬೇಕು ಹಾಗೂ ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಸಂಬಂಧಪಟ್ಟ ಎಲ್ಲರೊಂದಿಗೆ ತಕ್ಷಣವೇ ಮಾತುಕತೆ ಆರಂಭಿಸಬೇಕು ಎಂದು ಎಲ್ಲಾ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಒತ್ತಾಯಿಸಬೇಕು. ಕಾಶ್ಮೀರಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಬರ್ಬರವಾಗಿ ದಮನ ಮಾಡುವುದನ್ನು ಒಪ್ಪದ ದೊಡ್ಡ ಸಂಖ್ಯೆಯ ಜನರು ಭಾರತದಲ್ಲಿದ್ದಾರೆ ಎಂಬ ಭರವಸೆಯನ್ನು ಕಾಶ್ಮೀರಿ ಜನತೆಗೆ ನೀಡಬೇಕಾಗಿದೆ.

ಅನು: ವಿಶ್ವ

ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧಾರ: ಪ್ರಚಾರಾಂದೋಲನ–ಹೋರಾಟಗಳು–ಸಮಾವೇಶಗಳು



ಪುಟ 3 ರಿಂದ

ಹೆಚ್ಚಿನದ್ದನ್ನು ಉತ್ತರಪ್ರದೇಶವೇ ನೀಡುತ್ತಿದೆ. ಬಿಜೆಪಿ ಆಳ್ವಿಕೆಯ ರಾಜ್ಯಗಳಲ್ಲಿ ಗೋರಕ್ಷಕರೆನ್ನುವ ಕಾವಲುಕೋರರ ಕೃತ್ಯಗಳು ಅಮಾಯಕ ಮುಸ್ಲಿಮರು ಮತ್ತು ದಲಿತರ ಜೀವಗಳನ್ನು ಬಲಿತೆಗೆದುಕೊಳ್ಳುತ್ತಲೇ ಇವೆ. ಈ ದಾಳಿಗಳಲ್ಲಿ ಇತ್ತೀಚಿನದ್ದೆಂದರೆ ರಾಜಸ್ತಾನದ ಅಲವರ್‌ನ ಬಳಿ ಬೆಹ್ರೋರ್‌ನಲ್ಲಿ ಪಹ್ಲೂ ಖಾನ್ ಕೊಲೆ.

ಉತ್ತರಪ್ರದೇಶದಲ್ಲಿ ರೋಮಿಯೋ–ನಿಗ್ರಹ ತಂಡಗಳನ್ನು ರಚಿಸಿ ನೈತಿಕ ಪೋಲೀಸ್‌ಗಿರಿ ಮೂಲಕ ಮುಗ್ಧ ಯುವಜನರಿಗೆ ಕಿರುಕುಳ ಕೊಡಲಾಗುತ್ತಿದೆ.

ಆರ್ಥಿಕ ಹೊರೆಗಳ ಹೇರಿಕೆ

ಬಿಜೆಪಿ ಸರಕಾರ ನವ–ಉದಾರವಾದಿ ಧೋರಣೆಗಳನ್ನು ಹೆಚ್ಚು ಆಕ್ರಾಮಕವಾಗಿ ಅನುಸರಿಸಲು ಹೊರಟಿದೆ, ಈಗ ದೊಡ್ಡ ಪ್ರಮಾಣದಲ್ಲಿ ಸಾರ್ವಜನಿಕ ವಲಯದ ಖಾಸಗೀಕರಣದ ಯೋಜನೆ ಹಾಕುತ್ತಿದೆ. ಇದು ನಿರುದ್ಯೋಗ ಸನ್ನಿವೇಶವನ್ನು ಮತ್ತಷ್ಟು ಉಲ್ಬಣಗೊಳಿಸಲಿದೆ. ಇತ್ತೀಚಿನ ಅವಧಿಯಲ್ಲಿ ಸುಮಾರು 1.5 ಕೋಟಿ ಉದ್ಯೋಗಗಳು ನಷ್ಟವಾಗಿವೆ ಎಂದು ಸರಕಾರ ಸಂಸತ್ತಿನಲ್ಲಿ ಈಗಾಗಲೇ ಒಪ್ಪಿಕೊಂಡಿದೆ.

ಕೃಷಿ ಸಂಕಟ ಯಾತನೆಗಳನ್ನು ಹೇರುತ್ತಲೇ ಇದೆ. ಮಳೆಯ ವಿಫಲತೆ ದಕ್ಷಿಣದ ರಾಜ್ಯಗಳ ಮೇಲೆ ವಿಪರೀತ ದುಷ್ಪರಿಣಾಮಗಳನ್ನು ಉಂಟುಮಾಡಿದೆ. ತಮಿಳುನಾಡಿನಲ್ಲಿ ಅದು ಬರದ ಪರಿಸ್ಥಿತಿಗಳನ್ನು ತಂದಿದೆ, 200ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗ್ರಾಮೀಣ ಪ್ರದೇಶಗಳ ಬಹಳ ದೊಡ್ಡ ಭಾಗಗಳ ಲ್ಲಿ ಕೃಷಿ ಸಂಕಟ ಯಾತನೆಗಳನ್ನು ಹೇರುತ್ತಲೇ ಇದೆ. ಬಿಜೆಪಿ ಸರಕಾರ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟಿನ ಮಟ್ಟಗಳಿಗೆ 'ಕನಿಷ್ಟ ಬೆಂಬಲ ಬೆಲೆ' ಹೆಚ್ಚಿಸುವ ವಚನವನ್ನು ನಿಭಾಯಿಸದೆ ಹಿಂದೇಟು ಹಾಕಿದೆ. ಇದನ್ನು ಮಾಡದೆ, ಸಾಲಮನ್ನಾಗಳಿಂದ ತಾತ್ಕಾಲಿಕ ಪರಿಹಾರ ಸಿಗಬಹುದೇ ವಿನಃ ನಮ್ಮ ಕೃಷಿ ವಲಯವನ್ನು ಆವರಿಸುತ್ತಿರುವ ಬಿಕ್ಕಟ್ಟಿಗೆ ದೀರ್ಘಕಾಲದ ಪರಿಹಾರ ನೀಡಲಾರದು.

ದಕ್ಷಿಣ ಭಾರತದಲ್ಲಿ ಮಳೆ ಸರಿಯಾಗಿ ಬಾರದೆ ಅಪಾರ ಕೃಷಿ ಸಂಕಟಕ್ಕೆ ಕಾರಣವಾಗಿದೆ. ತಮಿಳುನಾಡಿನಲ್ಲಿ ನೂರಾರು ರೈತರು ಹತಾಶೆಯಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ವ್ಯಾಪಕವಾದ ಚಳುವಳಿಗಳನ್ನು ನಡೆಸಿದರೂ, ಅವು ದಿಲ್ಲಿಯಲ್ಲಿ ಸಂಸತ್ತಿನ ಅಂಗಳವನ್ನು ತಲುಪಿದರೂ ಕೇಂದ್ರ ಸರಕಾರವಾಗಲೀ, ರಾಜ್ಯ ಸರಕಾರವಾಗಲೀ ಇದುವರೆಗೆ ಯಾವುದೇ ಪರಿಹಾರವನ್ನು ಒದಗಿಸಿಲ್ಲ.

ಆರೆಸ್ಸೆಸ್–ಬಿಜೆಪಿಯ ಗುರಿ

ಸಿಪಿಐ(ಎಂ) /ಎಡಪಂಥೀಯರು

ಆರೆಸ್ಸೆಸ್–ಬಿಜೆಪಿ ಸಿಪಿಐ(ಎಂ) ಮತ್ತು ಎಡಪಂಥೀಯರ ಮೇಲೆ, ವಿಶೇಷವಾಗಿ ಕೇರಳ, ಪಶ್ಚಿಮ ಬಂಗಾಳ ಮತ್ತು ತ್ರಿಪುರ(ಇಲ್ಲಿ ಸದ್ಯಕ್ಕೆ ಚುನಾವಣೆಗಳು ನಡೆಯಬೇಕಾಗಿದೆ) ದಲ್ಲಿ ಗುರಿಯಿಟ್ಟಿವೆ. ಅವರು ತಮ್ಮ ಮುಂದಿನ ಮುನ್ನಡೆಗೆ ಸಿಪಿಐ(ಎಂ) ಮತ್ತು ಎಡಪಕ್ಷಗಳು ದೊಡ್ಡ ಅಡ್ಡಿ ಎಂದು ಕಾಣುತ್ತಿದ್ದಾರೆ.

ಸುಪ್ರಿಂ ಕೋರ್ಟ್ ನಿರ್ಧಾರ ಸ್ವಾಗತಾರ್ಹ

ಸುಪ್ರಿಂ ಕೋರ್ಟ್ ಬಿಜೆಪಿ ಮುಖಂಡರಾದ ಎಲ್. ಕೆ.ಅಡ್ವಾಣಿ, ಮುರಳಿ ಮನೋಹರ ಜೋಷಿ ಮತ್ತು ಉಮಾ ಭಾರತಿ ವಿರುದ್ಧ ಬಾಬ್ರಿ ಮಸೀದಿ ಧ್ವಂಸದಲ್ಲಿ ಪಿತೂರಿಯ ಕ್ರಿಮಿನಲ್ ಆರೋಪವನ್ನು ಮತ್ತೆ ಹಾಕಲು ನಿರ್ಧರಿಸಿರುವುದನ್ನು ಕೇಂದ್ರ ಸಮಿತಿ ಸ್ವಾಗತಿಸಿದೆ. ಇದರ ಹಿನ್ನೆಲೆಯಲ್ಲಿ ಕಲ್ಯಾಣ ಸಿಂಗ್ ರಾಜ್ಯಪಾಲರ ಹುದ್ದೆಯಿಂದ ಮತ್ತು ಉಮಾಭಾರತಿ ಮಂತ್ರಿಯ ಹುದ್ದೆಯಿಂದ ರಾಜೀನಾಮೆ ನೀಡಬೇಕು.

ಅಮೆರಿಕದಿಂದ ವೀಸಾ ನಿರಾಕರಣೆ

ಅಮೆರಿಕನ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತೀಯ ವೃತ್ತಿನಿರತರಿಗೆ ವೀಸಾಗಳ ನಿಡಿಕೆಯನ್ನು ಮತ್ತಷ್ಟು ಕಡಿಮೆ ಮಾಡಲು ಹೊಸದಾಗಿ ಒತ್ತಾಸೆ ನೀಡಿರುವುದರ ಬಗ್ಗೆ ಕೇಂದ್ರ ಸಮಿತಿ ಆಳವಾದ ಆತಂಕವನ್ನು ವ್ಯಕ್ತಪಡಿಸಿದೆ. ಈ ಹಿಂದೆ ಈ ವಿಷಯವನ್ನು ಎತ್ತಿದಾಗ, ಭಾರತ ಸರಕಾರ ಈಗಾಗಲೇ ಅಲ್ಲಿ ಕೆಲಸ ಮಾಡುತ್ತಿರುವ ಮತ್ತು ಅಲ್ಲಿಗೆ ಹೋಗುವ ಎಲ್ಲ ವ್ಯವಸ್ಥೆ ಆಗಿರುವ ಭಾರತೀಯರಿಗೆ ನೆರವು ಮತ್ತು ರಕ್ಷಣೆ ಒದಗುವಂತೆ ಸರ್ವಪ್ರಯತ್ನಗಳನ್ನು ನಡೆಸಲಾಗುವುದು ಎಂದು ಭರವಸೆ ನೀಡಿತ್ತು. ಅದು ಸಾಧ್ಯವಾಗುವಂತೆ ಮಾಡಬೇಕು.

ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷ

ಕೇಂದ್ರ ಸಮಿತಿ ಇತ್ತೀಚಿನ ಉತ್ತರಪ್ರದೇಶ, ಉತ್ತರಾಖಂಡ, ಪಂಜಾಬ್ ಮತ್ತು ಮಣಿಪುರದ ವಿಧಾನಸಭಾ ಚಉನಾವಣೆಗಳಲ್ಲಿ ಪಕ್ಷದ ಸಾಧನೆಯನ್ನು ವಿಮರ್ಶಿಸಿತು. ಪಕ್ಷದ ಸಾಧನೆ ನಿರಾಶಾದಾಯಕವಾಗಿದೆ.

ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನು, ಜನಗಳ ನಡುವೆ ಅವುಗಳ ಚಟುವಟಿಕೆಗಳನ್ನು ಬಲಪಡಿಸುವ–ಸಾಮೂಹಿಕ ಮಾರ್ಗದ–ಮೂಲಕ ಮಾತ್ರವೇ ಪಕ್ಷ ತನ್ನ ರಾಜಕೀಯ ಮಧ್ಯಪ್ರವೇಶದ ಸಾಮರ್ಥ್ಯಗಳನ್ನು ಬಲಪಡಿಸಲು ಸಮರ್ಥವಾಗುತ್ತದೆ ಎಂಬುದನ್ನು ಪುನರುಚ್ಚರಿಸಿತು.

ಇತ್ತೀಚಿನ ಅವಧಿಯಲ್ಲಿ ಸಿಪಿಐ(ಎಂ)ನ ವಿವಿಧ ಸಾಮೂಹಿಕ ರಂಗಗಳು ದೇಶದೆಲ್ಲೆಡೆಗಳಲ್ಲಿ ಜನಗಳ ಮೇಲೆ ಹೆಚ್ಚುತ್ತಿರುವ ಹೊರೆಗಳು ಮತ್ತು ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸುತ್ತಿರುವುದರ ವಿರುದ್ಧ ಜನಗಳ ಹೋರಾಟಗಳಿಗೆ ನೇತೃತ್ವ ನೀಡಿವೆ.

ಕಾಶ್ಮೀರ

ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿನ ಪರಿಸ್ಥಿತಿಯ ಬಗ್ಗೆ ಕೇಂದ್ರ ಸಮಿತಿ ಗಂಭೀರ ಆತಂಕವನ್ನು ವ್ಯಕ್ತಪಡಿಸಿತು.

ಶ್ರೀನಗರ ಉಪಚುನಾವಣೆ ಕಾಶ್ಮೀರದ ಜನತೆಯ ಪರಕೀಯ ಭಾವ ಎಷ್ಟು ಆಳಕ್ಕೆ ಇಳಿದಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿದೆ. ಮೋದಿ ಸರಕಾರ ಕಣಿವೆಯಲ್ಲಿ ಜನತೆಯ ಅಸಂತೃಪ್ತಿಯನ್ನು ಎದುರಿಸಲು ಬಲಪ್ರಯೋಗ ಮತ್ತು ದಮನವನ್ನಷ್ಟೇ ಅವಲಂಬಿಸಿದೆ. ಎಲ್ಲ ಅಭಿಪ್ರಾಯಗಳ ರಾಜಕೀಯ ವಿಭಾಗಗಳೊಂದಿಗೆ ಸಂವಾದ ಆರಂಭಿಸುವಲ್ಲಿ ವಿಫಲತೆ ಮತ್ತು ಅದು ಹರಿಯಬಿಟ್ಟಿರುವ ಅಮಾನುಷ ದಮನ ಕಾಶ್ಮೀರವನ್ನು ಪ್ರಪಾತದ ಅಂಚಿಗೆ ತಂದು ನಿಲ್ಲಿಸಿದೆ. ಜನತೆಯ ಪ್ರತಿಭಟನೆಗಳ ಅಮಾನುಷ ದಮನವನ್ನು ಕೊನೆಗೊಳಿಸಬೇಕು ಎಂದು ಕೇಂದ್ರ ಸಮಿತಿ ಆಗ್ರಹಿಸಿದೆ.

ಒಂದು ರಾಜಕೀಯ ಸಂವಾದವನ್ನು ಆರಂಭಿಸಲು ಸರಕಾರ ತಕ್ಷಣ ಕ್ರಮಗಳನ್ನು ಕೈಗೊಳ್ಳಬೇಕು.ಕಾಶ್ಮೀರ ಸನ್ನಿವೇಶ ಕುರಿತಂತೆ ಸಮಾನಮನಸ್ಕ ರಾಜಕೀಯ ಶಕ್ತಿಗಳು, ಬುದ್ಧಿಜೀವಿಗಳು ಮತ್ತು ಸಾಮಾಜಿಕ ಆಂದೋಲನಗಳ ಒಂದು ಸಮಾವೇಶವನ್ನು ನಡೆಸಲು ಕೇಂದ್ರ ಸಮಿತಿ ನಿರ್ಧರಿಸಿತು.

ಮಹಿಳಾ ಮೀಸಲಾತಿ

ಮಹಿಳಾ ಮೀಸಲಾತಿ ಮಸೂದೆಯನ್ನು ತ್ವರಿತವಾಗಿ ಅಂಗೀಕರಿಸುವಂತೆ ಮಾಡುವ ತನ್ನ ವಚನ ಪಾಲನೆ ಮಾಡದೆ ಬಿಜಪಿ ಸರಕಾರ ವಿಶ್ವಾಸಘಾತ ಮಾಡುತ್ತಲೇ ಇದೆ. ಇದನ್ನು ಪ್ರತಿಭಟಿಸಲು ಮುಂಬರುವ ಸಂಸತ್ತಿನ ಮಳೆಗಾಲದ ಅಧಿವೇಶನದ ಮೊದಲು ಈ ಮಸೂದೆಯನ್ನು ಅಂಗೀಕರಿಸಬೇಕೆಂದು ಆಗ್ರಹಿಸಿ ಒಂದು ದಿನದ ಪ್ರತಿಭಟನೆಗೆ ಕರೆ ನೀಡಲು ಕೇಂದ್ರ ಸಮಿತಿ ನಿರ್ಧರಿಸಿದೆ. ರಾಜ್ಯಸಭೆ ಈಗಾಗಲೇ ಇದನ್ನು ಪಾಸು ಮಾಡಿದೆ. ಆದರೆ ಈಗ ಲೋಕಸಭೆಯಲ್ಲಿ ಅತ್ಯಂತ ಸ್ಪಷ್ಟ ಬಹುಮತ ಇದ್ದರೂ ಬಿಜೆಪಿ ಈ ಮಸೂದೆಯನ್ನು ಶಸನವಾಗಿಸಲು ನಿರಾಕರಿಸುತ್ತಿದೆ. ಇದು ಸ್ಪಷ್ಟವಾದ ವಿಶ್ವಾಸಘಾತ.

ಹೆಚ್.ಆರ್. ನವೀನ್ ಕುಮಾರ್

ರೈತ ಸಂಘದ ಹೋರಾಟಗಳು

ಬಗರ್ ಹುಕುಂ ಸಕ್ರಮ ಮಾಡಿ– ಭೂಮಿ – ನೀರು ನಮ್ಮ ಹಕ್ಕು– ಜೈಲ್ ಭರೋ

ಕರ್ನಾಟಕ ಪ್ರಾಂತ ರೈತ ಸಂಘ ತನ್ನ 16ನೇ ರಾಜ್ಯ ಸಮ್ಮೇಳನವನ್ನು ಏಪ್ರಿಲ್ 25 ರಿಂದ 27ರವರೆಗೆ ಹುಬ್ಬಳ್ಳಿಯಲ್ಲಿ "ಕೃಷಿ ರಕ್ಷಿಸಿ, ಕೃಷಿಕರನ್ನು ರಕ್ಷಿಸಿ, ದೇಶ ಉಳಿಸಿ" ಆಶಯದೊಂದಿಗೆ ನಡೆಸುತ್ತಿದೆ. 15 ನೇ ರಾಜ್ಯ ಸಮ್ಮೇಳನ ನಡೆದ ನಂತರ ದೇಶದಲ್ಲಿ ಮತ್ತು ಪ್ರಮುಖವಾಗಿ ರಾಜ್ಯದಲ್ಲಿ ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಬೆಳವಣಿಗೆಗಳಾಗಿದ್ದು ಕೃಷಿ ಕ್ಷೇತ್ರ ತೀವ್ರ ಬಿಕ್ಕಟ್ಟಿಗೆ ಸಿಲುಕಿದ್ದರಿಂದ ಅದನ್ನೇ ನಂಬಿ ಬದುಕುತ್ತಿದ್ದ ರೈತರು ಜೀವನ ಸಾಗಿಸಲಾಗದೆ ಆತ್ಮಹತ್ಯೆಯ ದಾರಿ ತುಳಿಯುತ್ತಿದ್ದಾರೆ. ಇಂತಹ ಸಂದಿಗ್ದ ಸಂದರ್ಭದಲ್ಲಿ ಕೃಷಿ ಕ್ಷೇತ್ರವನ್ನು ಬಿಕ್ಕಟ್ಟಿನಿಂದ ಹೊರತರಲು ಮತ್ತು ರೈತರನ್ನು ಉಳಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ಪರವಾದ ನೀತಿಗಳನ್ನು ಜಾರಿಗೆ ತರುವಂತೆ ಹಲವು ನಿರ್ಣಾಯಕ ಚಳುವಳಿಗಳನ್ನು ನಡೆಸಲಾಗಿದೆ. ಕಳೆದ ಈ ಮೂರು ವರ್ಷಗಳ ಅವಧಿಯಲ್ಲಿ ಕೃಷಿ ಕ್ಷೇತ್ರವನ್ನು ಉಳಿಸಲು ಕರ್ನಾಟಕ ಪ್ರಾಂತ ರೈತ ಸಂಘ ನಡೆಸಿದ ಪ್ರಮುಖ ರೈತ ಚಳುವಳಿಗಳ ಒಂದು ಜಲಕ್ ಇಲ್ಲಿದೆ.

ಜುಲೈ 1–3, 2016 ವಿಧಾನ ಸೌಧ ಚಲೊ – ಅ.ಭಾ. ಕಿಸಾನ್ ಕೌನ್ಸಿಲ್ ಸಭೆ

ಜುಲೈ 1 ರಿಂದ 3 ರವರೆಗೆ ಬೆಂಗಳೂರಿನಲ್ಲಿ ಅಖಿಲ ಭಾರತ ಕಿಸಾನ್ ಸಭಾದ ಕೌನ್ಸಿಲ್ ಸಭೆ ನಡೆ–ಯಿತು. ಈ ಸಭೆಯ ಅಂಗವಾಗಿ ಮೊದಲ ದಿನ ಅಂದರೆ ಜುಲೈ 1 ರಂದು ರೈತರ ಬೃಹತ್ ರ್‍ಯಾಲಿ ಮತ್ತು ಬಹಿರಂಗ ಸಭೆಯನ್ನ ನಡೆಸಲಾಯಿತು.



ಅಕ್ಟೋಬರ್ 7–14 2014

ಮೈಸೂರು–ಬೆಂಗಳೂರು ಜಾಥಾ, ಹಗಲು ರಾತ್ರಿ ಧರಣಿ

ಅಕ್ಟೋಬರ್ 13 ರಂದು ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮ ಮಾಡಬೇಕು, ಎಲ್ಲಾ ಬಡವರಿಗೂ ಮನೆ ನಿವೇಶನಕ್ಕಾಗಿ ಒತ್ತಾಯಿಸಿ ರಾಜಧಾನಿ ಬೆಂಗಳೂರಿನಲ್ಲಿ ಎರಡು ದಿನಗಳ ಕಾಲ ಅನಿರ್ಧಿಷ್ಟಾವಧಿ ಹೋರಾಟವನ್ನು ನಡೆಸಲಾಯಿತು. ರಾಜ್ಯದ ಮೂಲೆ ಮೂಲೆಗಳಿಂದ ಬಂದಿದ್ದ ಸಾವಿರಾರು ಸಂಖ್ಯೆಯ ರೈತರು ಸ್ವತಂತ್ರ್ಯ ಉದ್ಯಾನವನದಲ್ಲಿ ಹಗಲು ರಾತ್ರಿ ಧರಣಿ ನಡೆಸಿದರು.

ಈ ಹೋರಾಟಕ್ಕೆ ಪೂರಕವಾಗಿ ಅಕ್ಟೋಬರ್ 7 ರಂದು ಮೈಸೂರಿನಲ್ಲಿ ಉಧ್ಘಾಟನೆಯಾದ ಪಾದಯಾತ್ರೆಯು 7 ದಿನಗಳ ಕಾಲ 145 ಕಿಲೋಮೀಟರ್ ಸಂಚರಿಸಿ 13 ರಂದು ಬೆಂಗಳೂರಿನ ಹೋರಾಟಕ್ಕೆ ಸೇರಿಕೊಂಡಿತು.

ವಿವರಗಳಿಗೆ ಕರ್ನಾಟಕ ಪ್ರಾಂತ ರೈತ ಸಂಘದ ಬ್ಲಾಗ್ ನೋಡಿ

https://tinyurl.com/n3zuw2j





ನವೆಂಬರ್ 24, 2015 ಹಾಲು ಉತ್ಪಾದಕರ ಪ್ರತಿಭಟನೆ

ನವೆಂಬರ್ 24 ರಂದು ಹಾಲು ಉತ್ಪಾದಕರ ಸಮಸ್ಯೆಗಳನ್ನು ಇತ್ಯರ್ಥ ಪಡಿಸಲು ಒತ್ತಯಿಸಿ ಬೆಂಗಳೂರಿನಲ್ಲಿ ಹಾಲು ಉತ್ಪಾದಕರ ಪ್ರತಿಭಟನೆಯನ್ನ ನಡೆಸಲಾಯಿತು. ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ರಾಜ್ಯ ಪಶು ಸಂಗೋಪನಾ ಖಾತೆ ಸಚಿವರಾದ ಎ.ಮಂಜು ಮನವಿ ಸ್ವೀಕರಿಸಿದರು.

ಜೂನ್ 25, 2015 ಅರಣ್ಯ ಸಚಿವ ಮನೆ ಮುಂದೆ ಪ್ರತಿಭಟನೆ



ರಾಜ್ಯದಲ್ಲಿ ಅರಣ್ಯ ಒತ್ತುವರಿದಾರರನ್ನು ತೆರವುಗೊಳಿಸಲು ರಾಜ್ಯ ಸರ್ಕಾರ ಆದೇಶ ಮಾಡಿ ರೈತರಿಗೆ ಕಿರುಕುಳ ನೀಡುತ್ತಿದ್ದ ಸಂದರ್ಭದಲ್ಲಿ ಜೂನ್ 24 ರಂದು ಬೆಂಗಳೂರಿನಲ್ಲಿ ರಾಜ್ಯ ಅರಣ್ಯ ಖಾತೆ ಸಚಿವ ರಮಾನಾಥ್‌ರೈ ರವರ ಮನೆಯ ಮುಂದೆ ಪ್ರತಿಭಟನಾ ಪ್ರದರ್ಶನವನ್ನು ನಡೆಸಲಾಯಿತು.

ಆಗಸ್ಟ್ 14 ಮತ್ತು 15, 2016 ರೈತರ ಆತ್ಮಹತ್ಯೆ ತಡೆಗಟ್ಟಲು ಪಾದಯಾತ್ರೆ

ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲು ಒತ್ತಾಯಿಸಿ ಹುಬ್ಬಳ್ಳಿಯಿಂದ ನರಗುಂದಕ್ಕೆ ಆಗಸ್ಟ್ 14 ಮತ್ತು 15 ರಂದು ಎರಡು ದಿನಗಳ ಕಾಲ ರೈತರ ಪಾದಯಾತ್ರೆಯನ್ನ ನಡೆಸಲಾಗಿದೆ.

ಜಿಲ್ಲಾ / ತಾಲೂಕು ಮಟ್ಟದ ಹೋರಾಟಗಳು

ಈ ನಡುವೆ ರಾಜ್ಯದ ಗಮನ ಸೆಳೆಯುವ ಕೆಲವು ಜಿಲ್ಲಾ ಮಟ್ಟದ ಹೋರಾಟಗಳು ನಡೆದಿವೆ ತೊಗರಿ ಬೆಳೆಗೆ ಬೆಂಬಲ ಬೆಲೆ ನಿಗದಿಮಾಡಬೇಕೆಂದು ಒತ್ತಾಯಿಸಿ ಕಲ್ಬುರ್ಗಿ ಬಂದ್ ನಡೆಸಲಾಗಿದೆ. ಶಾಶ್ವತ ನೀರಾವರಿ ಯೋಚನೆ ಜಾರಿಯಾಗಬೇಕೆಂದು ಒತ್ತಾಯಿಸಿ ಚಿಕ್ಕಬಳ್ಳಾಪುರ ಜಿಲ್ಲಾ ಬಂದ್ ನಡೆದಿದೆ. ಬರಗಾಲದ ಕಾಮಗಾರಿಗಳನ್ನು ಕೈಗೊಳ್ಳಬೇಕು ಮತ್ತು ಸಮಗ್ರವಾಗಿ ಬರಪರಿಹಾರ ನೀಡಿ ಬರ ನಿರ್ವಹಣೆ ಮಾಡಬೇಕೆಂದು ಒತ್ತಾಯಿಸಿ ಕೋಲಾರ ಜಿಲ್ಲಾ ಬಂದ್ ನಡೆಸಲಾಗಿದೆ. ಸಾಗುವಳಿ ಮಾಡುತ್ತಿರುವ ಸರ್ಕಾರಿ ಭೂಮಿಯನ್ನು ರೈತ–ರಿಂದ ತೆರವುಗೊಳಿಸಲು ಮುಂದಾದ ಅರಣ್ಯ ಇಲಾಖೆಯ ತೆರವು ಕಾರ್ಯಾಚರಣೆಯನ್ನ ತಡೆದ ನಿರ್ಣಾಯಕ ಹೋರಾಟದಲ್ಲಿ ಹಾಸನ ಜಿಲ್ಲೆಯ ನಾಲ್ಕು ಜನ ಸಂಗಾತಿಗಳನ್ನು 6 ದಿನಗಳ ಕಾಲ ಜೈಲಿನಲ್ಲಿಡಲಾಗಿತ್ತು.

ರಾಜ್ಯ ಮಟ್ಟದ ಚಳುವಳಿಗಳಲ್ಲದೆ ಜಿಲ್ಲೆ ಮತ್ತು ತಾಲ್ಲೂಕು ಮಟ್ಟಗಳಲ್ಲಿ ಹಲವು ನಿರ್ಣಾಯಕ ಹೋರಾಟಗಳನ್ನು ನಡೆಸಲಾಗಿದೆ. ಈ ಮೂರು ವರ್ಷಗಳ ಅವಧಿಯಲ್ಲಿ ರಾಜ್ಯಾದ್ಯಂತ ಲಕ್ಷಾಂತರ ರೈತರು ಕೆಂಬಾವುಟವನ್ನಿಡಿದು ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಚಳುವಳಿಗಳಲ್ಲಿ ನೇರವಾಗಿ ತೊಡಗಿಸಿಕೊಂಡಿದ್ದಾರೆ. ಆ ಮೂಲಕ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ರೈತ ವಿರೋಧಿ ನೀತಿಗಳ ವಿರುದ್ಧ ಪ್ರತಿರೊಧವನ್ನು ಕಟ್ಟಲು ಸಾಧ್ಯವಾಗಿದೆ.

'ಭೂಮಿ ಮತ್ತು ನೀರು ನಮ್ಮ ಹಕ್ಕು' ಘೋಷಣೆ , ರೈತದ್ರೋಹಿ ಭೂ ಸ್ವಾಧೀನ ಸುಗ್ರೀವಾಜ್ಞೆ ವಿರುದ್ಧ-ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ-ಶಾಶ್ವತ ನೀರಾವರಿ ಯೋಜನೆಗಾಗಿ ಭಾರೀ ಪ್ರತಿಭಟನೆ.



ಏಪ್ರಿಲ್ 28, 2015



ಏಪ್ರಿಲ್ 28, 2015 ರಂದು ಭೂಮಿ ನೀರು ನಮ್ಮ ಹಕ್ಕು ಎಂಬ ಘೋಷಣೆ ಅಡಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, ಅಖಿಲ ಭಾರತ ಕಿಸಾನ್ ಸಭಾ, ರಾಜ್ಯ ರೈತ ಸಂಘ, ದಲಿತ ಸಂಘರ್ಷ ಸಮಿತಿಗಳು ಜಂಟಿಯಾಗಿ ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಪ್ರತಿಭಟನಾ ಸಭೆಯನ್ನ ಏರ್ಪಡಿಸಲಾಗಿತ್ತು. ಈ ಪ್ರತಿಭಟನಾ ಸಭೆಗೆ ರಾಜ್ಯ ಸಭಾ ಸದಸ್ಯರೂ ಮತ್ತು ಸಿಪಿಐಎಂ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ಎಐಕೆಎಸ್ ನ ಪ್ರಧಾನ ಕಾರ್ಯದರ್ಶಿ ಹನ್ನನ್ ಮುಲ್ಲ, ಮೇಧಾ ಪಾಟ್ಕರ್ ಮುಂತಾದವರು ಭಾಗವಹಿಸಿದ್ದರು. ಫ್ರೀಡಂ ಪಾರ್ಕಿನಲ್ಲಿ ನಡೆದ ಈ ಪ್ರತಿಭಟನಾ ಸಭೆಗೆ ರೈತರು ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದರು. ಈ ಹೋರಾಟಕ್ಕೆ ಪೂರಕವಾಗಿ ಮಧ್ಯ ಕರ್ನಾಟಕದ ಜಿಲ್ಲೆಗಳಿಗೆ ಶಾಶ್ವತ ನೀರಾವರಿ ಯೋಜನೆಯನ್ನ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಚಿಕ್ಕಬಳ್ಳಾಪುರ ಜಿಲ್ಲೆಯ ಬಾಗೇಪಲ್ಲಿಯಿಂದ ಒಂದು ಪಾದಯಾತ್ರೆ ಬೆಂಗಳೂರಿಗೆ ಮತ್ತು ರೈತ ವಿರೊಧಿ ಕರಾಳ ಭೂಸ್ವಾಧೀನ ಕಾಯ್ದೆ ತಿದ್ದುಪಡಿ ವಿರೊಧಿಸಿ ಏಪ್ರಿಲ್ 8 ರಂದು ನರಗುಂದದಿಂದ ಹೊರಟ ಮತ್ತೊಂದು ಪಾದಯಾತ್ರೆಯು 464 ಕಿಲೋಮೀಟರ್‌ಗಳನ್ನು ಸಂಚರಿಸಿ ಏಪ್ರಿಲ್ 28 ರಂದು ಬೆಂಗಳೂರಿಗೆ ತಲುಪಿತು. ಇಂತಹ ಎರಡು ಐತಿಹಾಸಿಕ ರೈತರ ಪಾದಯಾತ್ರೆಗಳು ರಾಜಧಾನಿಯಲ್ಲಿ ಒಂದೆಡೆ ಸೇರಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ರೈತ ವಿರೋಧಿ ನೀತಿಗಳನ್ನು ವಿರೊಧಿಸಿದರು.

ವಿವರಗಳಿಗೆ ಕರ್ನಾಟಕ ಪ್ರಾಂತ ರೈತ ಸಂಘದ ಬ್ಲಾಗ್ ನೋಡಿ
https://tinyurl.com/mq6lc8w









ನವೆಂಬರ್ 18, 2016 ರಾಜ್ಯದಾದ್ಯಂತ ಜೈಲು ಭರೋ

ಬಗರ್ ಹುಕುಂ ಸಾಗುವಳಿಯನ್ನ ಸಕ್ರಮ ಮಾಡಲು ತೊಡಕಾಗಿರುವ ಕಾನೂನಿಗೆ ತಿದ್ದುಪಡಿ ಮಾಡಲು ಒತ್ತಾಯಿಸಿ, ಎಲ್ಲಾ ಬಡವರಿಗೂ ಮನೆ ನಿವೇಶನ ನೀಡುವಂತೆ ಒತ್ತಾಯಿಸಿ ನವೆಂಬರ್ 18 ರಂದು ರೈತ ಕೂಲಿಕಾರ ಮತ್ತು ಕಾರ್ಮಿಕ ಸಂಘಟನೆಗಳ ಜಂಟಿ ಆಶ್ರಯದಲ್ಲಿ ರಾಜ್ಯಾದ್ಯಂತ ಜೈಲ್ ಭರೋ ಚಳುವಳಿಯನ್ನು ಯಶಸ್ವಿಯಾಗಿ ನಡೆಸಲಾಗಿದೆ. ರಾಜ್ಯದ ಬಹುತೇಕ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಮತ್ತು ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದ ರೈತ ಕೂಲಿಕಾರ ಮತ್ತು ಕಾರ್ಮಿಕರು ಸಂಘರ್ಷಾತ್ಮಕ ಹೋರಾಟವನ್ನ ನಡೆಸಿದ್ದಾರೆ ಹಲವೆಡೆ ಪ್ರತಿಭಟನಾ ಕಾರರನ್ನು ಬಂಧಿಸಿ ಬಿಡುಗಡೆ ಮಾಡಲಾಗಿದೆ. ಆದರೆ ಚಿಕ್ಕಬಳ್ಳಾಪುರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಪ್ರತಿಭಟನಾ ಕಾರರನ್ನು ಬಂಧಿಸಿ ಜೈಲಿಗೆ ಕಳುಹಿಸಲಾಯಿತು.



ವಿವರಗಳಿಗೆ ಈ ಜನಶಕ್ತಿ ವೆಬ್ ಸೈಟ್ ಕೊಂಡಿ ನೋಡಿ

http://janashakthi.co.in/node/2420
http://janashakthi.co.in/node/2339







ಹೊರಗುತ್ತಿಗೆ ನೌಕರರ ಸಾಮೂಹಿಕ ಧರಣಿ



ಕೆ. ಹನುಮೇಗೌಡ

ವಿವಿಧ ವಿದ್ಯಾರ್ಥಿ ನಿಲಯಗಳಲ್ಲಿ ವಿವಿಧ ಕೆಲಸಗಳನ್ನು ಮಾಡುತ್ತಿರುವ ಡಿ–ವೃಂದದ ನೌಕರರು ಏಪ್ರಿಲ್ 17 ರಂದು ಬೆಂಗಳೂರು ಸ್ವಾತಂತ್ರ್ಯ ಉದ್ಯಾನವನದಲ್ಲಿ ಸಾಮೂಹಿಕ ಧರಣಿಯನ್ನು ನಡೆಸಿದರು. ಧರಣಿಯಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಅಡುಗೆ, ಸಫಾಯಿ, ಕಾವಲು ಮೊದಲಾದ ಕೆಲಸಗಳನ್ನು ಮಾಡುತ್ತಿರುವ ಡಿ–ವೃಂದದ ನೌಕರರು ಭಾಗವಹಿಸಿದ್ದರು. ಇವರು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ, ಪರಿಶಿಷ್ಟ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳು, ಕರ್ನಾಟಕ ಸರ್ಕಾರದ ಅಂಗ ಸಂಸ್ಥೆಯಾದ 'ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು" ನಡೆಸುತ್ತಿರುವ ಮೊರಾರ್ಜಿ ದೇಸಾಯಿ, ರಾಣಿ ಚೆನ್ನಮ್ಮ ಮತ್ತು ವಾಜಪೇಯಿ ವಸತಿ ಶಾಲೆ ಮತ್ತು ವಸತಿ ಕಾಲೇಜುಗಳು ಹಾಗೂ ಏಕಲವ್ಯ ಆಶ್ರಮ ಶಾಲೆಗಳಲ್ಲಿ ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಇವರು ಹೊರಗುತ್ತಿಗೆ ಆಧಾರದಲ್ಲಿ ಕೆಲಸಗಳನ್ನು ಮಾಡುತ್ತಿರುವವರು. ಆರಂಭದಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಿಂದ ನೌಕರರ ಬೃಹತ್ ಮೆರವಣಿಗೆ ಹೊರಡಿಸಲಾಗಿತ್ತು. ಸಂಘದ ಅಧ್ಯಕ್ಷ ನಿತ್ಯಾನಂದಸ್ವಾಮಿ, ಪ್ರಧಾನ ಕಾರ್ಯದರ್ಶಿ ಭೀಮಶೆಟ್ಟಿ ಯಂಪಳ್ಳಿ, ಸಹ ಕಾರ್ಯದರ್ಶಿ ಕೆ. ಹನುಮೇಗೌಡ, ಖಜಾಂಚಿ ಚಂದ್ರಪ್ಪ ಹೊಸ್ಕೇರಾ ಮೊದಲಾದವರು ನೇತೃತ್ವ ವಹಿಸಿದ್ದರು.

ಹೊರಗುತ್ತಿಗೆ ಪದ್ಧತಿಯನ್ನು ಕೈ ಬಿಟ್ಟು ಸೇವೆಯನ್ನು ಕಾಯಂಗೊಳಿಸಲು ಆಗ್ರಹ :

ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಮತ್ತು ವಸತಿ ಶಾಲೆಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ಡಿ–ವೃಂದದ ನೌಕರರು ಬಹುತೇಕವಾಗಿ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯಗಳಿಗೆ ಸೇರಿದವರಾಗಿದ್ದು ಅವರಲ್ಲಿ ಮಹಿಳೆಯರೇ ದೊಡ್ಡ ಸಂಖ್ಯೆಯಲ್ಲಿದ್ದಾರೆ.

ಈ ಹಿಂದೆ ಅನೇಕ ಸಲ ಸತ್ಯಾಗ್ರಹಗಳನ್ನು ಮಾಡಿ ಮನವಿ ಸಲ್ಲಿಸಿ ಗುತ್ತಿಗೆದಾರರ ಶೋಷಣೆಯಿಂದ ತಮ್ಮನ್ನು ಮುಕ್ತಗೊಳಿಸಬೇಕೆಂದು ಆಗ್ರಹಿಸುತ್ತಾ ಬಂದಿದ್ದಾರೆ. ಆದರೆ, ಗುತ್ತಿಗೆದಾರರ ಶೋಷಣೆ ಮುಂದುವರೆಯುತ್ತಿದೆ. ಗುತ್ತಿಗೆದಾರರು ನೌಕರರಿಗೆ ಸರ್ಕಾರ ನಿಗದಿಪಡಿಸಿದ ವೇತನ ನೀಡುವುದಿಲ್ಲ. ತಿಂಗಳುಗಟ್ಟಲೆ ವೇತನ ನೀಡದೆ ಸತಾಯಿಸುತ್ತಿರುತ್ತಾರೆ.

ಗುತ್ತಿಗೆದಾರರು ನೌಕರರ ವೇತನದಲ್ಲಿ 13.75% ರಷ್ಟನ್ನು ಪಿ.ಎಫ್. ಮತ್ತು ಇ.ಎಸ್.ಐ. ವಂತಿಗೆಯಾಗಿ ಕಡಿತ ಮಾಡುತ್ತಾರೆ. ಅದನ್ನು ಸಂಬಂಧಪಟ್ಟ ಇಲಾಖೆಯಲ್ಲಿ ಸಂಬಂದಪಟ್ಟ ನೌಕರನ ಖಾತೆಗೆ ಜಮಾ ಮಾಡದೆ ಮೋಸ ಮಾಡುತ್ತಾರೆ. ಹೊರಗುತ್ತಿಗೆ ನೌಕರರು ಕಷ್ಟಪಟ್ಟುಗಳಿಸಿದ ಅವರ ವೇತನದ ಈ ಭಾಗವನ್ನು ಅಪಹರಣ ಮಾಡುತ್ತಿದ್ದಾರೆ. ಅಧಿಕಾರಿಗಳು, ವಾರ್ಡ್‌ನಗಳು, ಪ್ರಿನ್ಸಿಪಾಲರುಗಳು ನೌಕರರಿಗೆ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟುವ ಬದಲು ಗುತ್ತಿಗೆದಾರರ ಜೊತೆಯಲ್ಲಿ ಪಾಲುದಾರರಾಗುತ್ತಾರೆ. ಮೇಲಾಧಿಕಾರಿಗಳಿಂದ ಬರುವಯಾವ ಸುತ್ತೋಲೆಗಳನ್ನು ಇವರು ಜಾರಿಮಾಡುವುದಿಲ್ಲ.

ಆದ್ದರಿಂದ ಈ ಅನಿಷ್ಠ ಹೊರಗುತ್ತಿಗೆ ಪದ್ಧತಿಯನ್ನು ಕೂಡಲೇ ಕೈಬಿಟ್ಟು ಹೊರಗುತ್ತಿಗೆ ನೌಕರರಿಗೆ ನ್ಯಾಯ ದೊರಕಿಸಬೇಕೆಂದು ಹೊರಗುತ್ತಿಗೆ ನೌಕರರ ಆಗ್ರಹವಾಗಿದೆ.

ನೇರ ನೇಮಕಾತಿ ಮೂಲಕ ನಮ್ಮನ್ನು ಬೀದಿ ಪಾಲು ಮಾಡಬೇಡಿ

ಈ ನಡುವೆ 2016 ರಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಗಳು ತಾವು ನಡೆಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿ ಅಡುಗೆ ಮತ್ತು ಕಾವಲು ಕೆಲಸ ಮಾಡುವ ಡಿ–ವೃಂದದ ಹುದ್ದೆಗಳನ್ನು ತುಂಬಲು ನೇರ ನೇಮಕಾತಿ ಪ್ರಕ್ರಿಯೆಯನ್ನು ಆರಂಭಿಸಿದವು. ಅಡುಗೆ ಮಾಡುವವರು, ಕಾವಲು ಕೆಲಸ ಮಾಡುವವರು 10ನೇ ತರಗತಿ ಪಾಸಾಗಿರಬೇಕು ಎಂಬ ಷರತ್ತನ್ನು ವಿಧಿಸಲಾಯಿತು. ವಯೋಮಿತಿಯನ್ನು ಹೇರಲಾಯಿತು. ಕಳೆದ ಹತ್ತಾರು ವರ್ಷಗಳಿಂದ ಗುತ್ತಿಗೆದಾರರ ಮೋಸದಿಂದ ಅತ್ಯಲ್ಪ ವೇತನಕ್ಕೆ ದುಡಿಯುತ್ತಾ ಬಂದಿದ್ದ ಹಾಲಿ ಹೊರಗುತ್ತಿಗೆ ನೌಕರರು ಬೀದಿ ಪಾಲಾಗುವ ಪ್ರಸಂಗ ಬಂತು. ನೌಕರರು 2016ರ ಅಕ್ಟೋಬರ್ ತಿಂಗಳಲ್ಲಿ ಒಮ್ಮೆ ಬೆಂಗಳೂರಿನಲ್ಲಿ ಮತ್ತೆ ನವೆಂಬರ್ ತಿಂಗಳಲ್ಲಿ ಇನ್ನೊಮ್ಮೆ ಬೆಳಗಾವಿ ಸುವರ್ಣ ಸೌಧದ ಎದುರು ಪ್ರತಿಭಟನೆ ನಡೆಸಿ, ನೇರ ನೇಮಕಾತಿಯನ್ನು ಕೈಬಿಟ್ಟು ಹಾಲಿ ಹೊರಗುತ್ತಿಗೆ ನೌಕರರ ಸೇವೆಯನ್ನು ಕಾಯಂ ಮಾಡುವಂತೆ ಮನವಿ ಸಲ್ಲಿಸಿದರು. ಬೆಳಗಾವಿಯಲ್ಲಿ ವಿಧಾನ ಮಂಡಲದ ಅಧಿವೇಶನ ನಡೆಯುತ್ತಿದ್ದಾಗ ರಾಜ್ಯದ ಶಾಸಕರು ಪಕ್ಷಭೇದ ಇಲ್ಲದೆ ನೌಕರರ ಬೇಡಿಕೆಯನ್ನು ಬೆಂಬಲಿಸಿದರು. ಸರ್ಕಾರ ನೇರ ನೇಮಕಾತಿಯನ್ನು ತಾತ್ಕಾಲಿಕವಾಗಿ ಹಿಂಪಡೆಯಿತು.



ಆದರೆ ಇದೊಂದು ತಾತ್ಕಾಲಿಕ ಕ್ರಮ. ಮತ್ತೆ ನೌಕರರಿಗೆ ಅಪಾಯ ತಪ್ಪಿದಲ್ಲ. ಆದ್ದರಿಂದ ಮತ್ತೆ ಬೆಂಗಳೂರಿಗೆ ಬಂದು ಧರಣಿ ಸತ್ಯಾಗ್ರಹ ನಡೆಸಿದರು. ನಮಗೆ ಶೈಕ್ಷಣಿಕ ಅರ್ಹತೆ ಇರಲಿಕ್ಕಿಲ್ಲ. ಆದರೆ ಇಷ್ಟು ವರ್ಷ ಕೆಲಸ ಮಾಡಿ ನಮಗೆ ಅನುಭವವಿದೆ. ಪರಿಣತಿಯಿದೆ. ನಮ್ಮ ಸೇವಾ ಅನುಭವವನ್ನೇ ಅರ್ಹತೆ ಎಂದು ಪರಿಗಣಿಸಿ, ಅಗತ್ಯವೆನಿಸಿದರೆ ನೇಮಕಾತಿ ನಿಯಮಗಳಲ್ಲಿ ಸೂಕ್ತ ತಿದ್ದುಪಡಿ ಮಾಡಿ ನಮ್ಮನ್ನು ಕಾಯಂ ಮಾಡಬೇಕೆಂದು ನೌಕರರ ಒತ್ತಾಯವಾಗಿದೆ.

ಸಮಾನ ಕೆಲಸಕ್ಕೆ ಸಮಾನ ವೇತನ ನೀಡಿ

ಹೊರಗುತ್ತಿಗೆ ಪದ್ಧತಿ ಕಾನೂನು ಬಾಹಿರವಾಗಿದೆ. ವಿದ್ಯಾರ್ಥಿ ನಿಲಯಗಳಲ್ಲಿ ಡಿ–ವೃಂದದ ನೌಕರರು ಮಾಡುತ್ತಿರುವ ಅಡುಗೆ, ಸಫಾಯಿ, ಕಾವಲು ಮುಂತಾದ ಕೆಲಸಗಳು ಕಾಯಂ ಸ್ವರೂಪದ ಕೆಲಸಗಳು. ಈ ಕೆಲಸಗಳಿಗೆ ಕಾಯಂ ನೌಕರರನ್ನೂ ನೇಮಿಸಲಾಗುತ್ತದೆ. ಕಾಯಂ ಸ್ವರೂಪದ ಕೆಲಸಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ನೌಕರರನ್ನು ನೇಮಿಸುವುದು ಕಾನೂನಿನ ಉಲ್ಲಂಘನೆಯಾಗಿದೆ. ಆದ್ದರಿಂದತಮ್ಮ ಸೇವೆಯನ್ನು ಕಾಯಂ ಮಾಡಿ ಎಂದು ನೌಕರರು ಕೋರುತ್ತಿದ್ದಾರೆ.

ಅಲ್ಲಿಯವರೆಗೆ, 'ಸಮಾನ ಕೆಲಸಕ್ಕೆ ಸಮಾನ ವೇತನ' ನೀಡಬೇಕೆಂಬ ಸರ್ವೋಚ್ಛ ನ್ಯಾಯಾಲಯದ 26.10.2016 ರತೀರ್ಪಿನ ಪ್ರಕಾರ ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಮತ್ತುವಸತಿ ಶಾಲೆ – ಕಾಲೇಜುಗಳಲ್ಲಿ ದುಡಿಯುತ್ತಿರುವ ಹೊರಗುತ್ತಿಗೆ ನೌಕರರಿಗೆ ಕಾಯಂ ನೌಕರರಿಗೆ ನೀಡುವ ವೇತನವನ್ನೇ ನೀಡಬೇಕೆಂದು ಮನವಿ ಮಾಡಿದ್ದಾರೆ.

ಕಾರ್ಮಿಕ ಕಾನೂನುಗಳ ಜಾರಿ

ಹೊರಗುತ್ತಿಗೆ ನೌಕರರರಾದ ಇವರಿಗೆ 1) 1970 ರ ಗುತ್ತಿಗೆ ಕಾರ್ಮಿಕ (ನಿಯಂತ್ರಣ ಮತ್ತು ರದ್ಧತಿ) ಕಾಯ್ದೆ 2) 1948 ರ ಕನಿಷ್ಠ ವೇತನ ಕಾಯ್ದೆ 3) 1947 ರ ಕೈಗಾರಿಕಾ ವಿವಾದಗಳ ಕಾಯ್ದೆ 4) 1963 ರ ಕರ್ನಾಟಕ ಕೈಗಾರಿಕೋದ್ಯಮಗಳ (ರಾಷ್ಟ್ರೀಯ ಮತ್ತು ಹಬ್ಬಗಳ ರಜೆ) ಕಾಯ್ದೆ 5) 1961 ರ ಹೆರಿಗೆ ಸೌಲಭ್ಯ ಕಾಯ್ದೆ 6) 1936 ರ ವೇತನ ಪಾವತಿ ಕಾಯ್ದೆ 7) 1923 ರ ಕಾರ್ಮಿಕ ಪರಿಹಾರ ಕಾಯ್ದೆ 8)ಕಾರ್ಮಿಕರ ಭವಿಷ್ಯ ನಿಧಿ ಕಾಯ್ದೆ 9) ಕಾರ್ಮಿಕರ ರಾಜ್ಯ ವಿಮಾ ಕಾಯ್ದೆ ಮೊದಲಾದ ಕಾರ್ಮಿಕ ಕಾನೂನುಗಳು ಅನ್ವಯವಾಗುತ್ತಿದ್ದು ಅವುಗಳ ಸೌಲಭ್ಯಗಳು ದೊರಕುತ್ತಿಲ್ಲ. ನೌಕರರಿಗೆ ವಾರದ ರಜೆ ಇಲ್ಲ. ಅನಿವಾರ್ಯವಾಗಿ ಕೆಲಸಕ್ಕೆ ಗೈರು ಹಾಜರಾದರೆ ಅವರ ವೇತನದಲ್ಲಿ ಅಕ್ರಮ ಕಡಿತ ಮಾಡಿ ಅನ್ಯಾಯ ಮಾಡುತ್ತಾರೆ. ಕಾಯಿಲೆ ರಜೆ ಇಲ್ಲ. ಕಾಯಿಲೆಯಾದರೆ ಇವರು ಬದಲಿ ಕೆಲಸಗಾರನನ್ನು ಒದಗಿಸಬೇಕು. ಪಿ.ಎಫ್. ಮತ್ತು ಇಎಸ್‌ಐ ಕಾಯ್ದೆಗಳ ಪ್ರಕಾರ ವೇತನದಲ್ಲಿ ತಿಂಗಳಿಗೆ ಶೇ. 13.75 ರಷ್ಟು ವಂತಿಗೆ ಕಡಿತ ಮಾಡಲಾಗುತ್ತದೆ. ಆದರೆ ಆ ವಂತಿಗೆ ಹಣ ಸಂಬಂಧಪಟ್ಟ ಇಲಾಖೆಯಲ್ಲಿ ನೌಕರರ ಖಾತೆಗೆ ಜಮಾ ಮಾಡದೆ ಲೂಟಿ ಮಾಡುತ್ತಾರೆ. ಆದ್ದರಿಂದ ತಮ್ಮ ನ್ಯಾಯ ಸಮ್ಮತವಾದ ಬೇಡಿಕೆಗಳನ್ನು ಕುರಿತು ಚರ್ಚಿಸಿ ಪರಿಹಾರವನ್ನು ಒದಗಿಸಲು ಸರ್ಕಾರ ಸಂಬಂಧಪಟ್ಟ ಇಲಾಖೆಗಳ ಹಿರಿಯ ಅಧಿಕಾರಿಗಳನ್ನು ಒಳಗೊಂಡ ದ್ವಿಪಕ್ಷೀಯ ಸಭೆಯನ್ನು ಕರೆಯಬೇಕೆಂದು ನೌಕರರು ಮನವಿ ಸಲ್ಲಿಸಿದ್ದಾರೆ.


ಎಪ್ರಿಲ್ 27 ರಂದು ದ್ವಿಪಕ್ಷೀಯ ಸಭೆ:

ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮಣಿವಣ್ಣನ್ ಹಾಗೂ ಆಯುಕ್ತರು ವಿಕಾಸ್‌ಕುಮಾರ್ ಅವರು ಧರಣಿ ಸ್ಥಳಕ್ಕೆ ಬೇಟಿ ಕೊಟ್ಟು ಪ್ರತಿಭಟನಾಕಾರರಿಂದ ಮನವಿಯನ್ನು ಸ್ವೀಕರಿಸಿದರು. 'ನೌಕರರ ಸೇವೆಯನ್ನು ಕಾಯಂಗೊಳಿಸುವುದು, ಹಾಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದು ಮುಖ್ಯ ಮಂತ್ರಿಯವರಿಗೆ ಬಿಟ್ಟ ವಿಚಾರ. ಎಂದು ಹೇಳಿದ ಅವರು ವಾರದ ರಜೆ, ಭವಿಷ್ಯ ನಿಧಿ, ಇಎಸ್‌ಐ ಮುಂತಾದ ಬೇಡಿಕೆಗಳನ್ನು ಪರಿಶೀಲಿಸಲು ಇದೇ ಎಪ್ರಿಲ್ 27 ರಂದು ಉನ್ನತ ಅಧಿಕಾರಿಗಳ ಮತ್ತು ನೌಕರ ಪ್ರತಿನಿಧಿಗಳ ಜಂಟಿ ಸಭೆಯನ್ನು ಕರೆಯುವುದಾಗಿ ಆಶ್ವಾಸನೆ ನೀಡಿದರು. ಸರ್ಕಾರದ ಪರವಾಗಿ ನೀಡಲಾದ ಭರವಸೆಯ ಮೇರೆಗೆ ಧರಣಿಯನ್ನು ಹಿಂಪಡೆಯಲಾಯಿತು.



ಕರ್ನಾಟಕದ ಹೆದ್ದಾರಿಗಳಲ್ಲಿ ಕನ್ನಡದಲ್ಲಿದ್ದ
ಊರ ಹೆಸರುಗಳನ್ನು ಹಿಂದಿಗೆ
ಬದಲಾಯಿಸಿದಾಗ, ಗೋವಾದ ಮಂತ್ರಿ
ಕನ್ನಡಿಗರನ್ನು ಹೀಯಾಳಿಸಿದಾಗ, ರಾಜ್ಯಗಳ
ಆರ್ಥಿಕ ಸ್ವಾಯತ್ತೆಗೇ ಮಾರಕವಾಗುವ
ಕಾನೂನು ತಂದಾಗ, ತ್ರಿಭಾಷಾ ಸೂತ್ರದ
ಹೆಸರಿನಲ್ಲಿ ಕನ್ನಡಕ್ಕೆ ಕುತ್ತು ತರುವುದನ್ನು
ಮುಂದುವರಿಸುತ್ತಲೇ ಇರುವಾಗ ಕಾಣಿಸದ
ಕನ್ನಡ ಅಭಿಮಾನ ಬಾಹುಬಲಿ–2
ಬಿಡುಗಡೆಯಾಗುವ ಕಾಣಿಸುತ್ತಿದೆ ಎಂದರೆ
ಅದನ್ನು ಅನುಮಾನಿಸಬೇಕು ಎಂದರ್ಥ

ಎನ್.ಎ.ಎಂ. ಇಸ್ಮೈಲ್



ವೆಂಕಟರಾಯಪ್ಪ: ಕಂಬಾಲಪಲ್ಲಿ ಸಾಕ್ಷಿ ನ್ಯಾಯ ಕಾಣದೆ ಸಾವು

ಹದಿನೇಳು ವರ್ಷಗಳು ಕಳೆದೇ ಹೋದವು. ಆ ಭಯಾನಕ ಮಾರಣಹೋಮ ನಡೆದು. ಒಂದೇ ಮನೆಯೊಳಗೆ ಏಳು ಜನರ ನೂಕಿ ಬಾಗಿಲು ಜಡಿದು ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಿದ ದಿನ. ಆ ಬೆಂಕಿಯಲ್ಲಿ ಜೀವಗಳು ಬೆಳಕಿಗೆ ಹುಡುಕುತ್ತಾ ಚೀರಾಡಿದ ದಿನ. ಮೇಲ್ಜಾತಿಯ ಕೇಕೆ ಅಟ್ಟಹಾಸಕ್ಕೆ ಸುಟ್ಟು ಕರಕಲಾದ ದಿನ. 2000 ದ ಮಾರ್ಚ್ ತಿಂಗಳ 11 ನೆಯ ಆ ದಿನ. ಆದರೆ 17 ವರ್ಷಗಳ ನಂತರವೂ ಆ ನರಮೇದ ನಡೆಸಿದವರ ಕೂದಲೂ ಸಹ ಕೊಂಚವೂ ಕೊಂಕಿಲ್ಲ.

ಆದರೆ ಈ ಪ್ರಕರಣದ ಪ್ರಮುಖ ಸಾಕ್ಷಿಯಾಗಿದ್ದ 78 ವರ್ಷದ ವೆಂಕಟರಾಯಪ್ಪ ಏಪ್ರಿಲ್ 18 ರಂದು ತೀರಿಕೊಂಡಿದ್ದಾರೆ. ಅವರು ಈ ಮಾರಣಹೋಮಕ್ಕೆ ಸಾಕ್ಷಿ. ಮಾತ್ರವಲ್ಲ, ಅದರ ದೊಡ್ಡ ಬಲಿಪಶು ಸಹ. ಆ ಮಾರಣಹೋಮದಲ್ಲಿ ಸತ್ತ 7 ಜನರಲ್ಲಿ ಐವರು – ಮಡದಿ ರಾಮಕ್ಕ, ಮಗಳು, ಇಬ್ಬರು ಮಗಂದಿರು, ಒಬ್ಬ ಸೋದರಿ – ಅವರ ಸಂಬಂಧಿಕರು. ಕೆಳಗಿನ ಕೋರ್ಟು ಈ ಹೇಯ ಅಪರಾಧ ಎಸಗಿದವರನ್ನು ಖುಲಾಸೆ ಮಾಡಿದೆ. ಹೈಕೋರ್ಟು ಆ ತೀರ್ಪನ್ನು ಎತ್ತಿ ಹಿಡಿದಿದೆ. ಕೆಳಗಿನ ಕೋರ್ಟುಗಳಲ್ಲಿ ಯಾವುದೇ ಮುತುವರ್ಜಿ ವಹಿಸದ ರಾಜ್ಯ ಸರಕಾರ ಪ್ರಕರಣವನ್ನು ಈಗ ಸುಪ್ರೀಂ ಕೋರ್ಟಿಗೆ ಒಯ್ದಿದೆ.

ಆದರೆ ವೆಂಕಟರಾಯಪ್ಪ ಯಾವುದೇ ನ್ಯಾಯ ಕಾಣದೆ ನಿಧನ ಹೊಂದಿದ್ದಾರೆ. ಪ್ರಮುಖ ಸಾಕ್ಷಿ ಇಲ್ಲದೆ ಸುಪ್ರೀಂ ಕೋರ್ಟು ಯಾವ ರೀತಿಯ ನ್ಯಾಯ ಒದಗಿಸಬಲ್ಲುದು.

ಯಾಕೆಂದರೆ, ಕೆಲವು ಪರಿಣತ ವಕೀಲರು ಈ ಕೇಸು ನಡೆದ ಬಗ್ಗೆ ಹೇಳುವುದನ್ನು ಕೇಳಿದರೆ ಎಂತಹವರಿಗೂ ಒಮ್ಮೆ ಎದೆ ಜಲ್ ಎನ್ನುತ್ತದೆ. ಈ ವ್ಯವಸ್ಥೆಯ ಮೇಲೆ ವಾಕರಿಕೆ ಉಂಟಾಗುತ್ತದೆ. ಅವರು ಗುರುತಿಸುವಂತೆ ಕಂಬಾಲಪಲ್ಲಿಯ ಕೇಸಿನ ವಿಚಾರಣೆಯಾಗಲೀ ಆ ಕೇಸನ್ನು ನ್ಯಾಯಾಂಗ ವ್ಯವಸ್ಥೆ ನಡೆಸಿಕೊಂಡಿರುವುದಾಗಲೀ ತೀರ ಬೇಜವಾಬ್ದಾರಿತನದ್ದು.

ಒಂದಷ್ಟು ಉದಾಹರಣೆ ಹೇಳುವುದಾದರೆ, ಕಂಬಾಲಪಲ್ಲಿ ಕೇಸ್ ವಿಚಾರಣೆಯಲ್ಲಿ ಅಲ್ಲಿ ಘಟನೆ ನಡೆದ ದಿನ ಹಾಜರಿದ್ದ ಪೊಲೀಸ್ ಪೇದೆಗಳನ್ನು ವಿಚಾರಣೆ ಮಾಡಿಲ್ಲ. ಆ ಕೇಸಿನ ತನಿಖಾಧಿಕಾರಿಯ ವಿಚಾರಣೆ ಮಾಡಿಲ್ಲ, ಆದ ರೆ ಕಂಬಾಲಪಲ್ಲಿಯ ದಲಿತರ ಮೇಲೆ ಆರೋಪಿಸಿ ಹೂಡಿರುವ ಕೃಷ್ಣಾರೆಡ್ಡಿಯ ಕೇಸಿಗೆ ಸಂಬಂಧಿಸಿದಂತೆ ತನಿಖಾಧಿಕಾರಿಯನ್ನು ವಿಚಾರಿಸಲಾಗಿದೆ. ಕೆಇಬಿ ಲೈನ್‌ಮೆನ್ನು ವಿಚಾರಿಸಲಾಗಿಲ್ಲ. ವೈದ್ಯಾಧಿಕಾರಿಗಳನ್ನು ವಿಚಾರಿಸಲಾಗಿಲ್ಲ. ಸಾಕ್ಷಿಗಳು ಪೊಲೀಸರ ಸಮಕ್ಷಮದಲ್ಲಿ ನೀಡಿರುವ ಹೇಳಿಕೆಗೆ ತದ್ವಿರುದ್ಧವಾಗಿ ಕೋರ್ಟಿನಲ್ಲಿ ಹೇಳಿಕೆ ನೀಡಿದ್ದರ ಕಾರಣವನ್ನು ಕೇಳಿಲ್ಲ. ಅದಲ್ಲದೆ ಕೋರ್ಟ್ ದಾಖಲೆಗಳಲ್ಲಿ ಎಲ್ಲಾ ಸಾಕ್ಷಿಗಳ ಹೇಳಿಕೆಯೂ ಒಂದೇ ಆಗಿದೆ. ಅದೆಷ್ಟರ ಮಟ್ಟಿಗೆಂದರೆ ಒಂದು ಅಕ್ಷರವೂ ವ್ಯತ್ಯಾಸವಾಗದಂತೆ ಹೇಳಿಕೆ ನೀಡಿದ್ದಾರೆ. ಅಂದರೆ ಟೈಪ್ ಮಾಡುವವರು ಕಟ್ ಅಂಡ್ ಪೇಸ್ಟ್ ಮಾಡಿದ್ದಾರೆ.

ಈ ಪ್ರಕರಣದ ಮುಖ್ಯ ಸಾಕ್ಷಿ ವೆಂಕಟರಾಯಪ್ಪನ ಭಾಷೆ ತೆಲುಗು ಆಗಿದ್ದು ಆತನ ಸಹಾಯಕ್ಕೆ ನೇಮಿಸಲಾಗಿದ್ದ ಭಾಷಾಂತರಕಾರನ ನೇಮಕ ನಿಯಮಗಳ ಪ್ರಕಾರ ಆಗಿಲ್ಲ. ತಿಂಗಳ ನಂತರ ನಡೆದ ವಿಚಾರಣೆಯಲ್ಲಿ ವೆಂಕಟರಾಯಪ್ಪನಿಗೆ ಬಾಷಾಂತರಕಾರನನ್ನೇ ನೇಮಿಸಿಲ್ಲ. ಅಂದ–ರೆ ತಿಂಗಳಲ್ಲಿ ಕನ್ನಡ ಕಲಿತು ಬಿಟ್ಟಿದ್ದಾನೆ! ತನಿಖೆ ಮಾಡುವಾಗ ಯಾವುದೇ ಮಾರಕಾಸ್ತ್ರ, ವಸ್ತುಗಳ ತನಿಖೆ ಮಾಡಿಲ್ಲ. ಹೀಗೆ ತನಿಖೆಯಲ್ಲಿ ಮತ್ತು ವಿಚಾರಣೆಯಲ್ಲಿ ಹಲವಾರು ಲೋಪದೋಷಗಳನ್ನು ಹೊಂದಿದ್ದ ಕೇಸನ್ನು ಮರುವಿಚಾರಣೆಗೆ ಒಳಪಡಿಸದೆ ಹೈಕೋರ್ಟ್ ನಿರಾಕರಿಸಿದ್ದು ನ್ಯಾಯಕ್ಕಾದ ಹಿನ್ನಡೆ. ಏಕೆಂದರೆ ಈ ಮೇಲಿನ ಕೆಲವು ಕಾರಣಗಳು ತನಿಖೆ ಮತ್ತು ವಿಚಾರಣೆ ಸರಿಯಾಗಿ ನಡೆದಿಲ್ಲವೆಂಬುದನ್ನು ಸಾರಿ ಸಾರಿ ಹೇಳುತ್ತಿವೆ.



ಡಿ. 6, 2017: ಅಸ್ಪೃಶ್ಯತೆ, ಜಾತಿ ತಾರತಮ್ಯದ ವಿರುದ್ಧ ಜಾಥಾ



ದಲಿತ ಹಕ್ಕುಗಳ ಸಮಿತಿ, ಕರ್ನಾಟಕದ ರಾಜ್ಯ ಅಧ್ಯಯನ ಶಾಲೆಯನ್ನು 15,16,17 ಏಪ್ರಿಲ್ 2017 ರಂದು ನಡೆಸಲಾಗಿದೆ.

ದೇಶದಲ್ಲಿ ಬಿಜೆಪಿ ಅಧಿಕಾರಾವಧಿಯಲ್ಲಿ ದಲಿತರ ಮೇಲೆ ದೌರ್ಜನ್ಯವನ್ನು ಗಂಭೀರವಾಗಿ ಗುರುತಿಸಲಾಗಿದೆ. ಅದೇ ರೀತಿ ರಾಜ್ಯ ಕಾಂಗ್ರೆಸ್ ಸಿದ್ದರಾಮಯ್ಯ ಸರ್ಕಾರದಲ್ಲಿ ದಲಿತರ ಮೇಲೆ ದೌರ್ಜನ್ಯ ಹೆಚ್ಚಾಗಿದ್ದು ರಕ್ಷಣೆ ಇಲ್ಲದಿರುವುದನ್ನು ವರದಿಯಲ್ಲಿ ಚರ್ಚಿಸಲಾಗಿದೆ.

ದಲಿತರ ಅಭಿವೃದ್ಧಿಯನ್ನು ಬಿಜೆಪಿ ಕಾಂಗ್ರೆಸ್ ಕಡೆಗಣಿಸಿವೆ. ಕೋಮುವಾದ ದಲಿತರನ್ನು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿಸಿದೆ.

ರಾಜ್ಯ ಅಧ್ಯಯನ ಶಾಲೆಯ ಪಾಠಗಳು

1. ಭಾರತದಲ್ಲಿ ಜಾತಿಪದ್ಧತಿ ಅದರ ಬೆಳವಣಿಗೆ : ಸುಭಾಷಿಣಿ ಅಲಿ
2. ದಲಿತರ ವಿಮೋಚನಾ ದಾರಿ : ಜಿ.ವಿ. ಶ್ರೀರಾಮರೆಡ್ಡಿ, ಮಾಜಿ ಶಾಸಕರು
3. ದಲಿತ ಶೋಷಣಾ ಮುಕ್ತಿ ಮಂಚ್ : ಕಾರ್ಯಕ್ರಮ ಮತ್ತು ಗುರಿ . ಶ್ರೀನಿವಾಸ್ ರಾವ್.
4. ಎಸ್‌ಇಎಸ್‌ಪಿ/ಟಿಎಸ್‌ಪಿ ಉಪಯೋಜನೆ ಜಾರಿ: ಪ್ರೊ. ಟಿ.ಆರ್. ಚಂದ್ರಶೇಖರ್, ನಿವೃತ್ತಅಧ್ಯಾಪಕರು.
5. ಡಿ.ಹೆಚ್.ಎಸ್ ಸಂಘಟನಾ ಕಾರ್ಯ ಯೋಜನೆ ಮಂಡನೆ : ಗೋಪಾಲಕೃಷ್ಣ ಅರಳಹಳ್ಳಿ

ರಾಜ್ಯ ಅಧ್ಯಯನ ಶಾಲೆಗೆ 158 ಮಂದಿ ಪ್ರತಿನಿಧಿಗಳು ರಾಜ್ಯದ 14 ಜಿಲ್ಲೆಗಳಿಂದ ಭಾಗವಹಿಸಿದ್ದಾರೆ. ಬಹಿರಂಗ ಸಭೆಯನ್ನು ಯಶಸ್ವಿಯಾಗಿ ನಡೆಸಲಾಗಿದೆ. ದೇವದಾಸಿ ಮಹಿಳೆಯರು, ಸ್ಮಶಾನ ಕಾರ್ಮಿಕರು, ಮಂಗಳ ವಾದ್ಯ ಕಲಾವಿದರು ರಾಜ್ಯದ ವಿವಿಧ ಜಿಲ್ಲೆಗಳಿಂದ ದಲಿತರು ಭಾಗವಹಿಸಿದ್ದಾರೆ. ಜಿಲ್ಲಾವಾರು ಗುಂಪು ಚರ್ಚೆ ನಡೆಸಲಾಗಿದೆ.

ವಾರ್ಷಿಕ ಯೋಜನೆಯನ್ನು ರಾಜ್ಯ ಅಧ್ಯಯನ ಶಿಬಿರದ ವಾರ್ಷಿಕ ಯೋಜನೆಯನ್ನು ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿಯವರು ಮಂಡಿಸಿದರು.

ವಾರ್ಷಿಕ ಯೋಜನೆಯ ಪ್ರಮುಖಾಂಶಗಳು:

ಡಿಸೆಂಬರ್ 6 ಡಾ॥ ಬಿ.ಆರ್. ಅಂಬೇಡ್ಕರ್‌ರವರ ಪರಿ ನಿರ್ವಾಣ ದಿನ ಅಂಗವಾಗಿ ರಾಜ್ಯದಾಂತ ಅಸ್ಪೃಶ್ಯತೆ, ಜಾತಿತಾರತಮ್ಯ, ದಲಿತರ ಮೇಲಿನ ದೌರ್ಜನ್ಯ, ವಿರೋಧಿ ರಾಜ್ಯಾದ್ಯಂತ ಜಾಥಾ ನಡೆಸಲು ನಿರ್ಧರಿಸಲಾಗಿದೆ.

ಬಡ್ತಿ ಮೀಸಲಾತಿ ಸುಪ್ರಿಕೋರ್ಟ್ ತೀರ್ಪಿನ ವಿರುದ್ಧ ಹೋರಾಟ, ಎಸ್‌ಇಎಸ್‌ಪಿ/ಟಿಎಸ್‌ಪಿ ಜಾರಿಗೆ ಹೋರಾಟ, ಡಾ॥ ಬಿ.ಆರ್. ಅಂಬೇಡ್ಕರ್ ಜನ್ಮದಿನ, ಜ್ಯೋತಿ ಬಾಪುಲೆ ದಿನ, ಸಾವಿತ್ರಿ ಬಾಪುಲೆ, ಇತ್ಯಾದಿ ವಿಶೇಷ ಕಾರ್ಯಕ್ರಮ ಹೋರಾಟ ನಡೆಸಲು ನಿರ್ಧರಿಸಲಾಗಿದೆ.

ಜನವರಿ 2018 ರಲ್ಲಿ 2ನೇ ರಾಜ್ಯ ಸಮಾವೇಶ ನಡೆಸುವುದು ಹಾಗೂ ರಾಜ್ಯದ ಎಲ್ಲಾ ದಲಿತ ಸಂಘಟನೆ ಒಗ್ಗೂಡಿ ಐಕ್ಯ ಹೋರಾಟ ನಡೆಸಲು ನಿರ್ಧರಿಸಲಾಗಿದೆ.

ಕೇಳಿಸಿದ್ದು

ಆರಂಭದಲ್ಲಿ ನಿಜಕ್ಕೂ ಗಂಭೀರ ಎನ್ನಿಸಿದ್ದ ಪ್ರಕರಣ–ಈಗ ಹುಚ್ಚಾಟದಂತೆ ಕಾಣತೊಡಗಿದೆ. ಬಹುಸಂಸ್ಕೃತಿಯ ದೇಶವೊಂದರಲ್ಲಿ ಸಾಂಸ್ಕೃತಿಕ ಲೋಕದ ಗಣ್ಯರೊಬ್ಬರ ಹೇಳಿಕೆಗೆ ಸಭ್ಯತೆಯಿಂದ ಪ್ರತಿಕ್ರಿಯೆ ಹೇಗೆ ನೀಡಬೇಕು ಎನ್ನುವುದು ಗೊತ್ತಿಲ್ಲದ ಧರ್ಮಗುರುವಿನ ವರ್ತನೆ ಬಗ್ಗೆ ಮರುಕ ಪಡಬೇಕೋ... ಅಥವಾ ಅನಾಮಿಕ ಮೌಲ್ವಿಯೊಬ್ಬರ ಹೇಳಿಕೆಗೆ ಸಿಟ್ಟಿಗೆದ್ದು ತಲೆಬೋಳಿಸಿಕೊಂಡ ಸೋನು ನಿಗಮ್ ಅಪ್ರಬುದ್ಧತೆಯ ಬಗ್ಗೆ ನಗಬೇಕೋ?

ಅಂತಿಮವಾಗಿ ಏನಾಗಬಹುದು?? ಮುಸ್ಲಿಮರ ಕುರಿತ ಅಪನಂಬಿಕೆ ಮತ್ತು ಮುಸ್ಲಿಮರಲ್ಲಿ ಧಾರ್ಮಿಕ ಅಭದ್ರತೆ ಎರಡೂ ಹೆಚ್ಚಾಗಬಹುದು. ಧರ್ಮಾಂಧರ ಸಂಖ್ಯೆ ಏರಬಹುದು. ಇದುವರೆಗೆ ಮನೆಯ ಪಕ್ಕದ ಮಸೀದಿಯಲ್ಲಿ ಆಝಾನ್ ಆಗುವಾಗ ಯಾವ ಅಪನಂಬಿಕೆಯೂ ಇಲ್ಲದೆ ಮಸೀದಿ ಮುಂದೆ ಹಾಯಾಗಿ ಓಡಾಡುತ್ತಿದ್ದವರೂ ಇನ್ನು ಮುಂದೆ ಸೋನು ನಿಗಮ್ ಹೇಳಿಕೆಯನ್ನು ನೆನಪಿಸಿಕೊಂಡು ‘ಹೌದಲ್ಲ, ಇದು ನಿಜಕ್ಕೂ ಕಿರಿಕಿರಿಯೆ’ ಅಂದುಕೊಳ್ಳಬಹುದು! ರಾಜಕೀಯ ಲಾಭ ಗಳಿಸಲು ಬಯಸುವವರು ವಿವಾದವನ್ನು ಇನ್ನಷ್ಟು ಬೆಳೆಸಬಹುದು. ಇದುವರೆಗೆ ಸೋನು ನಿಗಮ್ ಹಾಡುಗಳನ್ನು ಮೆಚ್ಚಿಕೊಂಡ ಒಂದು ಧರ್ಮದ ಜನರು ಇನ್ನು ಮುಂದೆ, ತಾತ್ಸಾರ ಬೆಳೆಸಿಕೊಳ್ಳಬಹುದು. ಬಯಸಿದರೆ ಸೋನು ನಿಗಮ್ ರಾಜ್ಯಸಭೆಯ ನಾಮಕರಣ ಸದಸ್ಯರೂ ಆಗಬಹುದು!

ದೇಶದಾದ್ಯಂತ ಮಸೀದಿ, ಮಂದಿರ, ದೇವಾಲಯ, ಚರ್ಚ್, ಗುರುದ್ವಾರಗಳಲ್ಲಿ ಲೌಡ್‌ಸ್ಪೀಕರ್ ಬಳಕೆ ನಿಲ್ಲಬಹುದೆ? ಖಂಡಿತಾ ಇಲ್ಲ. ಸೋನು ನಿಗಮ್ ಬಯಸಿದ ಅದೊಂದನ್ನು ಬಿಟ್ಟು ಬೇರೆ ಏನೆಲ್ಲವೂ ಆಗಬಹುದು!

– ಬಿ.ಎಂ.ಹನೀಫ್

10 ಕೋಟಿ ಉದ್ಯೋಗಾವಕಾಶ- 2019ಕ್ಕೆ ಮುಂದುವರೆಯುವ ಚುನಾವಣಾ ವರಸೆ?

* ಬ್ಯಾಂಕುಗಳ ಸಾಲ ನೀಡಿಕೆ ಪ್ರಮಾಣ ಕಳೆದ 60 ವರ್ಷಗಳಲ್ಲೇ ಅತೀ ಕಡಿಮೆ.
* ಕಳೆದ 16ವರ್ಷಗಳಲ್ಲಿ ಅತಿ ಕೆಟ್ಟ ರೈಲ್ವೆ ನಿರ್ವಹಣಾ ಅನುಪಾತ
* ಮೂಲರಚನೆಗಳಿಗೆ ಬ್ಯಾಂಕ್ ಸಾಲನೀಡಿಕೆಯಲ್ಲಿ ಒಂದೇ ವರ್ಷದಲ್ಲಿ 6% ಇಳಿಕೆ
* ಭಾರತೀಯ ಐಟಿ ಉದ್ಯಮದಲ್ಲಿ ಲೇ-ಆಫ್ ಸರಣಿ ಎಂದು ಅಸ್ಸೊಚಾಮ್ ಭವಿಷ್ಯವಾಣಿ

ಇದು ಈ ವಾರ ಪತ್ರಿಕೆಗಳ ಆರ್ಥಿಕ ಪುಟಗಳಲ್ಲಿ ಪ್ರಕಟವಾದ ಸುದ್ದಿಗಳು

ಅತ್ಯಂತ ಹೆಚ್ಚು ಮರುಪಾವತಿಯಾಗದ ಕಾರ್ಪೊರೇಟ್ ಸಾಲಗಳ ಹೊರೆ ಮತ್ತು ಸಾಲಗಳಿಗೆ ಕಾರ್ಪೊರೇಟ್ ಬೇಡಿಕೆಗಳಲ್ಲಿ ಇಳಿಕೆಯಿಂದಾಗಿ ಹಣಕಾಸು ವರ್ಷ 2017ರಲ್ಲಿ ಬ್ಯಾಂಕುಗಳ ಸಾಲ ನೀಡಿಕೆ ಕೇವಲ 5.08% ಬೆಳವಣಿಗೆ ತೋರಿಸಿದೆ. ಕಳೆದ ಹಣಕಾಸು ವರ್ಷದಲ್ಲಿ ಇದು 10.7% ಇತ್ತು. ಅಷ್ಟೇ ಅಲ್ಲ, ಇದು ಕಳೆದ 60 ವರ್ಷಗಳಲ್ಲೇ ಅತಿ ಕಡಿಮೆ ಬೆಳವಣಿಗೆ ದರ ಎನ್ನಲಾಗಿದೆ.

ಈ ಅವಧಿಯಲ್ಲಿ ನೋಟು ರದ್ಧತಿಯ ಕೃಪೆಯಿಂದ ಬ್ಯಾಂಕ್ ಠೇವಣಿಗಳಲ್ಲಿ 11.75% ಹೆಚ್ಚಳವಾದರೂ ಈ ಹಣವನ್ನು ವಿನಿಯೋಗ ಮಾಡಲು ಯಾರೂ ಮುಂದೆ ಬರುತ್ತಿಲ್ಲ.

ಅತ್ತ 'ಕೆಟ್ಟ ಸಾಲ'ಗಳ ಪ್ರಮಾಣದಲ್ಲಿ ಏರಿಕೆಯ ಪ್ರಮಾಣ ಸುಮಾರು 10%. 2018ರ ಹಣಕಾಸು ವರ್ಷದಲ್ಲಿ ಇದು 10%ವನ್ನೂ ದಾಟಬಹುದು ಎಂದು ಐಸಿಆರ್‌ಎ ಹೇಳಿದೆ. ಈಗ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಕೆಟ್ಟ ಸಾಲಗಳ ಮೊತ್ತ 14 ಲಕ್ಷ ಕೋಟಿ ರೂ.ಗಳು ಎಂದು ಅಂದಾಜು ಮಾಡಲಾಗಿದೆ. ಇವನ್ನು ವಸೂಲಿ ಮಾಡುವ ಗಂಭೀರ ಕ್ರಮಗಳು ಸರಕಾರದ ಬಳಿ ಇದ್ದಂತಿಲ್ಲ.

ಬ್ಯಾಂಕ್ ಸಾಲ ನೀಡಿಕೆ ಪ್ರಮಾಣ ವರ್ಷದಿಂದ ವರ್ಷಕ್ಕೆ ವೃದ್ಧಿ(%)

ಒಟ್ಟು ಬ್ಯಾಂಕ್ ಸಾಲ, ಉದ್ದಿಮೆಗೆ ಮತ್ತು ಮೂಲರಚನೆಗೆ

	Gross bank credit	Industry	Infra
Mar-16	9	2.7	4.4
Apr-16	8.4	0.1	-1.5
May-16	8	0.9	-0.1
Jun-16	7.3	0.6	-2.1
Jul-16	7.7	0.6	-3.1
Aug-16	7.6	-0.2	-4.2
Sep-16	11.5	0.9	-4.6
Oct-16	6.4	-1.7	-6.6
Nov-16	4	-3.4	-6.7
Dec-16	3.3	-4.3	-7.7
Jan-17	3.3	-5.1	-8.7
Feb-17	3	-5.2	-9.7

ಕೃಪೆ: ಇಂಡಿಯನ್ ಎಕ್ಸ್‌ಪ್ರೆಸ್

ಮೂಲರಚನೆಗಳಿಗೆ ಬ್ಯಾಂಕ್ ಸಾಲ ನೀಡಿಕೆಯಂತೂ ಭಾರೀ ಇಳಿಕೆ ಕಂಡಿದೆ. ಕಳೆದ ಮಾರ್ಚ್‌ನಲ್ಲಿ 4.4% ಈ ಫೆಬ್ರುವರಿ ವೇಳೆಗೆ –9.7%ಕ್ಕೆ ಇಳಿದಿದೆ. ಅದೂ ನೋಟುರದ್ಧತಿಯ ನಂತರ ಈ ಇಳಿಕೆ ತೀವ್ರಗೊಂಡಿದೆ ಎಂಬುದನ್ನು ಕೋಷ್ಟಕದಲ್ಲಿ ನೋಡಬಹುದು.

ಬ್ಯಾಂಕ್‌ಸಾಲ ನೀಡಿಕೆ ಪ್ರಮಾಣದಲ್ಲಿ ಇಳಿಕೆ ಎಂದರೆ ಉದ್ದಿಮೆಗಳಲ್ಲಿ ಹೂಡಿಕೆಗಳಲ್ಲಿ ಇಳಿಕೆ. ಅದರ ಪರಿಣಾಮ ಹೊಸ ಉದ್ಯೋಗಾವಕಾಶಗಳಿಲ್ಲ. ಹಾಗಿದ್ದರೆ 10 ಕೋಟಿ ಹೊಸ ಉದ್ಯೋಗಾವಕಾಶ ನಿರ್ಮಾಣದ ವಚನದ ಗತಿಯೇನು? ನೋಟುರದ್ಧತಿ ತಂದದ್ದು ಇದಕ್ಕಾಗಿಯೇ ಏನು ಎಂಬುದು ಸಹಜವಾಗಿ ಏಳುವ ಪ್ರಶ್ನೆ.

ಇದು ಸಾಲದೆಂಬಂತೆ ಉದ್ದಿಮೆದಾರರ ಸಂಸ್ಥೆ ಅಸ್ಸೊಚಾಮ್ ಪ್ರಕಾರ ಅಮೆರಿಕನ್ ಅಧ್ಯಕ್ಷರು ಹೆಚ್1ಬಿ ವೀಸಾ ಕುರಿತ ಕಾರ್ಯಾಂಗ ಆದೇಶಕ್ಕೆ ಸಹಿ ಹಾಕಿರುವುದರಿಂದಾಗಿ ಭಾರತೀಯ ಐಟಿ ಕಂಪನಿಗಳು ನೇಮಕಾತಿಗಳು ಮತ್ತು ಸಂಬಳಗಳ ವಿಷಯದಲ್ಲಿ ಬಹಳಷ್ಟು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ, ಇದರಿಂದಾಗಿ ದೇಶದೊಳಗೆ ಐಟಿ ಸಿಬ್ಬಂದಿಗಳ ಲೇ-ಆಫ್ ಆರಂಭವಾಗಲಿದೆ.


ಕಂಪ್ಯೂಟರ್ ಕ್ಷೇತ್ರದಲ್ಲಿ ಹೆಚ್1 ಬಿ ವಿಸಾಗಳಲ್ಲಿ 86% ಭಾರತೀಯರಿಗೆ ಹೋಗುತ್ತಿತ್ತು, ಇದು ಇನ್ನು 60%ಕ್ಕೆ ಇಳಿಯುತ್ತದೆ. ಆದರೂ 56ಅಂಗುಲ ಎದೆಗಾರಿಕೆಯ ಪ್ರಭಾವವೇನೂ ಕಾಣುತ್ತಿಲ್ಲ. ಏಕೆಂದರೆ ಐಎಂಎಫ್, ವಿಶ್ವ ಬ್ಯಾಂಕ್ ಸಭೆಗಳಲ್ಲಿ ಭಾಗವಹಿಸಲು ಇಗ ಅಮೆರಿಕಾದಲ್ಲಿರುವ ಭಾರತದ ಹಣಕಾಸು ಮಂತ್ರಿಗಳು ಅಮೆಇಕನ್ ಆರ್ಥಿಕದಲ್ಲಿ ಬಾರತೀಯ ಐಟಿ ಮದಿಯ ಕೊಡುಗೆ ಬಹಳ ಇದೆ ಎಂದು ಅಮೆರಿಕನ್ ಆಳರಸರಿಗೆ ತಿಳಿಸಲು ಪ್ರಯತ್ನಿಸುತ್ತಿದ್ದಾರೆ ಎಂದಷ್ಟೇ ವರದಿಯಾಗಿದೆ.

ಇನ್ನು ರೈಲ್ವೆ ಇಲಾಖೆಯ ನಿರ್ವಹಣಾ ಅನುಪಾತ ಅತಿ ಕಟ್ಟದ್ದು ಎಂದರೆ ಅರ್ಥವೇನು?

ನಿರ್ವಹಣಾ ಅನುಪಾತ ಎಂದರೆ 100ರೂ. ಆದಾಯ ಪಡೆಯಲು ಎಷ್ಟು ಖರ್ಚು ಮಾಡಲಾಗುತ್ತಿದೆ ಎಂಬ ಸೂಚ್ಯಂಕ. ಇದು ಕಡಿಮೆಯಿದ್ದಷ್ಟು ಇಲಾಖೆ ಉತ್ತಮವಾಗಿ ಕೆಲಸ ಮಾಡುತ್ತಿದೆ ಎಂದರ್ಥ: ಇದು 80%ದ ಆಸುಪಾಸಿನಲ್ಲಿರಬೇಕೆಂದು ನಿರೀಕ್ಷಿಸಲಾಗುತ್ತದೆ. ಸಹಜವಾಗಿ ಹೆಚ್ಚಾಗುತ್ತಿದೆಯೆಂದರೆ ಕೆಟ್ಟದಾಗಿ ಕೆಲಸ ಮಾಡುತ್ತಿದೆ ಎಂದೇ ಅರ್ಥ. ಈ ಹಣಕಾಸು ವರ್ಷದಲ್ಲಿ 96.9%. ಈ ಹಿಂದಿನ ಅತಿಹೆಚ್ಚು ನಿರ್ವಹಣಾ ಅನುಪಾತವೆಂದರೆ 2000–01ರ 98% ಎನ್ನಲಾಗಿದೆ. ಆಗಲೂ ಎನ್‌ಡಿಎ ಸರಕಾರ ಇದ್ದದ್ದು ಎನ್‌ಡಿಎ ಸರಕಾರವೇ ಎಂಬುದು ಕಾಕತಾಳಿಯ ಇರಬಹುದು, ಅಥವ ಬಿಜೆಪಿ ನವ-ಉದಾರವಾದಿ ಧೋರಣೆಗಳಿಗೆ ಕಾಂಗ್ರೆಸಿಗಿಂತ ಹೆಚ್ಚು ಬದ್ಧವಾಗಿದೆ ಎಂಬುದನ್ನು ಸೂಚಿಸುತ್ತಿರಬಹುದು.

ಪ್ರಧಾನಿಗಳು ಆರ್ಥಿಕ ಸುಧಾರಣೆಗಳ ರಾಜಕೀಯ ಇಚ್ಚಾಶಕ್ತಿ ತಮ್ಮ ಸರಕಾರಕ್ಕಿದೆ ಎಂದಿದ್ದಾರೆ. ಆದರೆ ಆ ಇಚ್ಚಾಶಕ್ತಿ' 10 ಕೋಟಿ ಉದ್ಯೋಗಾವಕಾಶಗಳ ಭರವಸೆಯನ್ನು ಈಡೇರಿಸುವ ಸಾಮರ್ಥ್ಯ ಹೊಂದಿದೆಯೇ ಎಂಬುದೇ ದೇಶದ ಯುವಜನರ ಮುಂದಿರುವ ಪ್ರಶ್ನೆ.

ವರ್ಷಕ್ಕೆ 2 ಕೊಟಿ ಉದ್ಯೋಗಾವಕಾಶಗಳ ನಿರ್ಮಾಣದ ಭರವಸೆ ನೀಡಿದ ಸರಕಾರದ ಆಳ್ವಿಕೆಯಲ್ಲಿ ಲೇಬರ್ ಬ್ಯುರೊ ವರದಿಯ ಪ್ರಕಾರ ಎಪ್ರಿಲ್–ಸಪ್ಟಂಬರ್ 2016ರ ಆರು ತಿಂಗಳ ಅವಧಿಯಲ್ಲಿ ಎಂಟು ಉದ್ಯೋಗೋನ್ಮುಖ ಕೃಷಿಯೇತರ ವಲಯಗಳಲ್ಲಿ ನಿರ್ಮಾಣವಾದ ಉದ್ಯೋಗಗಳ ಸಂಖ್ಯೆ ಕೇವಲ 1.09 ಲಕ್ಷ.



ಕ್ರಿಮಿನಲ್ ಕೇಸಿನಲ್ಲಿ ಆಳುವ ಪಕ್ಷದ ಶಾಸಕನಿಗೆ 'ಕ್ಲೀನ್ ಚಿಟ್'

62 ಜೀವಗಳನ್ನು ಬಲಿ ಪಡೆದ 2013ರ ಮುಝಫ್ಫರ್‌ನಗರ ಕೋಮುಗಲಭೆಗಳ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ದಳ(ಎಸ್‌ಐಟಿ) ಬಿಜೆಪಿ ಶಾಸಕ ಸಂಗೀತ್ ಸಿಂಗ್ ಸೋಮ್‌ಗೆ 'ಕ್ಲೀನ್ ಚಿಟ್' ನೀಡಿದೆ ಎಂದು ವರದಿಯಾಗಿದೆ. ಇವರು ತಮ್ಮ ಫೇಸ್‌ಬುಕ್‌ನಲ್ಲಿ ಈ ಗಲಭೆಯನ್ನು ಪ್ರಚೋದಿಸಿದ ಸುಳ್ಳು ವೀಡಿಯೋವನ್ನು 'ಶೇರ್ ಮಾಡಿದ್ದರು' ಎಂಬ ಗಂಭೀರ ಆರೋಪವಿತ್ತು.

ಆದರೆ ಈ ಆರೋಪ ಸುಳ್ಳು ಎಂದು ಸಾಬೀತಾಗಿ ಈ ಶಾಸಕನಿಗೆ ಕ್ಲೀನ್ ಚಿಟ್ ಸಿಕ್ಕಿದ್ದಲ್ಲ ಎಂಬುದು ಗಮನಾರ್ಹ.

ಮುಝಫ್ಫರ್‌ನಗರದ ಬಳಿಯ ಒಂದು ಹಳ್ಳಿ ಕವಲ್‌ನಲ್ಲಿ ಒಬ್ಬ ಮುಸ್ಲಿಂ ಯುವಕನ ಕೊಲೆಯಾಯ್ತು. ನಂತರ ಇಬ್ಬರು ಹಿಂದೂ ಯುವಕರ ಕೊಲೆಯಾಯ್ತು. ಇದು ಪ್ರತೀಕಾರದ ಕೊಲೆ ಎಂದು ಹೇಳಲಾಯ್ತು. ಈ ಎರಡನೇ ಕೊಲೆಯ ಎರಡು ದಿನಗಳ ನಂತರ ಇಬ್ಬರು ಯುವಜನರ ಮೇಲೆ ಹಲ್ಲೆ ಮಾಡುವ ವೀಡಿಯೋ "ನೋಡ್ರಪ್ಪಾ, ಕವಾಲ್‌ನಲ್ಲಿ ಏನಾಯ್ತು"ಎಂಬ ಕ್ಲಿಪ್‌ನೊಂದಿಗೆ ಫೇಸ್‌ಬುಕ್‌ನಲ್ಲಿ ಹರಿದಾಡಿತು. ಆದರೆ ಇದು ಎರಡ ವರ್ಷಗಳ ಹಿಂದಿನ ವೀಡಿಯೋ ಎಂದು ಕಂಡು ಬಂತು. ಶಿವಂ ಎಂಬಾತ ಇದನ್ನು ಯು ಟ್ಯೂಬ್‌ನಲ್ಲಿ ಹಾಕಿದ್ದ, ಈ ಶಾಸಕರು ಅದನ್ನು ಶೇರ್ ಮಾಡಿದ್ದರು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದದ್ದರಿಂದ ಇವರಿಬ್ಬರ ಮೇಲೆ ಧಾರ್ಮಿಕ ಆಧಾರದಲ್ಲಿ ವೈರತ್ವ ಹರಡುವ ಕೇಸು ಹಾಕಲಾಯಿತು.

ಅದರೆ ನಂತರ ಇವರಿಬ್ಬರೂ ಮತ್ತು ಅದನ್ನು 'ಲೈಕ್' ಮಾಡಿದ್ದ 229 ಮಂದಿ ಕೂಡ ಅದನ್ನು ತಮ್ಮ ಖಾತೆಗಳಿಂದ ತೆಗೆದಿದ್ದರು ಎನ್ನಲಾಗಿದೆ. ಈ ಬಗ್ಗೆ ಪೋಲೀಸರು ಫೇಸ್‌ಬುಕ್ ನವರಿಂದ 'ಸ್ವಲ್ಪ ಮಾಹಿತಿ' ಸಿಕ್ಕಿತು, ಆದರೆ ಇನ್ನಷ್ಟು ವಿವರಗಳು ಬೇಕಿತ್ತು. ಎಷ್ಟು ಪತ್ರ ಬರೆದರೂ ಅದು ಸಿಕ್ಕಿಲ್ಲವಾದ್ದರಿಂದ ಈ ಕೇಸನ್ನು ಈಗ ಮುಚ್ಚಲಾಗಿದೆ ಎಂದು ವರದಿಯಾಗಿದೆ. ಸಿಕ್ಕ 'ಸ್ವಲ್ಪ ಮಾಹಿತಿ' ಎಂದು ಗೊತ್ತಾಗಿಲ್ಲ. ಅ ವೀಡಿಯೋ 62 ಬಲಿ ತೆಗೆದುಕೊಂಡ ಗಲಭೆಗೆ ಪ್ರಚೋದನೆ ನೀಡಿದ್ದು ಸುಳ್ಳೇನು ಎಂದೂ ಗೊತ್ತಾಗಿಲ್ಲ. ಉತ್ತರಪ್ರದೇಶದಲ್ಲಿ ಬಿಜೆಪಿ ಸರಕಾರ ಬಂದ ಮೇಲೆಯೇ ಇದು ನಡೆದಿರುವುದು ಕೇವಲ ಕಾಕತಾಳಿಯ ಇರಬಹುದೇನೋ.

ಇಪ್ಪತ್ತೈದು ವರ್ಷಗಳ ನಂತರ ಪಿತೂರಿಗೆ ಮರುಜೀವ

"ಪ್ರಸ್ತುತ ಮೊಕದ್ದಮೆಯಲ್ಲಿ ಭಾರತದ ಸಂವಿಧಾನದ ಜಾತ್ಯತೀತ ಹಂದರವನ್ನು ಅಲುಗಾಡಿಸುವ ಅಪರಾಧಗಳನ್ನು 25 ವರ್ಷಗಳ ಹಿಂದೆ ಎಸಗಲಾಗಿತ್ತು ಎಂದು ಆರೋಪಿಸಲಾಗಿದೆ. ಆರೋಪಿ ವ್ಯಕ್ತಿಗಳಿಗೆ ಇನ್ನೂ ಏನೂ ವಿಧಿಸಿಲ್ಲ, ಇದು ಆಗಿರದಿರುವುದು ಬಹುಪಾಲು ಒಂದು ಜಂಟಿ ವಿಚಾರಣೆಯಲ್ಲಿ ಆರೋಪಿ ತಪ್ಪಿತಸ್ಥರನ್ನು ವಿಚಾರಣೆಗೆ ಒಳಪಡಿಸುವಲ್ಲಿ ಸಿಬಿಐ ವರ್ತನೆಯಿಂದಾಗಿ, ಮತ್ತು ಸುಲಭವಾಗಿ ಸರಿಪಡಿಸಬಹುದಾಗಿದ್ದ, ಆದರೆ ರಾಜ್ಯಸರಕಾರ ಸರಿಪಡಿಸದಿದ್ದ ತಾಂತ್ರಿಕ ಕೊರತೆಗಳಿಂದಾಗಿ."

ಇದು ಸುಪ್ರಿಂ ಕೊರ್ಟ್ ಎಪ್ರಿಲ್ 19ರಂದು ಬಾಬ್ರಿ ಮಸೀದಿ ಧ್ವಂಸ ಪ್ರಕರಣ ಕುರಿತ ಮೊಕದ್ದಮೆಗೆ ಸಂಬಂಧಪಟ್ಟಂತೆ ಪ್ರಕಟಿಸಿದ ನಿರ್ಧಾರದಲ್ಲಿನ ಒಂದು ಪರಿಚ್ಛೇದ.

ಈ ನಿರ್ಣಯದ ಮೂಲಕ ಮುಚ್ಚಿ ಹೋಗಿದ್ದ ಬಿಜೆಪಿ ಮುಖಂಡರ ಮೇಲಿನ ಪಿತೂರಿ ಮೊಕದ್ದಮೆಗಳನ್ನು ಮತ್ತೆ ತೆರೆದಂತಾಗಿದೆ. ಅಡ್ವಾಣಿ ಮತ್ತಿತರ ಮುಖಂಡರ ವಿಚಾರಣೆಯನ್ನು ಲಕ್ನೌ ನ್ಯಾಯಾಲಯದಲ್ಲಿ ನಡೆಯುತ್ತಿರುವ ಕರಸೇವಕರ ವಿಚಾರಣೆಯೊಂದಿಗೆ ಎರಡು ವರ್ಷದೊಳಗೆ ಪೂರೈಸಬೇಕಾಗಿದೆ.

ಈ ಮೂಲಕ ಎಲ್.ಕೆ.ಅಡ್ವಾಣಿ, ಮುರಳಿ ಮನೋಹರ ಜೋಷಿ, ಉಮಾಭಾರತಿ ಮತ್ತಿತರರ ಮೇಲೆ ಕ್ರಿಮಿನಲ್ ಪಿತೂರಿಯ ಮೊಕದ್ದಮೆ ನಡೆಯಲಿದೆ. ಆಗ ಉತ್ತರಪ್ರದೇಶದ ಮುಖ್ಯಮಂತ್ರಿಯಾಗಿದ್ದ ಕಲ್ಯಾಣ ಸಿಂಗ್ ಈಗ ರಾಜಸ್ತಾನದ ರಾಜ್ಯಪಾಲರಾಗಿರುವುದರಿಂದಾಗಿ ಅವರಿಗಿರುವ ವಿನಾಯ್ತಿಯಿಂದಾಗಿ ಅವರ ವಿಚಾರಣೆ ನಡೆಯುವುದಿಲ್ಲ, ಆದರೆ ಅವರು ಆ ಹುದ್ದೆ ಬಿಟ್ಟ ಕೂಡಲೇ ಅವರ ಮೇಲೂ ಮೊಕದ್ದಮೆ ನಡೆಯುತ್ತದೆ.

ಈ ವಿಚಾರಣೆ ದೈನಂದಿನವಾಗಿ ನಡೆಯಬೇಕು, ಯೋಗ್ಯ ಕಾರಣವಿಲ್ಲದೆ ವಿಚಾರಣೆಯನ್ನು ಮುಂದೂಡಬಾರದು, ವಿಚಾರಣೆ ಮುಗಿಯುವ ವರೆಗೆ ನ್ಯಾಯಾಧೀಶರ ವರ್ಗಾವಣೆ ಮಾಡಬಾರದು ಎಂದೂ ವಿಧಿಸಲಾಗಿದೆ.

ಇದು ಈ ಕೇಸನ್ನು ಮುಚ್ಚಿ ಹಾಕುವ ಪ್ರಯತ್ನಕ್ಕೆ ಆಗಿರುವ ಹಿನ್ನಡೆ. ಆದರೂ ಬಿಜೆಪಿ ಮುಖಂಡರು ಇದರಲ್ಲೇನೂ ವಿಶೇಷವಿಲ್ಲ, ಉಮಾಭಾರತಿಯವರು ಮಂತ್ರಿಗಳಾಗಿ ಮುಂದುವರೆಯಲು, ಕಲ್ಯಾಣ ಸಿಂಗ್ ರಾಜ್ಯಪಾಲರಾಗಿ ವಿನಾಯ್ತಿ ಪಡೆಯುತ್ತಲೇ ಇರುವಲ್ಲಿ ನೈತಿಕ ಪ್ರಶ್ನೆಯೇನೂ ಇಲ್ಲ ಎಂದು ಹೇಳುತ್ತಿದ್ದಾರೆ. ಇದು ಅನಿರೀಕ್ಷಿತವೇನಲ್ಲ.

ಕೆಲವು ಟಿಪ್ಪಣಿಗಾರರ ಪ್ರಕಾರ ಪ್ರಧಾನಿಗಳಿಗೆ ಇದು ಪರೋಕ್ಷ ವರವಾಗಲೂ ಬಹುದು. ಎಲ್.ಕೆ.ಅಡ್ವಾಣಿಯವರನ್ನು ರಾಷ್ಟ್ರಪತಿ ಸ್ಥಾನಕ್ಕೆ ಅಭ್ಯರ್ಥಿಯಾಗಿಸಲು ಬಹಳ ಒತ್ತಡಗಳು ಇದ್ದವು, 2019ರೊಳಗೆ ಈ ಮೊಕದ್ದಮೆ ತೀರ್ಪು ಬರ ಬೇಕಾಗಿರುವುದರಿಂದಾಗಿ ಈಗ ಅಂತಹ ಒತ್ತಡಗಳೇನೂ ಇಲ್ಲ ಎಂದು ಅವರು ಹೇಳುತ್ತಿದ್ದಾರೆ.




ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್

ಮಾನವ ಗುರಾಣಿಯಾಗಿ ಬಳಕೆಯಾಗಿದ್ದ ಕಾಶ್ಮೀರದ ಯುವಕ ಫರೂಕ್ ಅಹ್ಮದ್ ದರ್ ಆ ದಿನ ಪ್ರತ್ಯೇಕತಾವಾದಿಗಳ ಬಹಿಷ್ಕಾರದ ಕರೆಯನ್ನು ಉಲ್ಲಂಘಿಸಿ ಮತದಾನ ಮಾಡಿದ್ದ ಕೇವಲ 7% ಮತದಾರರಲ್ಲಿ ಒಬ್ಬನಾಗಿದ್ದ, ಮತ ಹಾಕಿ ಕುಟುಂಬದಲ್ಲಿ ಆದ ಒಂದು ಸಾವಿಗೆ ಸಂತಾಪ ವ್ಯಕ್ತಪಡಿಸಲು ಹೋಗುತ್ತಿರುವಾಗ ಭದ್ರತಾ ಸಿಬ್ಬಂದಿ ಆತನನ್ನು ಮನಬಂದಂತೆ ಥಳಿಸಿ, ನಂತರ ತಮ್ಮ ಜೀಪಿಗೆ ಕಟ್ಟಿ 8–10 ಹಳ್ಳಿಗಳಲ್ಲಿ ಸುತ್ತಾಡಿಸಿ ಒಯ್ದರು ಎಂದು ನಂತರ ಬಂದ ಮಾಧ್ಯಮ ವರದಿಗಳು ಹೇಳುತ್ತವೆ. ತಾನು ಇನ್ನೆಂದೂ ಮತದಾನ ಮಾಡುವುದಿಲ್ಲ ಎಂದು ಆತ ಬಹಳ ಬೇಸರದಿಂದ ಹೇಳಿದ್ದಾನೆ.

ಅದರೆ ಅಟಾರ್ನಿ ಜನರಲ್ ಮುಕುಲ್ ರೋಹಟ್ಗಿ ಸೇನಾ ಸಿಬ್ಬಂದಿಯ ಸುರಕ್ಷತೆಗೆ ಈ ಕ್ರಮ ಅಗತ್ಯವಾಗಿತ್ತು ಎಂದು ಸಮರ್ಥಿಸಿಕೊಂಡಿದ್ದಾರೆ.

– ಸುದ್ದಿ

ಈ ಮಾನವ ಗುರಾಣಿಗಳ ಬಳಕೆಯೂ ಸಮರ್ಥನೀಯವಿರಬೇಕು!



ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ.

ಇತಿಹಾಸದ ಅಂತ್ಯ ಎಂದು ಸಾರಿದ್ದ ಜಾಗತೀಕರಣದ್ದೇ ಅಂತ್ಯ?



ಕೆ.ಎಂ.ನಾಗರಾಜ್

ಈಗ ವ್ಯಾಪಕವಾಗಿರುವ ಜಾಗತೀಕರಣವು ಮುಂದುವರಿಯಲಾಗದ ಸ್ಥಿತಿಗೆ ತಲುಪಿರುವಾಗ ತಮ್ಮ ದೇಶದಲ್ಲಿ ಉದ್ಯೋಗಾವಕಾಶ ಸೃಷ್ಟಿಗೆ ವಿದೇಶಗಳಿಂದ ಆಮದುಗಳನ್ನು ನಿರ್ಬಂಧಿಸಿ ನಿರುದ್ಯೋಗವನ್ನು ಬೇರೆ ದೇಶಗಳಿಗೆ ರಫ್ತು ಮಾಡಲು ಹೊರಟರೆ ಆ ದೇಶಗಳು ಪ್ರತೀಕಾರದ ಯಾವ ಕ್ರಮಗಳನ್ನೂ ಕೈಗೊಳ್ಳದೆ ತೆಪ್ಪಗೆ ಕುಳಿತಿರುತ್ತಾರೆಂದು ಟ್ರಂಪ್ ಭಾವಿಸಿದಂತಿದೆ. ಆದರೆ ಇದರಿಂದಾಗಿ ಪ್ರಚಲಿತ ಜಾಗತೀಕರಣವನ್ನು ಕೊನೆಗೊಳಿಸುವ ಹೊಸ ಸಾಧ್ಯತೆಗಳು ತೆರೆದುಕೊಳ್ಳುತ್ತಿವೆ. ತಮಾಷೆಯೆಂದರೆ, ಈ ಜಾಗತೀಕರಣವೇ ಅಂತಿಮ, ಅದು ಚರಿತ್ರೆಯ ಅಂತ್ಯ ಎಂದೆಲ್ಲಾ ಹಾಡಿ ಹೊಗಳಿ ಬಹಳ ಕಾಲವೇನೂ ಆಗಿಲ್ಲ.

ಅಮೆರಿಕದಲ್ಲಿ ಉದ್ಯೋಗಾವಕಾಶಗಳನ್ನು ಒದಗಿಸುವ ಸಲುವಾಗಿ, ಅಮೆರಿಕ ಬೇರೆ ದೇಶಗಳಿಂದ ಮಾಡಿಕೊಳ್ಳುತ್ತಿರುವ ಆಮದುಗಳ ಮೇಲೆ ನಿರ್ಬಂಧ ಹೇರುವ ಯೋಜನೆಯನ್ನು ಡೊನಾಲ್ಡ್ ಟ್ರಂಪ್ ಪ್ರಕಟಪಡಿಸಿದ್ದಾರೆ. ಅವರು ಕೈಗೊಳ್ಳುವ ಈ ಕ್ರಮದ ಜೊತೆಯಲ್ಲಿ, ವಿತ್ತೀಯ ಕೊರತೆಯ ಮೂಲಕ ಸರ್ಕಾರದ ವೆಚ್ಚಗಳನ್ನು ಹೆಚ್ಚಿಸಿ, ಆ ಮೂಲಕ ಅಮೆರಿಕದ ಒಟ್ಟಾರೆ ಆಂತರಿಕ ಬೇಡಿಕೆಯ ಮಟ್ಟವನ್ನೂ ಹೆಚ್ಚಿಸುವಂತಹ ಕ್ರಮಗಳನ್ನು ಕೈಗೊಂಡರೆ, ಆಗ, ಆಮದುಗಳ ಮೇಲೆ ನಿರ್ಬಂಧ ಹೇರಿದರೂ, ಆಮದುಗಳ ಇಳಿಕೆಯು ಹೆಚ್ಚಿನ ಪರಿಣಾಮ ಬೀರುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ, ಅಮೆರಿಕದಲ್ಲಿ ಉದ್ಯೋಗಗಳು ಹೆಚ್ಚಿದ ಪರಿಣಾಮವಾಗಿ, ಬೇರೆ ದೇಶಗಳ ಉದ್ಯೋಗಗಳು ಕಡಿಮೆಯಾಗುವುದಿಲ್ಲ. ಅಂದರೆ, ಅಮೆರಿಕ ಬೇರೆ ದೇಶಗಳಿಗೆ ನಿರುದ್ಯೋಗ ರಫ್ತು ಮಾಡಿದಂತಾಗುವುದಿಲ್ಲ.

ಬೇರೆ ದೇಶಗಳಿಂದ ಮಾಡಿಕೊಳ್ಳುತ್ತಿರುವ ಆಮದುಗಳಿಂದ ಅಮೆರಿಕದ ಅರ್ಥವ್ಯವಸ್ಥೆಯನ್ನು ರಕ್ಷಿಸುವ ಭರದಲ್ಲಿ, ಡೊನಾಲ್ಡ್ ಟ್ರಂಪ್, ಅಮೆರಿಕದ ಒಟ್ಟಾರೆ ಆಂತರಿಕ ಬೇಡಿಕೆ ಹೆಚ್ಚಿಸುವ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಒಟ್ಟಾರೆ ಆಂತರಿಕ ಬೇಡಿಕೆ ವೃದ್ಧಿಯಾಗಬೇಕು ಎಂದಾದರೆ, ತಮ್ಮ ವರಮಾನದ ಹೆಚ್ಚಿನ ಪಾಲನ್ನು ಉಳಿತಾಯ ಮಾಡಿಕೊಳ್ಳುವ ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ವಿಧಿಸಬೇಕು ಅಥವಾ ವಿತ್ತೀಯ ಕೊರತೆಯ ಮೂಲಕ ಸರ್ಕಾರದ ವೆಚ್ಚಗಳು ಹೆಚ್ಚಬೇಕಾಗುತ್ತದೆ. ದುಡಿಯುವ ಜನತೆಯ ಮೇಲೆ ತೆರಿಗೆ ಹೆಚ್ಚಿಸುವ ಮೂಲಕ ಸರ್ಕಾರದ ವೆಚ್ಚಗಳನ್ನು ಹೆಚ್ಚಿಸಿದರೆ, ಅದರಿಮದ ಒಟ್ಟಾರೆ ಆಂತರಿಕ ಬೇಡಿಕೆಯೇನೂ ಹೆಚ್ಚುವುದಿಲ್ಲ.

ಆದರೂ, ಟ್ರಂಪ್ ಮಹಾಶಯರಿಗೆ ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ವಿಧಿಸುವ ಮನಸ್ಸಿಲ್ಲ. ಬದಲಾಗಿ, ಅವರು ಕಾರ್ಪೊರೇಟ್ ತೆರಿಗೆ ದರಗಳನ್ನು ಶೇ.35% ರಿಂದ ಶೇ.15 ಕ್ಕೆ ಇಳಿಸುವ ಯೋಜನೆಯಲ್ಲಿದ್ದಾರೆ. ಈ ಕ್ರಮದಿಂದಾಗಿ ಕಡಿಮೆಯಾಗುವ ತೆರಿಗೆ ವರಮಾನವನ್ನು ಸರಿದೂಗಿಸಿಕೊಳ್ಳಲು ವಿತ್ತೀಯ ಕೊರತೆಯನ್ನು ಹೆಚ್ಚಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ. ಹಾಗೆ ಮಾಡುವುದರಿಂದ, ಸರ್ಕಾರದ ವೆಚ್ಚಗಳನ್ನು ಹೆಚ್ಚಿಸಿದಂತಾಗುವುದಿಲ್ಲ. ಬದಲಿಗೆ, ಸರ್ಕಾರದ ಹಣ ಶ್ರೀಮಂತರಿಗೆ ವರ್ಗವಾಗುತ್ತದೆ.

ಇಂತಹ ಕ್ರಮದಿಂದಾಗಿ ಒಟ್ಟಾರೆ ಬೇಡಿಕೆ ವೃದ್ಧಿಯಾಗುವುದಿಲ್ಲ. ಏಕೆಂದರೆ, ಶ್ರೀಮಂತರು ಜೀವನ ನಿರ್ವಹಣೆಗಾಗಿ ತಮ್ಮ ವರಮಾನದ ಅಲ್ಪ ಭಾಗವನ್ನು ಮಾತ್ರ ಬಳಸುತ್ತಾರೆ. ಮತ್ತು ಅವರು ಮಾರುಕಟ್ಟೆ ಬೆಳೆಯುತ್ತಿರುವ ಪರಿಸ್ಥಿತಿಯಲ್ಲಿ ಮಾತ್ರ ಹೂಡಿಕೆ ಮಾಡುತ್ತಾರೆ. ಹಾಗಾಗಿ, ಕಾರ್ಪೊರೇಟ್ ತೆರಿಗೆ ದರಗಳನ್ನು ಇಳಿಸುವುದರಿಂದಾಗಿಯೇ ದೊಡ್ಡ ಪ್ರಮಾಣದ ಖಾಸಗಿ ಹೂಡಿಕೆ ಆಗುವುದಿಲ್ಲ.

ಅಮೆರಿಕದ ಒಟ್ಟಾರೆ ಬೇಡಿಕೆ ಹೆಚ್ಚಿಸುವ ಯಾವ ಹೊಸ ಕ್ರಮಗಳೂ ಇಲ್ಲದೆ ಇರುವುದರಿಂದ, ಆ ದೇಶದ ಅರ್ಥವ್ಯವಸ್ಥೆಯ ಚೇತರಿಕೆ ಮತ್ತು ಉದ್ಯೋಗಾವಕಾಶ ಹೆಚ್ಚಿಸಿಕೊಳ್ಳುವ ಉದ್ದೇಶಕ್ಕಾಗಿ, ಟ್ರಂಪ್, ಆಮದುಗಳನ್ನು ನಿರ್ಬಂಧಿಸಲು ಹೊರಟಿದ್ದಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಇದು, ಕುಗ್ಗುತ್ತಿರುವ ವಿಶ್ವ ಮಾರುಕಟ್ಟೆಯಲ್ಲಿ, ಬೇರೆ ದೇಶಗಳಿಂದ ಉದ್ಯೋಗ ಕಿತ್ತುಕೊಳ್ಳುವ 'ನನ್ನ ನೆರೆಯವನು ಹಾಳಾಗಲಿ' ನೀತಿಯಾಗುತ್ತದೆ. ನಿರುದ್ಯೋಗವನ್ನು ಅಮೆರಿಕ ಬೇರೆ ದೇಶಗಳಿಗೆ ರಫ್ತು ಮಾಡಿದಂತಾಗುತ್ತದೆ.

ಅಮೆರಿಕದ ವ್ಯಾಪಾರ ರಕ್ಷಣಾ ನೀತಿಯಿಂದ ಹಾನಿಗೊಳಗಾದ ದೇಶಗಳು, ಪ್ರತೀಕಾರದ ಕ್ರಮವಾಗಿ, ಅಮೆರಿಕದಿಂದ ಮಾಡಿಕೊಳ್ಳುವ ಆಮದುಗಳನ್ನು ನಿರ್ಬಂಧಿಸುವ ಕ್ರಮ ಕೈಗೊಳ್ಳದಿದ್ದರೆ ಮಾತ್ರ ಇಂತಹ ರಕ್ಷಣಾ ನೀತಿ ಕಾರ್ಯಸಾಧುವಾಗಬಲ್ಲದು. ಒಂದು ವೇಳೆ, ಅಮೆರಿಕದಿಂದ ಮಾಡಿಕೊಳ್ಳುವ ಆಮದುಗಳ ಮೇಲೆ ಬೇರೆ ದೇಶಗಳೂ ನಿರ್ಬಂಧ ಹೇರಿ, 'ನನ್ನ ನೆರೆಯವನು ಹಾಳಾಗಲಿ' ನೀತಿಯನ್ನು ಪೈಪೋಟಿಗೆ ಬಿದ್ದವರಂತೆ ಅವರೂ ಅನುಸರಿಸಿದರೆ, ಈ ನೀತಿ ಆರಂಭಿಸಿದ ಅಮೆರಿಕವೂ ಸೇರಿದಂತೆ, ಯಾವ ದೇಶದಲ್ಲೂ ಉದ್ಯೋಗಗಳು ಹೆಚ್ಚುವುದಿಲ್ಲ. ಈ ಪರಿಸ್ಥಿತಿ, ಇಡೀ ವಿಶ್ವದ ಅರ್ಥವ್ಯವಸ್ಥೆಯನ್ನೇ ಹಾಳುಗೆಡವ ಬಲ್ಲದು. ಅಂದರೆ, ಎಲ್ಲ ದೇಶಗಳೂ ತೊಂದರೆ ಗೊಳಗಾಗುವ ಸಂಭವವಿದೆ. ಹೇಗೆಂದರೆ, ಎಲ್ಲ ದೇಶಗಳೂ ತಮ್ಮ ತಮ್ಮ ದೇಶಗಳ ಅರ್ಥವ್ಯವಸ್ಥೆಯನ್ನು ರಕ್ಷಿಸಿಕೊಳ್ಳುವ ಸಲುವಾಗಿ ಪೈಪೋಟಿಗಿಳಿದು 'ನನ್ನ ನೆರೆಯವನು ಹಾಳಾಗಲಿ' ನೀತಿಯನ್ನು ಅನುಸರಿಸಿದರೆ, ಹೂಡಿಕೆದಾರರಿಗೆ ಹೂಡಿಕೆ ಮಾಡುವ ಉತ್ಸಾಹ ಇಳಿಯುತ್ತದೆ. ಅದರಿಂದಾಗಿ, ಇಡೀ ವಿಶ್ವದ ಅರ್ಥವ್ಯವಸ್ಥೆ ಮತ್ತಷ್ಟು ಹದಗೆಡುತ್ತದೆ.

ಅಮೆರಿಕ ತನ್ನ ವಿದೇಶ ವ್ಯಾಪಾರ ನೀತಿಯಲ್ಲಿ ರಕ್ಷಣಾತ್ಮಕ ಕ್ರಮಗಳನ್ನು ಅನುಸರಿಸುವ ಮೂಲಕ, ತಮ್ಮ ದೇಶದಲ್ಲಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಬಹುದೆಂಬ ಟ್ರಂಪ್ ಅವರ ಕಾರ್ಯ ಯೋಜನೆ ಕೆಲವು ಪೂರ್ವಕಲ್ಪನೆಗಳಿಂದ ಕೂಡಿದೆ. ಅಮೆರಿಕ ನಿರುದ್ಯೋಗವನ್ನು ಬೇರೆ ದೇಶಗಳಿಗೆ ರಫ್ತು ಮಾಡುತ್ತಿರುವಾಗ, ಆ ದೇಶಗಳು ಪ್ರತೀಕಾರದ ಯಾವ ಕ್ರಮಗಳನ್ನೂ ಕೈಗೊಳ್ಳದೆ ತೆಪ್ಪಗೆ ಕುಳಿತಿರುತ್ತಾರೆಂಬ ಭಾವನೆಯನ್ನು ಟ್ರಂಪ್ ಇಟ್ಟುಕೊಂಡಿದ್ದಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ತಾನು ಇಡೀ ವಿಶ್ವದ ಮೇಲೆ 'ಮುಕ್ತ ಏಕ–ಮುಖ ವ್ಯಾಪಾರ' ಆಳ್ವಿಕೆಯನ್ನು ಹೇರಬಹುದೆಂಬ ಭಾವನೆಯನ್ನು ಅಮೆರಿಕ ಇಟ್ಟುಕೊಂಡಿದೆ. ತಾನು ಆಮದುಗಳ ಹಾವಳಿಯಿಂದ ರಕ್ಷಿಸಿಕೊಳ್ಳುವಾಗ, ಉಳಿದ ದೇಶಗಳು ಮುಕ್ತ ವ್ಯಾಪಾರ ನೀತಿಯನ್ನು ಒಪ್ಪಿಕೊಳ್ಳುತ್ತವೆ ಎಂಬುದು ಅಮೆರಿಕದ ಪೂರ್ವಕಲ್ಪನೆ. ವಸಾಹತು ಕಾಲದಲ್ಲಿ, ಬ್ರಿಟನ್ ಇಂತಹ ನೀತಿಯನ್ನೇ ಬಹಳ ಕಾಲ ಅನುಸರಿಸಿತ್ತು.

ಈ ಪರಿಸ್ಥಿತಿಯಲ್ಲಿ, ಯಾವ ಮಾರ್ಗ ಅನುಸರಿಸಿದರೂ, ಅದು, ಈಗ ಜಾರಿಯಲ್ಲಿರುವ ಜಾಗತೀಕರಣವು ಕೊನೆಗೊಳ್ಳುವ ಮುನ್ನೆಚ್ಚರಿಕೆಯಾಗಿದೆ. ಅಮೆರಿಕ ಒಂದು ವೇಳೆ 'ಮುಕ್ತ ಏಕ–ಮುಖ ವ್ಯಾಪಾರ' ಆಳ್ವಿಕೆ ಹೇರುವಲ್ಲಿ ಯಶಸ್ವಿಯಾದರೆ, ದೇಶಗಳ ನಡುವೆ ಸಮತೆ ಇದ್ದಂತೆ ಕಾಣುವ ಜಾಗತೀಕರಣದ ಬದಲಾಗಿ, ವಸಾಹತು ಕಾಲದಲ್ಲಿ ಎದ್ದುಕಾಣುತ್ತಿದ್ದ ದೇಶಗಳ ನಡುವಿನ ಅಸಮತೆಯ ದಿನಗಳಿಗೆ ನಾವು ಮರಳಲಿದ್ದೇವೆ. ಅಮೆರಿಕ ಒಂದು ವೇಳೆ 'ಮುಕ್ತ ಏಕ–ಮುಖ ವ್ಯಾಪಾರ' ಆಳ್ವಿಕೆ ಹೇರುವಲ್ಲಿ ವಿಫಲವಾದರೆ, ವ್ಯಾಪಾರಗಳ ಸ್ಪರ್ಧಾತ್ಮಕ ರಕ್ಷಣೆಗೆ ನಾವು ಮುಂದಾಗುತ್ತೇವೆ. ಆಗ, ಜಾಗತೀಕರಣದ ಪ್ರಧಾನ ಲಕ್ಷಣವಾಗಿರುವ ಬಂಡವಾಳ, ಸರಕು, ಸೇವೆಗಳ ವಿಶ್ವಾದ್ಯಂತ ಮುಕ್ತ ಚಲನೆಯೇ ಮಾಯವಾಗುತ್ತದೆ.

ಆದರೆ, ಜಾಗತೀಕರಣವು ಮುಂದುವರಿಯಲಾಗದ ಸ್ಥಿತಿಗೆ ತಲುಪಿರುವುದು ಟ್ರಂಪ್ ನೀತಿಗಳಿಂದಾಗಿಯೇ ಅಲ್ಲ. ಜಾಗತೀಕರಣದ ರಚನೆ ಇರುವುದೇ ಹಾಗೆ. 2008ರಲ್ಲಿ ಅಮೆರಿಕದ ಗೃಹಸಾಲ ಗುಳ್ಳೆ ಒಡೆದಾಗಿನಿಂದ ಆರಂಭವಾಗಿ ಇನ್ನೂ ಎಳೆಯುತ್ತಿರುವ ಆರ್ಥಿಕ ಬಿಕ್ಕಟ್ಟಿನಿಂದ ಜಾಗತಿಕ ಅರ್ಥವ್ಯವಸ್ಥೆ ಚೇತರಿಸಿಕೊಳ್ಳಬೇಕೆಂದಾದರೆ, ಜಾಗತಿಕ ಮಟ್ಟದಲ್ಲಿ ಒಟ್ಟಾರೆ ಬೇಡಿಕೆ ಹೆಚ್ಚುವಂತೆ ನೋಡಿಕೊಳ್ಳಬೇಕಾಗುತ್ತದೆ. ಒಟ್ಟಾರೆ ಬೇಡಿಕೆ ಹೆಚ್ಚಿಸುವ ನಿಟ್ಟಿನಲ್ಲಿ ಈ ವರೆಗೆ ಅಮೆರಿಕ ಅನುಸರಿಸಿದ ಹಣಕಾಸು ನೀತಿಯು (ಅಂದರೆ, ಬಡ್ಡಿ ದರದ ಏರಿಳಿಕೆ) ಹೋಲಿಕೆ ಇಲ್ಲದಷ್ಟು ಅಸಮರ್ಥವಾಗಿದೆ. ಏಕೆಂದರೆ, ಅಮೇರಿಕದಲ್ಲಿ ಬಹಳ ಕಾಲ ಅನುಸರಿಸಿದ ಶೂನ್ಯ ಬಡ್ಡಿ ದರ ನೀತಿಯು ನಿರುದ್ಯೋಗ ನಿವಾರಿಸುವಲ್ಲಿ ಹೇಳಿಕೊಳ್ಳುವಷ್ಟು ಪರಿಣಾಮ ಬೀರಿಲ್ಲ. ಹಾಗಾಗಿ, ಒಟ್ಟಾರೆ ಬೇಡಿಕೆ ಹೆಚ್ಚಿಸುವ ಏಕ ಮಾತ್ರ ಉಪಾಯವೆಂದರೆ, ವಿತ್ತೀಯ ಮಧ್ಯಸ್ಥಿಕೆ. ಅಂದರೆ, ಸರ್ಕಾರವು ಕೊರತೆ ಬಜೆಟ್ ಮೂಲಕ ರಚನಾತ್ಮಕ ಕಾರ್ಯಗಳಿಗೆ ಹೆಚ್ಚು ಹಣ ವಿನಿಯೋಗಿಸಬೇಕಾಗುತ್ತದೆ.

ವಿತ್ತೀಯ ಮಧ್ಯಪ್ರವೇಶದ ಮೂಲಕ ಒಟ್ಟಾರೆ ಬೇಡಿಕೆ ಹೆಚ್ಚಿಸುವ ಕ್ರಮವನ್ನು (ಅಂದರೆ, ಸರ್ಕಾರವು ರಚನಾತ್ಮಕ ಕಾರ್ಯಗಳಿಗೆ ಹೆಚ್ಚು ಹಣ ವಿನಿಯೋಗಿಸುವ ಕಾರ್ಯಕ್ರಮ) ಹಣಕಾಸು ಬಂಡವಾಳವು ಅನಿವಾರ್ಯವಾಗಿ ಮತ್ತು ನಿರ್ದಾಕ್ಷಿಣ್ಯವಾಗಿ ವಿರೋಧಿಸುತ್ತದೆ. ಹಣಕಾಸು ಬಂಡವಾಳವು ಜಾಗತೀಕರಣಗೊಂಡಿರುವುದರಿಂದ ಅದರ ವ್ಯಾಪ್ತಿ ಇಡೀ ವಿಶ್ವದ ಉದ್ದಗಲಕ್ಕೂ ಇದೆ. ಪ್ರಭುತ್ವದ (ರಾಜ್ಯಾಧಿಕಾರ) ವ್ಯಾಪ್ತಿ ರಾಷ್ಟ್ರದ ಎಲ್ಲೆಗೆ ಸೀಮಿತವಾಗಿದೆ. ಹಾಗಾಗಿ, ಹಣಕಾಸು ಬಂಡವಾಳದ ವಿರೋಧವು ನಿರ್ಣಾಯಕ ಬಲದಿಂದ ಕೂಡಿದೆ. ಆದ್ದರಿಂದ, ಯಾವುದೇ ರಾಷ್ಟ್ರ–ಪ್ರಭುತ್ವವು ಹಣಕಾಸು ಬಂಡವಾಳದ ಹಿತಾಸಕ್ತಿಗೆ ವಿರುದ್ಧವಾಗಿ ವರ್ತಿಸಿದರೆ, ಆ ದೇಶದಿಂದ ಬಂಡವಾಳ ಹೊರ ಹರಿಯುವ ಅಪಾಯದ ಪರಿಣಾಮವನ್ನು ಎದುರಿಸಬೇಕಾಗುತ್ತದೆ. ಆ ದೇಶದಲ್ಲಿ ಆರ್ಥಿಕ ಬಿಕ್ಕಟ್ಟಿನ ಜೊತೆಗೆ ಸಾಲ ತೀರಿಸಲಾರದ ದಿವಾಳಿತನ ಉಂಟಾಗುತ್ತದೆ. ಹಾಗಾಗಿ, ಹಣಕಾಸು ಬಂಡವಾಳವೇ ಕೇಂದ್ರಸ್ಥಾನದಲ್ಲಿರುವ ಜಾಗತೀಕರಣದ ಬಲೆಯಲ್ಲಿ ಸಿಕ್ಕಿಕೊಂಡಿರುವ ರಾಷ್ಟ್ರ–ಪ್ರಭುತ್ವವು ಒಟ್ಟಾರೆ ಬೇಡಿಕೆ ಹೆಚ್ಚಿಸುವ ಸಲುವಾಗಿ, ವಿತ್ತೀಯ ಮಧ್ಯಪ್ರವೇಶದ ಕ್ರಮವನ್ನು ತೊರೆಯಬೇಕಾಗುತ್ತದೆ. ಪರಿಣಾಮವಾಗಿ, ಒಟ್ಟಾರೆ ಬೇಡಿಕೆಯ ಅಸಮರ್ಪಕತೆಯಿಂದಾಗಿ, ಬಿಕ್ಕಟ್ಟಿನ ಬೋನಿಗೆ ಬಿದ್ದಿರುವ ಜಾಗತಿಕ ಅರ್ಥವ್ಯವಸ್ಥೆಯ ಒದ್ದಾಟ ಮುಂದುವರೆಯುತ್ತದೆ.

ಆಗೊಮ್ಮೆ ಈಗೊಮ್ಮೆ ಏಳುವ ಆಸ್ತಿ ಬೆಲೆ ಗುಳ್ಳೆಗಳು ಒದಗಿಸುವ ಕ್ಷಣಿಕ ಉಪಶಮನವನ್ನು ಪಕ್ಕಕ್ಕಿಟ್ಟು, ಹಾಗೂ, ಯಾವುದೇ ಒಂದು ದೇಶವು ತನ್ನ ಪರಿಸ್ಥಿತಿಯನ್ನು ಉತ್ತಮವಾಗಿಸಿಕೊಳ್ಳಲು ಟ್ರಂಪ್ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿರುವ 'ನನ್ನ ನೆರೆಯವನು ಹಾಳಾಗಲಿ' ನೀತಿಯ ಅನುಸರಣೆ ಯಶಸ್ವಿಯಾಗುವ ಸಾಧ್ಯತೆಯನ್ನು ಪಕ್ಕಕ್ಕಿಟ್ಟು ನೋಡಿದರೂ, ಜಾಗತಿಕ ಅರ್ಥವ್ಯವಸ್ಥೆಯು ಈಗಿರುವ ಬಿಕ್ಕಟ್ಟಿನಿಂದ ಹೊರ ಬರಲು ಸಾಧ್ಯವಿರುವ ಎರಡು ದಾರಿಗಳಿವೆ.

ಒಂದು, ಬಹಳಷ್ಟು ರಾಷ್ಟ್ರ–ಪ್ರಭುತ್ವಗಳು ಸುಸಂಘಟಿತವಾಗಿ ಒಂದು ಉತ್ತೇಜಕ ವಿತ್ತೀಯ ನೀತಿಯ ಪ್ರಾಮಾಣಿಕ ಅನುಸರಣೆ. ಇಂತಹ ಉತ್ತೇಜಕ ನೀತಿಯ ಅನುಸರಣೆ ಜಾಗತಿಕ ಹಣಕಾಸು ಬಂಡವಾಳದ ಆಶಯಗಳಿಗೆ ವಿರುದ್ಧವಾಗಿದ್ದರೂ, ಅದು ಒಂದು ದೇಶದಿಂದ ಬಂಡವಾಳ ಹಿಂತೆಗೆದು ಮತ್ತೊಂದು ದೇಶಕ್ಕೆ ಪರಾರಿಯಾಗಲಾರದು. ಏಕೆಂದರೆ, ಎಲ್ಲ ದೇಶಗಳೂ ವಿತ್ತೀಯ ಮಧ್ಯಪ್ರವೇಶದಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಂಡಿರುತ್ತವೆ.

ಇನ್ನೊಂದು, ಜಾಗತೀಕರಣದಿಂದ, ಅದರಲ್ಲೂ ಮುಖ್ಯವಾಗಿ, ಬಂಡವಾಳದ ಹೊರ ಹರಿವಿನ ಮೇಲೆ ನಿಯಂತ್ರಣ ಹೇರುವ ಮೂಲಕ, ಜಾಗತಿಕ ಹಣಕಾಸು ಹರಿವಿನ ಸುಳಿಯಿಂದ ದೇಶಗಳು ತಮ್ಮನ್ನು ತಾವೇ ರಕ್ಷಿಸಿಕೊಂಡು, ವಿತ್ತೀಯ ಮಧ್ಯಪ್ರವೇಶದಲ್ಲಿ ಕ್ರಿಯಾಶೀಲವಾಗಿ ತೊಡಗುವುದು ಮತ್ತು ಅದರ ಜೊತೆಯಲ್ಲಿ ವಿದೇಶ ವ್ಯಾಪಾರಗಳಲ್ಲಿ ದೇಶ ತಡೆದುಕೊಳ್ಳುವಷ್ಟು ಮಟ್ಟದ ಬಾಕಿ ಹಣ ಉಳಿಯುವಂತೆ ನೋಡಿಕೊಳ್ಳುವ ಉದ್ದೇಶದಿಂದ ವಿದೇಶ ವ್ಯಾಪಾರಗಳಲ್ಲಿ ಅಗತ್ಯವಾದ ನಿರ್ಬಂಧ ವಿಧಿಸುವುದೂ ಅವಶ್ಯವಾಗುತ್ತದೆ.

ಬಿಕ್ಕಟ್ಟಿನಿಂದ ಹೊರ ಬರುವ ಈ ಪ್ರತಿ ಮಾರ್ಗದಲ್ಲಿಯೂ ಹಣಕಾಸು ಬಂಡವಾಳದ ವಿರೋಧವನ್ನು ಎದುರಿಸಿ ಅದರಲ್ಲಿ ಮೇಲುಗೈ ಪಡೆಯಬೇಕಾಗುತ್ತದೆ. ಅದು ಸುಲಭದ ಮಾತಲ್ಲ. ಅನೇಕ ದೇಶಗಳು ಒಟ್ಟಾಗಿ ನಿಂತು ಒಂದು ಸುಸಂಘಟಿತವಾದ ವಿತ್ತೀಯ ಉತ್ತೇಜಕ ನೀತಿಯ ಅನುಸರಣೆಯ ಉಪಾಯವನ್ನು 1930ರ ದಶಕದ ಮಹಾ ಕುಸಿತದ ಸಂದರ್ಭದಲ್ಲಿ ಜಾನ್ ಮೇನಾರ್ಡ್ ಕೀನ್ಸ್ ಸೂಚಿಸಿದ್ದರು. ಅದಕ್ಕಿಂತಲೂ ಮೊದಲು, ಜರ್ಮನ್ ಟ್ರೇಡ್ ಯೂನಿಯನ್ ನಾಯಕರೂ ಇದೇ ಪ್ರಸ್ತಾಪ ಮಂಡಿಸಿದ್ದರು. ಆದರೆ, ಹಣಕಾಸು ಬಂಡವಾಳದ ಪ್ರಬಲ ವಿರೋಧದಿಂದಾಗಿ ಈ ಪ್ರಸ್ತಾಪಗಳು ಬಿದ್ದುಹೋದವು.

ಇಂದಿನ ಸನ್ನಿವೇಶದಲ್ಲೂ, ಇಂತಹ ಪ್ರಸ್ತಾಪಗಳಿಗೆ ಹಣಕಾಸು ಬಂಡವಾಳದ ವಿರೋಧವು ಧೃಢವಾಗಿಯೂ ಮತ್ತು ಪರಿಣಾಮಕಾರಿಯೂ ಆಗಿರುತ್ತದೆ. ಏಕೆಂದರೆ, ಇಂದಿನ ಜಾಗತೀಕರಣದ ಆಧಿಪತ್ಯದಲ್ಲಿ ಹಣಕಾಸು ಬಂಡವಾಳವು ಒಂದು ಆಯಕಟ್ಟಿನ ಸ್ಥಾನ ಆಕ್ರಮಿಸಿಕೊಂಡಿದೆ. ಮಿಗಿಲಾಗಿ ವಿತ್ತೀಯ ಮಧ್ಯಪ್ರವೇಶದ ನೀತಿಯ ವಿರುದ್ಧ ನಿಂತಿರುವುದನ್ನು ರಾಜಕೀಯವಾಗಿ ಪ್ರತಿರೋಧಿಸುವ ರೈತ–ಕಾರ್ಮಿಕರ ಚಳವಳಿಗಳು ಜಾಗತಿಕ ಮಟ್ಟದಲ್ಲಿ ನಡೆದಿಲ್ಲ.

ಬಿಕ್ಕಟ್ಟಿನಿಂದ ಹೊರ ಬರುವ ಸಲುವಾಗಿ, ಹಣಕಾಸು ಬಂಡವಾಳವು ವಿತ್ತೀಯ ಮಧ್ಯಪ್ರವೇಶಕ್ಕೆ ವಿರೋಧವಾಗಿರುವ ನಿಲುವನ್ನು ಪ್ರತಿರೋಧಿಸುವ ಉದ್ದೇಶದಿಂದ ನಿರ್ದಿಷ್ಟ ದೇಶಗಳಲ್ಲಿ ಜನರನ್ನು ಅಣಿನೆರೆಸಲು ಶಕ್ಯವಿದೆ. ಟ್ರಂಪ್, ಹಣಕಾಸು ಬಂಡವಾಳದ ಆಧಿಪತ್ಯವನ್ನು ಎದುರು ಹಾಕಿಕೊಳ್ಳದಿರುವುದು, ವಿತ್ತೀಯ ಕೊರತೆಯ ಮೂಲಕ ಸರ್ಕಾರದ ಖರ್ಚುಗಳನ್ನು ಹೆಚ್ಚಿಸದಿರುವುದು, ಮತ್ತು ಅವುಗಳ ಬದಲಿಗೆ, 'ನನ್ನ ನೆರೆಯವನು ಹಾಳಾಗಲಿ' ನೀತಿಗೆ ಶರಣಾಗಿರುವುದು ಅವರ ವರ್ಗ ಪಕ್ಷಪಾತವನ್ನು ತೋರಿಸುತ್ತದೆ. ಅದೇನೂ ಈ ಪರ್ಯಾಯವನ್ನು ಅಡ್ಡಿಪಡಿಸುವ ಸೂಚನೆಯಲ್ಲ.

ನಿರ್ದಿಷ್ಟ ದೇಶಗಳಲ್ಲಿ, ಕಾರ್ಮಿಕರು, ರೈತರು, ಕೃಷಿ ಕೂಲಿಕಾರರು ಮತ್ತು ಕಿರು ಉತ್ಪಾದಕರನ್ನು ಅಣಿನೆರೆಸುವ ಮೂಲಕ ಹಣಕಾಸು ಬಂಡವಾಳದ ಆಧಿಪತ್ಯದ ವಿರುದ್ಧ ಮೇಲುಗೈ ಸಾಧಿಸಿ, ಅರ್ಥವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸಲು ಅಗತ್ಯವಿರುವ ಒಂದು ಪರ್ಯಾಯ ಏರ್ಪಾಡು ಮತ್ತು ಅದರ ಕಾರ್ಯವ್ಯೂಹವನ್ನು ಜನರ ಮುಂದಿಡುವುದು ಅವಶ್ಯವಿದೆ. ಆರಂಭದಲ್ಲಿ, ಈ ಏರ್ಪಾಡು ಬಂಡವಾಳಶಾಹಿ ಅರ್ಥವ್ಯವಸ್ಥೆಯ ಚೌಕಟ್ಟನ್ನು ಒಪ್ಪಿಕೊಂಡರೂ, ಅದಕ್ಕೇ ಸೀಮಿತಗೊಂಡಿರಬೇಕು ಎಂದೇನಿಲ್ಲ. ಈ ಏರ್ಪಾಡು, ಬಂಡವಾಳಶಾಹಿ ವ್ಯವಸ್ಥೆಯನ್ನು ಮೀರುವ ಹೊಸದೊಂದು ವ್ಯವಸ್ಥೆಯ ಉದಯಕ್ಕೆ ಪ್ರೇರಕ ಶಕ್ತಿಯೂ ಆಗಬಲ್ಲದು.

ಸಂಕ್ಷಿಪ್ತವಾಗಿ ಹೇಳುವುದಾದರೆ, ಪ್ರಚಲಿತ ಜಾಗತೀಕರಣವನ್ನು ಕೊನೆಗೊಳಿಸುವ ಹೊಸ ಸಾಧ್ಯತೆಗಳು ತೆರೆದುಕೊಳ್ಳುತ್ತಿವೆ. ತಮಾಷೆಯೆಂದರೆ, ಈ ಜಾಗತೀಕರಣವೇ ಅಂತಿಮ, ಅದು ಚರಿತ್ರೆಯ ಅಂತ್ಯ ಎಂದೆಲ್ಲಾ ಹಾಡಿ ಹೊಗಳಿ ಬಹಳ ಕಾಲವೇನೂ ಆಗಿಲ್ಲ.

(ಪ್ರೊ. ಪ್ರಭಾತ್ ಪಟ್ನಾಯಕ್ ಅವರ The End of Globalisation ಲೇಖನದ ಸಾರಾಂಶ.)

ಹರ್ಯಾಣ ಬಿಜೆಪಿ ಸರಕಾರದ ಸಾರಿಗೆ ಖಾಸಗೀಕರಣವನ್ನು ವಿಫಲಗೊಳಿಸಿದ ನಾಲ್ಕು ದಿನಗಳ ಮುಷ್ಕರ

ಹರ್ಯಾಣದಲ್ಲಿ ಸಾರ್ವಜನಿಕ ಸಾರಿಗೆಯನ್ನು ಖಾಸಗೀಕರಿಸುವ ಬಿಜೆಪಿ ಸರಕಾರ ಹುನ್ನಾರವನ್ನು ಅಲ್ಲಿನ ಸಾರಿಗೆ ಕಾರ್ಮಿಕರ ನಾಲ್ಕು ದಿನಗಳ ಐಕ್ಯ ಮುಷ್ಕರ ವಿಫಲಗೊಳಿಸಿದೆ.

ಈಗ ಹರ್ಯಾಣ ರೋಡ್‌ವೇಸ್ ಕಾರ್ಪೊರೇಶನ್ ಬಸ್‌ಗಳನ್ನು ನಡೆಸುತ್ತಿರುವ 253 ರೂಟ್‌ಗಳಲ್ಲಿ ತಮ್ಮ ಬಸ್‌ಗಳನ್ನು ಓಡಿಸಲು ಹರ್ಯಾಣ ಸರಕಾರ 853 ಪರ್ಮಿಟ್‌ಗಳನ್ನು ಕೊಟ್ಟಿತ್ತು. ಹೊಸದಾಗಿ ತಂದ ನಿಯಮಗಳ ಅಡಿಯಲ್ಲಿ ಇನ್ನೂ 1669 ಪರ್ಮಿಟ್‌ಗಳಿಗ ಅರ್ಜಿಗಳನ್ನು ಪುರಸ್ಕರಿಸುವ ಯೋಜನೆಯಲ್ಲಿತ್ತು. ಕ್ರಮೇಣ ಸರಕಾರೀ ಸ್ವಾಮ್ಯದ ಸಾರಿಗೆಯನ್ನು ನಷ್ಟದತ್ತ ತಳ್ಳಿ ಪೂರ್ಣವಾಗಿ ಖಾಸಗೀಕರಣವನ್ನು ಸಾಧಿಸುವುದು ಸರಕಾರದ ಹೂಟವಾಗಿತ್ತು.

ಇದನ್ನು ಅರಿತ ರಾಜ್ಯದ ಸಾರಿಗೆ ವಲಯದ ಎಲ್ಲ ಕಾರ್ಮಿಕ ಸಂಘಗಳು ಒಟ್ಟಾಗಿ ಎಪ್ರಿಲ್ 10ರಿಂದ ಮುಷ್ಕರಕ್ಕೆ ಕರೆ ನೀಡಿದರು. ಮುಷ್ಕರ ಎಷ್ಟು ಸಂಪೂರ್ಣವಾಗಿ ನಡೆಯಿತೆಂದರೆ ರೋಡ್‌ವೇಸ್‌ನ 4000 ಬಸ್ಸುಗಳಲ್ಲಿ ಸುಮಾರಾಗಿ ಯಾವುದನ್ನೂ ನಡೆಸಲು ಸರಕಾರಕ್ಕೆ ಸಾಧ್ಯವಾಗಲಿಲ್ಲ. ಮುಷ್ಕರ ಮುಂದುವರೆಯಿತು. ಒಂದು ಕಡೆ ಕಾರ್ಮಿಕ ಸಂಘಗಳೊಂದಿಗೆ ಮಾತುಕತೆ ನಡೆಸುತ್ತಿರುವಾಗಲೇ ಇನ್ನೊಂದು ಕಡೆಯಲ್ಲಿ ಖಾಸಗಿಯವರಿಗೆ ಕೊಟ್ಟ ಪರ್ಮಿಟ್‌ಗಳನ್ನು ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ಮಂತ್ರಿಗಳು ಸಾರಿದರು. 120ಕ್ಕಿಂತಲೂ ಹೆಚ್ಚು ಮಂದಿ ಕಾರ್ಮಿಕ ಸಂಘಗಳ ಸಕ್ರಿಯ ಕಾರ್ಯಕರ್ತರನ್ನು ಅಮಾನತು ಮಾಡಿದರು. ಆದರೂ ಕಾರ್ಮಿಕರು ಜಗ್ಗಲಿಲ್ಲ.

ಕೊನೆಗೂ ಎಪ್ರಿಲ್13 ರ ಸಂಜೆ ಸರಕಾರ ಮಣಿಯಬೇಕಾಗಿ ಬಂತು. ಅದು 853 ಪರ್ಮಿಟ್‌ಗಳನ್ನು ರದ್ದು ಮಾಡುವುದಾಗಿಯೂ ಹೊಸದಾಗಿ ಕೊಡಬೇಕೆಂದಿದ್ದ 1669 ಪರ್ಮಿಟ್‌ಗಳನ್ನು ಕೊಡುವುದಿಲ್ಲ ಎಂದೂ ಒಪ್ಪಿಕೊಂಡಿತು. ಹೈಕೋರ್ಟಿನಲ್ಲಿ ವಿಚಾರಣಾಧೀನವಾಗಿರುವ ಖಾಸಗೀಕರಣದ ದಸ್ತಾವೇಜನನು ಹಿಂತೆಗೆದುಕೊಂಡು ಕಾರ್ಮಿಕ ಸಂಘಗಳೊಂದಿಗೆ ಸಮಾಲೋಚಿಸಿ ಹೊಸದೊಂದು ಧೋರಣೆಯನ್ನು ರೂಪಿಸಲಾಗುವುದು ಎಂದು ಹೇಳಿತು. ಮತ್ತು ಈ ನಾಲ್ಕು ದಿನಗಳ ಮುಷ್ಕರದಲ್ಲಿ ಕಾರ್ಮಿಕರ ವಿರುದ್ಧ ಕೈಗೊಂಡ ಶಿಕ್ಷಾ ಕ್ರಮಗಳನ್ನು ಹಿಂತೆಗೆದುಕೊಳ್ಳುವುದಾಗಿಯೂ ಹೇಳಿತು.

ಮಹಾರಾಷ್ಟ್ರದಲ್ಲಿ ಮಾರ್ಚ್‌ನಲ್ಲಿ ರೈತರ ಆತ್ಮಹತ್ಯೆಗಳಲ್ಲಿ 15% ಏರಿಕೆ

ಮಹಾರಾಷ್ಟ್ರದಲ್ಲಿ ಕಳೆದ ವರ್ಷ ಉತ್ತಮ ಮಳೆಯಾಗಿದ್ದರೂ ರೈತರ ಆತ್ಮಹತ್ಯೆಗಳ ಸಂಖ್ಯೆ ಏರುತ್ತಲೇ ಇದೆ.

ಮಾರ್ಚ್ ತಿಂಗಳಲ್ಲಿ 235 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಫೆಬ್ರುವರಿಯಲ್ಲಿ ಈ ಸಂಖ್ಯೆ 202 ಇತ್ತು. ಜನವರಿಯಲ್ಲೂ ಅಷ್ಟೇ ಇತ್ತು. ಅಂದರೆ ಈ ವರ್ಷದ ಮೂರೇ ತಿಂಗಳಲ್ಲಿ ಒಟ್ಟು 639 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇದು ಸ್ವತಃ ಬಿಜೆಪಿ ಮುಖಂಡ ಚಂದ್ರಕಾಂತ್ ಪಾಟೀಲ್ ನೇತೃತ್ವದ ಪರಿಹಾರ ಮತ್ತು ಪುನರ್ವಸತಿ ಇಲಾಖೆಯ ಅಂಕಿ-ಅಂಶಗಳು.

ಈ ಹಿನ್ನೆಲೆಯಲ್ಲಿ ಮತ್ತು ಉತ್ತರ ಪ್ರದೇಶದಲ್ಲಿ ಸಾಲಮನ್ನಾ ಪ್ರಕಟಿಸಿರುವ ಹಿನ್ನೆಲೆಯಲ್ಲಿ ರಾಜ್ಯದಲ್ಲೂ ಸಾಲಮನ್ನಾದ ಬೇಡಿಕೆಗೆ ಇನ್ನಷ್ಟು ಬಲ ಬಂದಿದೆ. ಬಿಜೆಪಿ ಸರಕಾರ ಇದನ್ನು ಬದಿಗೆ ತಳ್ಳುತ್ತ ಬಂದಿತ್ತು.

ತ್ರಿಪುರ ಬಿಜೆಪಿ ಅಧ್ಯಕ್ಷರ ಬಡಾಯಿ ಬಾಯಿ ತಪ್ಪಿ ಬಯಲಾದ 'ಬಚ್ಚಿಟ್ಟ ಅಜೆಂಡಾ'ವೇ?

"ಉತ್ತರಪ್ರದೇಶದಲ್ಲಿ ಮತ್ತು ಮಣಿಪುರದಲ್ಲಿ ಚುನಾವಣೆಗಳು ನಡೆದಂತೆ ತ್ರಿಪುರದಲ್ಲೂ ಅದರ ಪುನರಾವರ್ತನೆಯಾಗುತ್ತದೆ. ಸ್ವತಃ ಮಾಣಿಕ್ ಸರ್ಕಾರ್ ತನ್ನ ಮತವನ್ನು ತನ್ನ ಪಕ್ಷಕ್ಕೆ ಹಾಕಿದರೂ ಅದು ಕಮಲದ ಪರವಾಗಿಯೇ ದಾಖಲಾಗುತ್ತದೆ. ನೀವು, ಮಾಣಿಕ್ ಸರ್ಕಾರ್, ಹೋಗಿ ಬಿಪ್ಲಬ್ ದೇಬ್ ವಿರುದ್ಧ, ತಾಕತ್ತಿದ್ದರೆ ದೂರು ಕೊಡಿ.... ಬಿಜೆಪಿ ಅಧಿಕಾರ ಗೆದ್ದರೆ ನಾನೇ ಸ್ವತಃ .1500 ಕೋಟಿ ರೂಪಾಯಿಗಳನ್ನು ವಿಶೇಷ ಪ್ಯಾಕೇಜಾಗಿ ಕೇಂದ್ರದಿಂದ ಕೊಡಿಸುತ್ತೇನೆ. ಆಗ ತ್ರಿಪುರ ಒಂದು ರೇಗ ರಾಜ್ಯವಾಗಿರುವದಿಲ್ಲ, ಮೂರೇ ವರ್ಷಗಳೊಳಗೆ ತ್ರಿಪುರ ದೇಶದಲ್ಲೇ ಅತ್ಯುತ್ತಮ ರಾಜ್ಯವಾಗುತ್ತದೆ"

ಹೌದು, ಇದು ತ್ರಿಪುರ ರಾಜ್ಯ ಬಿಜೆಪಿ ಅಧ್ಯಕ್ಷ ಬಿಪ್ಲಬ್ ದೇಬ್ ಉವಾಚ– ಎಪ್ರಿಲ್ 12ರಂದು ತೆಲಿಯಮುರ ಸಬ್ ಡಿವಿಜನ್‌ನಲ್ಲಿ ಮಾಡಿದ ಬಹಿರಂಗ ಭಾಷಣದಲ್ಲಿ.

ಅವರ ಈ ಬಡಾಯಿಯಲ್ಲಿ ಕೆಲವು ಅಂಶಗಳನ್ನು ಗಮನಿಸಬಹುದು:

1. ಆಳುವ ಬಿಜೆಪಿ ತನಗೆ ಬೇಕಾದ ಚುನಾವಣಾ ಫಲಿತಾಂಶಗಳನ್ನು ಸೃಷ್ಟಿಸಬಲ್ಲದು.
2. ಉತ್ತರಪ್ರದೇಶ ಮತ್ತು ಮಣಿಪುರದಲ್ಲಿ ಇತ್ತೀಚಿನ ಚುನಾವಣೆಗಳ ಫಲಿತಾಂಶಗಳು ಬಿಜೆಪಿ ಸೃಷ್ಟಿಸಿದ್ದು.
3. ಒಬ್ಬ ಬಿಜೆಪಿ ರಾಜ್ಯಾಧ್ಯಕ್ಷನಿಗೆ ಇಂತಹ ಬಡಾಯಿಯ ವಿರುದ್ಧ ನ್ಯಾಯಾಲಯದಲ್ಲಿ ಕೇಸು ಹಾಕಬಹುದು ಎಂಬ ಭೀತಿಯೂ ಇಲ್ಲ.
4. ಕೇಂದ್ರದಲ್ಲಿನ ಸರಕಾರದ ಖಜಾನೆ ಬಿಜೆಪಿಯ ಸೊತ್ತು. ಎಡರಂಗ ಸರಕಾರ 13ನೇ ಹಣಕಾಸು ಆಯೋಗ ವಂಚಿಸಿದ ಹಣಕ್ಕೆ ಪ್ರತಿಯಾಗಿ 10,000 ಕೋಟಿ ರೂ. ವಿಶೇಷ ಅನುದಾನ ಕೊಡಬೇಕು ಎಂದು ಕೇಳಿದ್ದನ್ನು ಹಿಂದಿನ ಯುಪಿಎ ಸರಕಾರದಂತೆ ಈ ಬಿಜೆಪಿ ಸರಕಾರವೂ ತಿರಸ್ಕರಿಸಿದ್ದರೂ, 1500 ಕೋಟಿ ರೂ. ವಿಶೇಷ ಪ್ಯಾಕೇಜ್ ಕೊಡಿಸುವುದೆಂದರೆ ಕೇಂದ್ರದಲ್ಲೂ ರಾಜ್ಯದಲ್ಲು ಒಂದೇ ಪಕ್ಷ ಆಡಳಿತ ನಡೆಸಬೇಕು, ಒಕ್ಕೂಟ ತತ್ವ ಅರ್ಥಹೀನ ಎಂದರ್ಥ.
5. 'ರೇಗ ರಾಜ್ಯ' ಎಂದರೆ ಏನರ್ಥ? ತ್ರಿಪುರ ಹಿಂದಿನ ನಾಲ್ಕು ವರ್ಷಗಳಲ್ಲಿ 'ಮನರೇಗ'ವನ್ನು ಅತ್ಯುತ್ತಮವಾಗಿ ನಿರ್ವಹಿಸಿದ ರಾಜ್ಯ ಎಂಬ ಬಗ್ಗೆ ಅಸಹನೆಯೇ, ಅಥವ ಕೋಟ್ಯಂತರ ಬಡ ಗ್ರಾಮೀಣರಿಗೆ ತುಸುವಾದರೂ ಜೀವನಾಧಾರ ಕಲ್ಪಿಸಿದ ಯೋಜನೆಯೆಂದು ಪ್ರಖ್ಯಾತವಾಗಿರುವ ಒಂದು ಯೋಜನೆಯ ಬಗ್ಗೆ ಬಿಜೆಪಿಯ ತಿರಸ್ಕಾರದ ಸಂಕೇತವೇ?

ಇದಕ್ಕಿಂತ ಹೆಚ್ಚಾಗಿ, ಬಿಜೆಪಿ ರಾಜ್ಯಾಧ್ಯಕ್ಷನ(ಅಥವ ಮುಖ್ಯಮಂತ್ರಿ ಪದಾಕಾಂಕ್ಷಿಯ) ಇಂತಹ ಹುಚ್ಚು ಮಾತುಗಳ ಬಗ್ಗೆ ರಾಷ್ಟ್ರೀಯ ಮುಖಂಡರಾಗಲೀ ಖಂಡಿಸುವ ಅಥವ ಸ್ಪಷ್ಟೀಕರಣ' ನೀಡುವ ಗೋಜಿಗೂ ಹೋಗಿಲ್ಲ ಎಂಬುದು ಕೂಡ ಗಮನಾರ್ಹ.

ಮಲಪ್ಪುರಂ ಚುನಾವಣೆ: ವಿಸ್ತರಿಸಿದ ಎಲ್‌ಡಿಎಫ್ ಸಾಮೂಹಿಕ ನೆಲೆ

ಕೇರಳದ ಮಲಪ್ಪುರಂ ಲೋಕಸಭಾ ಕ್ಷೇತ್ರದಲ್ಲಿ ನಡೆದ ಉಪಚುನಾವಣೆಯಲ್ಲಿ ಯುಡಿಎಫ್‌ನ ಐಯುಎಂಎಲ್ ತನ್ನ ಸ್ಥಾನವನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಯುಡಿಎಫ್ ಅಭ್ಯರ್ಥಿ ಪಿ ಕೆ ಕುಂಞಾಲಿಕುಟ್ಟಿಯವರಿಗೆ 5,15,330 ಮತಗಳು ಬಂದರೆ ಎಲ್‌ಡಿಎಫ್‌ನ ಎಂ ಬಿ ಫೈಸಲ್ ಅವರಿಗೆ 3, 44, 307 ಮತಗಳು ಸಿಕ್ಕಿದವು. ಬಿಜೆಪಿಗೆ ಸಿಕ್ಕಮತಗಳು 65,675.

ಆದರೂ ಯುಡಿಎಫ್ ಅಭ್ಯರ್ಥಿಯ ಮತಗಳಲ್ಲಿ 77ಸಾವಿರ ಹೆಚ್ಚಳವಾಗಿದ್ದರೆ, ಎಲ್‌ಡಿಎಫ್ ಅಭ್ಯರ್ಥಿ 2014ರ ಸಾರ್ವತ್ರಿಕ ಚುನಾವಣೆಗಳಿಗಿಂತ 1,01,303 ಹೆಚ್ಚು ಮತಗಳನ್ನು ಪಡೆದಿದ್ದಾರೆ. ಕಳೆದ ಬಾರಿಗೆ ಹೋಲಿಸಿದರೆ ಮತದಾರರ ಸಂಖ್ಯೆಯಲ್ಲಿ 1,14,975 ಹೆಚ್ಚಳ ಆಗಿದೆ.ಎಲ್‌ಡಿಎಫ್‌ನ ಮತ ಪಾಲಿನಲ್ಲಿ 8.33% ಏರಿಕೆಯಾಗಿದ್ದರೆ, ಯುಡಿಎಫ್‌ನ ಮತಗಳಿಕೆಯಲ್ಲಿ ಆದ ಏರಿಕೆ 4.7%.

ಗಮನಿಸಬೇಕಾದ ಸಂಗತಿಯೆಂದರೆ ಬಿಜೆಪಿಯ 'ರಾಷ್ಟ್ರೀಯ' ಧೋರಣೆಗೆ ವಿರುದ್ಧವಾಗಿ ಉತ್ತಮ ಗೋಮಾಂಸದ ಭರವಸೆ ನೀಡಿದ ಬಿಜೆಪಿ ಅಭ್ಯರ್ಥಿಗೆ ಮತಗಳಲ್ಲಿ ಆದ ಹೆಚ್ಚಳ ಸುಮಾರು 1000.

ಹಿಂದಿನ ಚುನಾವಣೆಗಳಲ್ಲಿ ಎರಡು ಮುಸ್ಲಿಂ ಮೂಲಭೂತವಾದಿ ಪಕ್ಷಗಳು ಎಸ್‌ಡಿಪಿಐ ಮತ್ತು ವೆಲ್‌ಫೇರ್ ಪಾರ್ಟಿ ಸ್ಪರ್ಧಿಸಿದ್ದವು. ಈ ಬಾರಿ ಅವು ಯುಡಿಎಫ್ ಅಭ್ಯರ್ಥಿಯನ್ನು ಬೆಂಬಲಿಸಿದ್ದವು. ಅಂದರೆ ಒಂದೆಡೆಯಲ್ಲಿ ಐಯುಎಂಎಲ್ ಮತ್ತು ಇನ್ನೊಂದೆಡೆಯಲ್ಲಿ ಬಿಜೆಪಿ ಕೋಮುವಾದಿ ಧ್ರುವೀಕರಣದ ಪ್ರಯತ್ನಗಳನ್ನು ನಡೆಸಿದರು.

ಹಿರಿಯ ಐಯುಎಂಎಲ್ ಮುಖಂಡ ಇ.ಅಹ್ಮದ್ ಅವರ ನಿಧನದಿಂದ ಈ ಸ್ಥಾನ ತೆರವಾಗಿತ್ತು. ಅವರು 1,94,739 ಮತಗಳ ಅಂತರದಿಂದ ಗೆದ್ದಿದ್ದರು. ಈ ಬಾರಿ ಇದು 1,71,023ಕ್ಕೆ ಇಳಿದಿದೆ.

ದಿಲ್ಲಿಯ ಮೂರೂ ಮಹಾನಗರ ಪಾಲಿಕೆಗಳಲ್ಲಿ ಎಡಪಕ್ಷಗಳ ಸ್ಪರ್ಧೆ

ಏಳು ಎಡಪಕ್ಷಗಳು, ಸಿಪಿಐ(ಎಂ), ಸಿಪಿಐ, ಸಿಪಿಐ(ಎಂಎಲ್)–ಲಿಬರೇಶನ್, ಎಸ್‌ಯುಸಿಐ(ಸಿ), ಎಐಎಫ್‌ಬಿ, ಆರ್‌ಎಸ್‌ಪಿ ಮತ್ತು ಸಿಜಿಪಿಐ ಮುಂಬರುವ ದಿಲ್ಲಿಯ ಮೂರು ನಗರಪಾಲಿಕೆಗಳಲ್ಲಿ ಸ್ಪರ್ಧಿಸಲು ನಿರ್ಧರಿಸಿವೆ.ಇವು ಒಟ್ಟು 62 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದ್ದು ಸಿಪಿಐ(ಎಂ) –16, ಸಿಪಿಐ–14, ಸಿಪಿಐ(ಎಂಎಲ್)–ಲಿಬರೇಶನ್–13, ಎಸ್‌ಯುಸಿಐ(ಸಿ)–2, ಎಐಎಫ್‌ಬಿ–16 ಮತ್ತು ಸಿಜಿಪಿಐ–1 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿವೆ.

ಈ ಪಕ್ಷಗಳ ದಿಲ್ಲಿಯ ಮುಖಂಡರುಗಳು ಎಪ್ರಿಲ್ 19ರಂದು ಪತ್ರಿಕಾ ಸಮ್ಮೇಳನದಲ್ಲಿ ಈ ವಿಷಯವನ್ನು ಪ್ರಕಟಿಸಿದರು. ಈ ಮೂರು ನಗರಪಾಲಿಕೆಗಳ ಪ್ರದೇಶಗಳಲ್ಲಿ ನಾಗರಿಕ ಸೌಲಭ್ಯಗಳ ಕೊರತೆಯ ಸರ್ವವ್ಯಾಪಿ ಬಿಕ್ಕಟ್ಟಿಗೆ ಭಾರತೀಯ ಗುತ್ತೇದಾರಿ ಬಂಡವಾಳಿಗರ ಎರಡು ಪ್ರಮುಖ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಸ್ಸೇ ಕಾರಣ. ಇದರ ಮೂಲದಲ್ಲಿರುವುದು ನಾಗರಿಕ ಸೌಲಭ್ಯಗಳ ಖಾಸಗೀಕರಣ ಮತ್ತು ವ್ಯಾಪಾರೀಕರಣ. ಈ ಎರಡು ಪಕ್ಷಗಳ ಜನ-ವಿರೋಧಿ ಧೋರಣೆಗಳಿಂದ ಬೇಸತ್ತ ಜನಗಳು ಎಎಪಿ ಕಳೆದ ವಿಧಾನಸಭಾ ಚುನಾವಣೆಗಳ ಮೊದಲು ನೀಡಿದ ಭರವಸೆಗಳನ್ನು ಈಡೇರಿಸುತ್ತದೆ ಎಂದು ನಿರೀಕ್ಷಿಸಿದ್ದರು. ಆದರೆ ಅವರ ನಿರೀಕ್ಷೆ ಈಡೇರಿಲ್ಲ. ಉಳಿದೆರಡು ಪಕ್ಷಗಳಿಗೂ ಈ ಪಕ್ಷಕ್ಕೂ ಮೂಲಭೂತ ವ್ಯತ್ಯಾಸವೇನಿಲ್ಲ ಎಂಬುದು ಕಾರ್ಪೊರೇಟ್‌ಗಳಿಗೆ ಬಹಳ ಸಂತಸ ತಂದಿದೆ. ಕಾಂಗ್ರೆಸ್ ಆರಂಭಿಸಿದ, ಬಿಜೆಪಿ ಮುಂದುವರೆಸಿದ ಧೋರಣೆಗಳನ್ನೇ ಎಎಪಿ ಅನುಸರಿಸುತ್ತಿದೆ.

ಈಗ ಇವು ಜನಗಳ ಬದುಕಿಗೆ ಸಂಬಂಧಪಡದ ವಿಷಯಗಳನ್ನು ಎತ್ತಿಕೊಂಡು ಜನರ ಗಮನವನ್ನು ಬೇರೆಡೆಗೆ ತಿರುಗಿಸಲು ಪ್ರಯತ್ನಿಸುತ್ತಿವೆ. ಬಿಜೆಪಿ 'ಎಲ್ಲ ಹೊಸ ಮುಖ'ಗಳಿಗೆ ಟಿಕೆಟ್ ಕೊಡುವ ಮೂಲಕ ತಮ್ಮ ಹಾಲೀ ಕೌನ್ಸಿಲರ್‌ಗಳಲ್ಲ ಭ್ರಷ್ಟರಾಗಿ ಹೆಸರು ಕೆಡಿಸಿಕೊಂಡವರು ಎಂಬುದನ್ನು ಒಪ್ಪಿಕೊಂಡಂತಾಗಿದೆ. ಕಾಂಗ್ರೆಸಿನಲ್ಲೂ ಇದೇ ಕತೆ. ಅಲ್ಲಿ 'ಹಳಬರ' ಬಹಿರಂಗ ಬಂಡಾಯ ಕಾಣ ಬರುತ್ತಿದೆ.

ಇಂತಹ ಸನ್ನಿವೇಶದಲ್ಲಿ ಎಡ, ಜಾತ್ಯತೀತ ಮತ್ತು ಪ್ರಜಾಪ್ರಭುತ್ವವಾದಿ ಜನತ ಆಂದೋಲನಗಳು ಮಾತ್ರವೇ ಹೊಸ ಮಾರ್ಗ ತೋರಿಸಬಲ್ಲವು. ನಗರಪಾಲಿಕೆಗಳಲ್ಲಿ ಭ್ರಷ್ಟಾಚಾರ ಮತ್ತು ದುರಾಡಳಿತದ ವಿರುದ್ಧ, ಕಾಂಟ್ರಾಕ್ಟ್, ಸಫಾಯಿ ಕರ್ಮಚಾರಿ ಮತ್ತು ಇತರ ಕಾರ್ಮಿಕರ ಸೇವೆಗಳನ್ನು ನಿಯಮಿತಗೊಳಿಸಲಿಕ್ಕಾಗಿ, ಎಲ್ಲ ಕಾರ್ಮಿಕರಿಗೆ ಕನಿಷ್ಟ ವೇತನಕ್ಕಾಗಿ, ಉತ್ತಮ ಆರೋಗ್ಯ ಸೇವೆ, ಶಿಕ್ಷಣ, ಶುಚಿತ್ವಕ್ಕಾಗಿ, ಭೂಮಾಫಿಯ ಮತ್ತು ಜಲಮಾಫಿಯಾಗಳಿಂದ, ಬಿಲ್ಡರುಗಳಿಂದ, ರಿಯಲ್ ಎಸ್ಟೇಟ್ ವ್ಯವಹಾರ ಮಡಸುವವರಿಂದ ಮುಕ್ತಿಗಾಗಿ ಒಂದು ಜನತಾ ಆಂದೋಲನ ಬೆಳೆಯಬೇಕಾಗಿದೆ. ಈ ಚುನಾವಣೆಗಳಲ್ಲಿ ಎಡಪಕ್ಷಗಳ ಸ್ಪರ್ಧೆ ಇದರ ಭಾಗವಾಗಿದ್ದು, ಸ್ವಚ್ಛ ಹೆಸರು ಹೊಂದಿರುವ ಎಡ ಅಭ್ಯರ್ಥಿಗಳನ್ನು ಆರಿಸಿ ಒಂದು ಹೊಸ ಪ್ರವೃತ್ತಿಯನ್ನು ಆರಂಭಿಸಲು ನೆರವಾಗಬೇಕು ಎಂದು ಎಡಪಕ್ಷಗಳ ಮುಖಂಡರು ಮತದಾರರಿಗೆ ಮನವಿ ಮಾಡಿದ್ದಾರೆ.

ಎಪ್ರಿಲ್ 5 ರಂದು ಹಿಮಾಚಲ ಪ್ರದೇಶದ ರಾಜಧಾನಿ ಶಿಮ್ಲಾದಲ್ಲಿ ರೈತರ ಒಂದು ಭಾರೀ ರ್‍ಯಾಲಿ ನಡೆಯಿತು. ಹಿಮಾಚಲ ಪ್ರದೇಶ ಕಿಸಾನ್‌ಸಭಾದ ಕರೆಯಂತೆ ನಡೆದ ಈ ರ್‍ಯಾಲಿಯಲ್ಲಿ ರಾಜ್ಯದ ಎಲ್ಲೆಡೆಯಿಂದ ಬಂದ 5000ಕ್ಕೂ ಹೆಚ್ಚು ರೈತರು ಸುರಿಯುತ್ತಿದ್ದ ಮಳೆಯನ್ನೂ ಲೆಕ್ಕಿಸದೆ ಭಾಗವಹಿಸಿದ್ದರು. ಭೂಹೀನ ರೈತರಿಗೆ 5 ಬೀಘ ಜಮೀನು, ಕಾಡು ಪ್ರಾಣಿಗಳಿಂದ ರೈತರ ಬೆಳೆಗಳಿಗೆ ರಕ್ಷಣೆ, ಸ್ವಾಮಿನಾಥನ್ ಆಯೋಗದ ಶಿಫಾರಸಿನ ಸೂತ್ರದ ಪ್ರಕಾರ ಹಾಲಿಗೆ ಲೀಟರಿಗೆ 30ರೂ., ಮನರೇಗದ ಅಡಿಯಲ್ಲಿ 300ರೂ. ಕನಿಷ್ಟ ದಿನಗೂಲಿಯೊಂದಿಗೆ 200ದಿನಗಳ ಕೆಲಸ ಮತ್ತು ಅರಣ್ಯ ಹಕ್ಕು ಕಾಯ್ದೆಯ ಜಾರಿ ಹಿಮಾಚಲ ಪ್ರದೇಶದ ರೈತರ ಮುಖ್ಯ ಬೇಡಿಕೆಗಳು. ಎಐಕೆಎಸ್ ಜಂಟಿ ಕಾರ್ಯದರ್ಶಿ ವಿಜೂ ಕೃಷ್ಣನ್, ಹಿಮಾಚಲ ಕಿಸಾನ್ ಸಭಾದ ಅಧ್ಯಕ್ಷ ರಾಕೇಶ್ ಸಿಂಘ ಮತ್ತಿತರರು ರ್‍ಯಾಲಿಯನ್ನು ಉದ್ದೇಶಿಸಿ ಮಾತಾಡಿದರು.



ತ್ರಿವಳಿ ತಲಾಖ್ ವಿರುದ್ಧ ಹೋರಾಟ ಮೋದಿ ಸರಕಾರ ಏನು ಮುಚ್ಚಿಡುತ್ತಿದೆ?

– ಬೃಂದಾ ಕಾರಟ್

ಕನ್ನಡಕ್ಕೆ : ಕೆ.ಎಸ್. ವಿಮಲ

ಮಹಾನ್ ಮಾನವತಾವಾದಿ, ದೇಶಕ್ಕೊಂದು ಅಪ್ರತಿಮ ಸಂವಿಧಾನವನ್ನು ಕೊಡುವಲ್ಲಿ ಮಹತ್ವದ ಪಾತ್ರವಹಿಸಿದ ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ರವರ 126 ನೇ ಜನ್ಮ ದಿನಾಚರಣೇಯ ಗುಂಗಿನಲ್ಲಿ ದೇಶವಿದೆ. ಈ ದೇಶದಲ್ಲಿ ಈಗಲೂ ಜಾರಿಯಲ್ಲಿರುವ ಜಾತಿ ಪದ್ಧತಿಯಲ್ಲಿ ಆಚರಿಸುವ ಅಸ್ಪೃಶ್ಯತೆಯ ವಿರುದ್ಧ ಅಣಿನೆರೆಸಲು ಪ್ರಯತ್ನಿಸಿದವರು ಅಂಬೇಡ್ಕರ್. 'ನಾಗರಿಕ'ವೆಂದು ಕರೆದುಕೊಳ್ಳುತ್ತ ಮನುಷ್ಯ ಮನುಷ್ಯರಲ್ಲಿಯೇ ಬೇಧವೆಣಿಸುತ್ತ, ಪರಸ್ಪರರಲ್ಲಿ ಕೀಳು ಮೇಲೆಂಬ ಭಾವನೆಯನ್ನು ಬೆಳೆಸುವ ನಿರ್ಲಜ್ಜ ವೈದಿಕಶಾಹಿ ವ್ಯವಸ್ಥೆಯ ಆಲೋಚನೆ ಮತ್ತು ಆಚರಣೆಗಳನ್ನು ತೀವ್ರವಾಗಿ ಖಂಡಿಸುತ್ತ ಅದಕ್ಕೆ ಕನ್ನಡಿ ಹಿಡಿದವರು ಡಾ.ಅಂಬೇಡ್ಕರ್.

ಜಾತ್ಯಾತೀತ ಮೌಲ್ಯಗಳನ್ನು ಬಹಳ ಗಂಭೀರವಾಗಿ ಪ್ರತಿಪಾದಿಸಿದ ಅವರು ಬಹಳ ತೀವ್ರವಾಗಿ ಮಹಿಳೆಯರ ಕುರಿತು ಇದ್ದ ಅಸಮಾನತೆಯನ್ನೂ ಪ್ರಶ್ನಿಸಿದವರು. ಚಾತುರ್ವರ್ಣದ ಆಚರಣೆಯ ಜೊತೆಯೇ ಮಹಿಳಾ ಅಸಮಾನತೆಯೂ ಹೊಲಿದುಕೊಂಡಿರುವುದನ್ನು ಗುರುತಿಸಿದ ಅವರು ಹಿಂದೂ ಕಾನೂನಿನಲ್ಲಿ ಆಗಬೇಕಾದ ಕ್ಷಿಪ್ರ ಸುಧಾರಣೆಗಳನ್ನು ಪ್ರತಿಪಾದಿಸಿದ್ದರು. 'ಹಿಂದೂ ಕೋಡ್ ಬಿಲ್' ಅಥವಾ 'ಶಾರದಾ ಬಿಲ್' ಕುರಿತು ಮಾತಾಡುವಾಗ. 'ಹಿಂದೂ ಸಮಾಜ ಏನನ್ನೇ ಒಪ್ಪಿಕೊಂಡರೂ ಮಹಿಳೆಯರು ಮತ್ತು ದಲಿತರನ್ನು ಗುಲಾಮರಂತೆ ನೋಡುವ ಚಾತುರ್ವಣದ ವ್ಯವಸ್ಥೆಯನ್ನು ಬದಲಿಸಲು ಒಪ್ಪುವುದಿಲ್ಲ ಹಾಗಾಗಿಯೇ ಆ ವಿಭಾಗವನ್ನು ಕಾಪಾಡಿ ಮುನ್ನಡೆಸಲು ಕಾನೂನಿನ ಅಗತ್ಯವಿದೆ' ಎಂದು ಸ್ಪಷ್ಟವಾಗಿ ಹೇಳಿದ್ದರು.

ದೇಶದ ಸಂವಿಧಾನಕ್ಕೆ ಅಂಗೀಕಾರ ದೊರೆತ ಬೆನ್ನಲ್ಲೇ ಅವರು ನೆಹರೂ ಸಚಿವ ಸಂಪುಟದಲ್ಲಿ ಕಾನೂನು ಮಂತ್ರಿಯಾಗಿದ್ದುಕೊಂಡು ಅವರು ಹಿಂದೂ ಪದ್ಧತಿಗಳ (ಕಾನೂನು) ಸುಧಾರಣೆಗೆ ಅಗತ್ಯವಾದ ಕ್ರಮಗಳಿಗೆ ಒತ್ತಾಯಿಸಿದ್ದರು.

ಹಿಂದೂ ಸುಧಾರಣೆ ವಿರೋಧಿಸಿದವರ ತಲಾಖ್ ವಿರೋಧ ನಂಬಬಹುದಾ?

ಅನೇಕ ಸಂಪ್ರದಾಯವಾದಿ ಸಂಸತ್ ಸದಸ್ಯರು ಪಕ್ಷಾತೀತವಾಗಿ ಇದನ್ನು ವಿರೋಧಿಸಿದ್ದರು, ಅವರನ್ನು ಬೈದು, ಹೀಗಳೆದು, ಮೂದಲಿಸಿದ್ದರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮತ್ತು ಅದರ ಸೈದ್ಧಾಂತಿಕ ಸಹಚರರಾಗಿದ್ದ ಹಿಂದೂ ಮಹಾಸಭಾದ ಶ್ಯಾಮ ಪ್ರಸಾದ್ ಮುಖರ್ಜಿ ಯಂತಹ ನಾಯಕರು, ಆಗ ಹಿಂದೂ ಪದ್ಧತಿಗಳಲ್ಲಿ ತರಬಹುದಾದ ಕನಿಷ್ಟ ಸುಧಾರಣೆಗಳಿಗೂ ವಿರೋಧ ಮಾಡಿ ತಡೆಯೊಡ್ಡಿದ್ದಲ್ಲದೇ ವೈಯಕ್ತಿಕವಾಗಿ ಕೂಡ ಅಂಬೇಡ್ಕರ್ ರವರ ಮೇಲೆ ದಾಳಿ ಮಾಡಿದ್ದರು. ಅಂದಿನ ರಾಷ್ಟ್ರಾಧ್ಯಕ್ಷ ಡಾ.ಬಾಬು ರಾಜೇಂದ್ರ ಪ್ರಸಾದ್ ಮತ್ತು ಗೃಹಮಂತ್ರಿಳಾದ ವಲ್ಲಭ ಬಾಯಿ ಪಟೇಲ್ ರಂಥಹ ಪ್ರಮುಖ ಕಾಂಗ್ರೆಸ್ ಮುಖಂಡರುಗಳೂ ಅವರ ಜೊತೆ ಸೇರಿದ್ದರು. ಅಲ್ಲದೇ ನಾಝಿರುದ್ದೀನ್ ಅಹ್ಮದ್‌ರಂಥಹ ಕೆಲವು ಮುಸ್ಲಿಂ ಮೂಲಭೂತವಾದಿಗಳು ಅವರಿಗೆ ಸಾಥ್ ನೀಡಿದ್ದರು. ಇದು ಮೂಲಭೂತವಾದ ಮತ್ತು ಅದರ ಪ್ರತಿಗಾಮೀ ಆಲೋಚನೆಗಳಿಗೆ ಹಿಂದೂ ಅಥವಾ ಮುಸ್ಲಿಂ ಎಂಬ ಬೇಧವಿಲ್ಲ ಅವು ಒಂದು ನಾಣ್ಯದ ಎರಡು ಮುಖಗಳು ಎಂಬುದಕ್ಕೆ ಸಾಕ್ಷಿ. ಈಗ ಬಹುಷಃ ಈ ಎಲ್ಲವನ್ನೂ ಮತ್ತೊಮ್ಮೆ ನೆನಪಿಸಿಕೊಳ್ಳಲು ಸಕಾಲ.

ಈಗಿನ ಅಗತ್ಯ ಒಂದೊಂದೇ ಹೆಜ್ಜೆಯಾಗಿ ಎಲ್ಲ ವೈಯಕ್ತಿಕ ಕಾನೂನುಗಳಲ್ಲಿ ಸುಧಾರಣೆ ತರುವ ಮತ್ತು ಎಲ್ಲ ಮಹಿಳೆಯರನ್ನೂ ಒಳಗೊಳ್ಳುವ ಜಾತ್ಯಾತೀತ ಚೌಕಟ್ಟಿಗೆ ಒಳಪಡಿಸುವುದಾಗಿದೆ. ಇದು ಸಮುದಾಯದ ಒಳಗೆ ಮತ್ತು ಸಮುದಾಯದ ಹೊರಗೆ ಸಮಾನ ಅವಕಾಶಗಳನ್ನು ಎಲ್ಲರಿಗೂ ತರುವುದಾಗಿದೆ. ಆದರೆ ಕೇವಲ ಕಾನೂನು ಬಂದರಷ್ಟೇ ಸಾಲದು. ಅದರ ಸಮರ್ಪಕ ಜಾರಿ ಅತ್ಯಂತ ಮಹತ್ವದ ಸಂಗತಿ.



ತ್ರಿವಳಿ ತಲಾಖ್ :

ದೇಶದಲ್ಲಿಂದು ಮುಸ್ಲಿಂ ವೈಯಕ್ತಿಕ ಕಾನೂನುಗಳ ಸುಧಾರಣೆಗಳು ಮತ್ತು ಸುಪ್ರಿಂ ಕೋರ್ಟಿನ ಮುಂದಿರುವ ಮುಸ್ಲಿಂ ಮಹಿಳೆಯರನ್ನು ಬಾಧಿಸುತ್ತಿರುವ ಏಕಪಕ್ಷೀಯ ತಲಾಕ್ ಕುರಿತು ದೊಡ್ಡ ಚರ್ಚೆ ನಡೆಯುತ್ತಿದೆ. ಅಂದು ಹಿಂದೂ ಕೋಡ್ ಬಿಲ್ ನ್ನು ವಿರೋಧಿಸಿದ ಹಳೆಯ ದೋಸ್ತ್ ಮೂಲಭೂತವಾದಿಗಳು ಇಂದು ಎದುರು ಬದುರು ನಿಂತಿದ್ದಾರೆ. ಅವರ ತ್ರಿವಳಿ ತಲಾಖ್ ನ ಪರ ಅಥವಾ ವಿರೋಧವೇನೇ ಇರಲಿ, ಅದು ಮಹಿಳೆಯರ ಪರವಾದ ಧೋರಣೆ ಖಂಡಿತಾ ಅಲ್ಲ. ಬದಲಿಗೆ ಅವರವರ ಸ್ವಂತ ಹಿತಾಸಕ್ತಿಗಳಷ್ಟೇ. ರಾಷ್ಟ್ರೀಯ ಸ್ವಯಂ ಸೇವಕ ಸಂಘ ಮುಸ್ಲಿಂ ವೈಯಕ್ತಿಕ ಕಾನೂನನ್ನು ಒಮ್ಮೆಲೇ ಛಿದ್ರಗೊಳಿಸಲು ಇದನ್ನೊಂದು ಅವಕಾಶವಾಗಿ ಯೋಚಿಸುತ್ತಿದೆ. ಮುಸ್ಲಿಂ ಮೂಲಭೂತವಾದಿಗಳಿಗೆ ಪಾಳೆಯಗಾರೀ ಮಹಿಳಾ ವಿರೋಧಿ ಪ್ರತಿಗಾಮೀ ಆಚರಣೆಗಳನ್ನು ಧರ್ಮದ ಹೆಸರಿನಲ್ಲಿ ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವ ಕಾಳಜಿಯಷ್ಟೆ.

ಮುಸ್ಲಿಂ ಮಹಿಳೆಯರು ಕೊನೆಗೊಳಿಸಲು ಪ್ರಯತ್ನಿಸುತ್ತಿರುವ ಅಮಾನವೀಯ ಆಚರಣೆಯ ಹಕ್ಕೊತ್ತಾಯವನ್ನು ಬೆಂಬಲಿಸುವ ಬದಲು ಇತರ ರಾಜಕೀಯ ಪಕ್ಷಗಳು ಮೌನ ವಹಿಸಿ ನಿಂತಿರುವುದು ನಾಚಿಕೆಗೇಡಿನ ಸಂಗತಿ, ಮತ್ತು ಇದು ಆರ್.ಎಸ್.ಎಸ್ ಮತ್ತು ಮುಸ್ಲಿಂ ಮೂಲಭೂತವಾದಿಗಳಿಗೆ ಬಲ ನೀಡಿದಂತಾಗಿದೆ. ತೃಣಮೂಲ ಕಾಂಗ್ರೆಸ್ಸಿನಂಥಹ ಪಕ್ಷದ ಮುಸ್ಲಿಂ ಸಂಸದರ "ಧರ್ಮ ಅಪಾಯದಲ್ಲಿದೆ" ಎಂಬ ರೀತಿಯ ಘೋಷಣೆಗಳು ಸಮುದಾಯದ ಮೂಲಭೂತವಾದಿಗಳನ್ನು ಬೆಂಬಲಿಸಿದೆ. ಮುಸ್ಲಿಂ ಸಮುದಾಯದ ಹಲವು ಸಂಸ್ಥೆಗಳು ಈ ಆಚರಣೆ–ಯ ವಿರುದ್ಧವೇ ಮಾತನಾಡಿದ್ದಾರೆ. ಅದನ್ನು ಕಡೆಗಣಿಸಿ ಮಹಿಳೆಯರ ಈ ಪ್ರಮುಖ ಪ್ರಜಾಪ್ರಭುತ್ವ ಹಕ್ಕಿನ ಬಗ್ಗೆ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡಿದ ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯನ್ನು ಇಡೀ ಸಮುದಾಯದ ಪ್ರತಿನಿಧಿಗಳೆಂದು ಈ ಪಕ್ಷಗಳು ಭಾವಿಸಿವೆ. ಇದನ್ನು ರಾಜಕೀಯ ಅವಕಾಶವಾದಿತನವೆಂದು ಭಾವಿಸಬೇಕಾಗುತ್ತದೆ. ಅಂಬೇಡ್ಕರ್ ಈ ಅವಕಾಶವಾದಿತನವನ್ನು ವಿರೋಧಿಸುತ್ತಿದ್ದರು ಮತ್ತು ಯಾವುದೇ ಆಚರಣೆ ದೇಶದ ಸಂವಿಧಾನದ ಹಕ್ಕುಗಳ ಭಾಗವಾಗಿಯೇ ಸಮರ್ಥಿಸಿಕೊಳ್ಳಬೇಕೆಂದು ಪ್ರತಿಪಾದಿಸಿದ್ದರು.

ಮೋದಿ ಸರಕಾರ ಏನು ಮುಚ್ಚಿಡುತ್ತಿದೆ ?

ಮುಸ್ಲಿಂ ಮಹಿಳೆಯರಿಗೆ ಸುಧಾರಣೆಗಳ ಫಲ ದೊರಕುತ್ತಿಲ್ಲ, ಆದರೆ ಹಿಂದೂ ಮಹಿಳೆಯರು ಫ´ಲಾ ನ ಂ ಭ´ವಿ ಗ´ಳ´ಂ ಎಂದು ಬಿ.ಜೆ.ಪಿ ಮತ್ತು ಕೇಂದ್ರ ಸರ್ಕಾರ ಪ್ರತಿಪಾದಿಸುತ್ತಿರುವುದು. ಇದು ಸತ್ಯಕ್ಕೆ ದೂರವಾದ ಮಾತು. ಹಿಂದೂ ಕಾನೂನುಗಳ ಸು ಧಾರಣೆ ಸಂಪೂರ್ಣವಾಗಿ ಆಗಿ ಬಿಟ್ಟಿದೆ ಎಂಬರ್ಥದಲ್ಲಿ ಈ ಮಾತು. ಈಗಲೂ ಕೂಡ ಪೋಷಕತ್ವ, ದತ್ತಕ, ಆಸ್ತಿ ಹಕ್ಕು, ಕೃಷಿ ಭೂಮಿಯ ಹಕ್ಕು ಮುಂತಾದ ಪ್ರಮುಖ ವಿಷಯಗಳಲ್ಲಿಯೇ ತಾರತಮ್ಯವಿದೆ. ಈ ಯಾವ ಸಂಗತಿಗಳ ಬಗ್ಗೆಯೂ ಕೇಂದ್ರ ಸರ್ಕಾರಕ್ಕೆ ಕನಿಷ್ಟ ಕಾಳಜಿ ಇಲ್ಲದಿರುವುದು ಅವರ ಆಸಕ್ತಿ ಮಹಿಳಾ ಹಕ್ಕುಗಳ ಬಗ್ಗೆ ಅಲ್ಲ ಎಂಬುದನ್ನು ದೃಢೀಕರಿಸುತ್ತದೆ. ಈಗಿನ ಅಗತ್ಯ ಒಂದೊಂದೇ ಹೆಜ್ಜೆಯಾಗಿ ಎಲ್ಲ ವೈಯಕ್ತಿಕ ಕಾನೂನುಗಳಲ್ಲಿ ಸುಧಾರಣೆ ತರುವ ಮತ್ತು ಎಲ್ಲ ಮಹಿಳೆಯರನ್ನೂ ಒಳಗೊಳ್ಳುವ ಜಾತ್ಯಾತೀತ ಚೌಕಟ್ಟಿಗೆ ಒಳಪಡಿಸುವುದಾಗಿದೆ. ಇದು ಸಮುದಾಯದ ಒಳಗೆ ಮತ್ತು ಸಮುದಾಯದ ಹೊರಗೆ ಸಮಾನ ಅವಕಾಶಗಳನ್ನು ಎಲ್ಲರಿಗೂ ತರುವುದಾಗಿದೆ. ಆದರೆ ಕೇವಲ ಕಾನೂನು ಬಂದರಷ್ಟೇ ಸಾಲದು. ಅದರ ಸಮರ್ಪಕ ಜಾರಿ ಅತ್ಯಂತ ಮಹತ್ವದ ಸಂಗತಿ. ಹಿಂದೂ ಕಾನೂನು ಸುಧಾರಣೆಯ ಭಾಗವಾಗಿ ಬಂದ ಶಾರದಾ ಆಕ್ಟ್ ಭಾಗವಾಗಿ ಬಾಲ್ಯವಿವಾಹದ ನಿಷೇಧ ಕುರಿತ ಚರ್ಚೆ ಎದ್ದಿತು. ಆಗ ಸುಧಾರಣಾ ವಿರೋಧಿಗಳು ಯಾವುದೇ ಸಮುದಾಯ ಒಪ್ಪಿಕೊಳ್ಳದಿರುವ ಕಾನೂನು ಜಾರಿಯಾಗಲು ಸಾಧ್ಯವೇ ಇಲ್ಲವೆಂದು ವಾದಿಸಿದ್ದರು. ಅದಕ್ಕೆ ಬಾಲ್ಯವಿವಾಹ ನಿಷೇಧದ ಕಾನೂನು ಇದ್ದಾಗಲೂ ಅದು ಹಿಂದೂ ಪರಂಪರೆಯ ಭಾಗವಾಗಿರುವುದರಿಂದ ಕಾನೂನಿನ ಜಾರಿ ಸಾಧ್ಯವಾಗಲಿಲ್ಲವೆಂಬುದನ್ನು ಉದಾಹರಿಸಿದ್ದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರಸಂಘಚಾಲಕ ಶ್ರೀ ಗೋಲ್ವಾಲ್‌ಕರ್ ಇದನ್ನು ಪ್ರತಿಪಾದಿಸಿದ್ದರು. ಮಾರ್ಚ 1950 ರಲ್ಲಿ ಪಂಜಾಬ್ ನ ನಂಗಲ್‌ನಲ್ಲಿ ಮಾಧ್ಯಮಕ್ಕೆ ಕೊಟ್ಟ ಸಂದರ್ಶನವೊಂದರಲ್ಲಿ ಶಾರದಾ ಕಾನೂನಿಗೆ ಅದು ಜಾರಿಯಾಗಲಾರದ ಕಾನೂನಾಗಿತ್ತಾದ್ದರಿಂದ ಅದನ್ನು ತಾನು ವಿರೋಧಿಸಿದ್ದಾಗಿ ಹೇಳಿರುವುದಾಗಿ ಅವರ ಹೆಸರಿನ ವೆಬ್ ಸೈಟ್ ನಲ್ಲಿ ಪ್ರಕಟವಾಗಿದೆ. ಅದು ಉಪಯುಕ್ತವಾಯಿತೇ ಎಂಬ ಪ್ರಶ್ನೆಗೆ ಖಂಡಿತಾ, ಕಾಲಾನುಕಾಲಕ್ಕೆ ಸಮಾಜಕ್ಕೆ ಅಗತ್ಯವಾದುದು ತಾನಾಗಿಯೇ ಸಂಭವಿಸುತ್ತದೆ ಎಂದಿದ್ದರು. ಹಾಗೆಯೇ ಮುಂದುವರೆದು ಹಿಂದೂಗಳಲ್ಲಿರುವ ಬಹುಪತ್ನಿತ್ವ ಪದ್ಧತಿಯನ್ನು ಸಮರ್ಥಿಸುತ್ತ "ನಾಗಪುರದಲ್ಲಿ ನೇಕಾರರಿಗೆ ಕೆಲಸ ಮಾಡಲು ಹೆಚ್ಚು ಜನ ಬೇಕಾಗುತ್ತಾರೆ, ಕೂಲಿ ಕೊಟ್ಟು ನೇಮಿಸಿಕೊಳ್ಳಲು ಸಾಧ್ಯವಾಗುವುದಿಲ್ಲ ಹಾಗಾಗಿ ಅವರಿಗೆ ಬಹುಪತ್ನಿತ್ವ ದ ಅಗತ್ಯವಿತ್ತು' ಎಂದು ಸಮರ್ಥನೆ ಕೊಟ್ಟಿದ್ದರು. ಮುಂದೆ ಅವರ ಸಂಸತ್ತಿನಲ್ಲಿ ಅವರ ಸಹವರ್ತಿಗಳೇ ಹಿಂದೂ ಕಾನೂನಿಗೆ ತಿದ್ದುಪಡಿಯಾಗಿ ಏಕಪತ್ನಿತ್ವವನ್ನು ಜಾರಿಗೆ ತರುವುದನ್ನು ವಿರೋಧಿಸಿದ್ದರು.

ವರದಕ್ಷಿಣೆ ನಿಷೇಧ ಜಾರಿ ಯಾಕಾಗಿಲ್ಲ?

ಈಗ ಜಾರಿಯಾಗದೆ ವ್ಯಾಪಕವಾಗಿ ಉಲ್ಲಂಘನೆಯಾಗುತ್ತಿರುವುದು ವರದಕ್ಷಿಣೆ ನಿಷೇಧ ಕಾನೂನು. ಬಹುಮುಖ್ಯವಾಗಿ ಹಿಂದೂ ಮಹಿಳೆಯರು ವರದಕ್ಷಿಣೆ ದೌರ್ಜನ್ಯಕ್ಕೆ ಬಲಿಯಾಗಿ ಸಾವನ್ನಪ್ಪುತ್ತಿದ್ದಾರೆ. ಬಹಳ ಸಾರಿ ಸಂಸ್ಕೃತಿ ಪರಂಪರೆಯ ಹೆಸರಿನಲ್ಲಿ ಹಿಂಸಾತ್ಮಕ ಬದುಕಿನಿಂದ ಹೊರ ಬರಲು ಸಾಧ್ಯವಿಲ್ಲದ ಸಂಕೋಲೆಗಳಿಂದ ಮಹಿಳೆಯರು ಬಂದಿಸಲ್ಪಟ್ಟಿರುತ್ತಾರೆ. ಕನ್ಯಾದಾನವೆಂಬ ಪದ್ಧತಿಯು ಹೆಣ್ಣು ಮದುವೆಯ ಮೂಲಕ ತನ್ನ ತವರಿನ ಸಂಬಂಧವನ್ನು ಕಡಿದುಕೊಳ್ಳುತ್ತಾಳೆ, ಅವಳು ಮುಂದೆ ಗಂಡನ ಮತ್ತು ಅತ್ತೇ ಮಾವರ ಸೊತ್ತು ಎಂದು ಸೂಚಿಸಲಾಗುತ್ತದೆ. ಹೆಣ್ಣಿನ ಮನಸ್ಸನ್ನೇ ಮುರಿಯುವ ಮತ್ತು ಮುಂದಿನ ದಿನಗಳಲ್ಲಿ ಎದುರಿಸಬೇಕಾದ ಮತ್ತು ಮೌನದಲ್ಲಿ ಸಹಿಸಿಕೊಳ್ಳಬೇಕಾದ ನೋವಿನ ಕಣಜವನ್ನೇ ಆಕೆ–ಯೆದುರಿಗೆ ಬಿಚ್ಚಿಡುತ್ತದೆ. ಒಮ್ಮೆ ಅದು ನೆರವೇರದಿದ್ದರೆ ಅವಳು ಪರಂಪರೆಯನ್ನು ಮುರಿದ ಹೊಣೆಯನ್ನು ಹೊರಬೇಕಾಗುತ್ತದೆ.

ರಾಷ್ಟ್ರೀಯ ಅಪರಾಧ ಬ್ಯೂರೋ ಪ್ರಕಾರ ಕಳೆದ 10 ವರ್ಷಗಳಲ್ಲಿ ಪ್ರತಿ ವರ್ಷ 8000 ವರದಕ್ಷಿಣೆ ಕೊಲೆಗಳಾಗುತ್ತವೆ ಎಂದು ವರದಿಯಾಗುತ್ತದೆ. ಭಾರತೀಯ ದಂಡಸಂಹಿತೆಯ ಕಲಮು 304 ರ ಪ್ರಕಾರ ಯಾವುದೇ ಮಹಿಳೆ ವಿವಾಹವಾದ 7 ವರ್ಷಗಳೊಳಗೆ ಯಾವುದೇ ರೀತಿಯ ಸುಟ್ಟ ಗಾಯ, ದೈಹಿಕ ಹಲ್ಲೆಗಳಿಂದ ಮೃತಪಟ್ಟಿದ್ದರೆ ಮತ್ತು ಅದಕ್ಕೆ ಆಕೆಯ ಪತಿಯ ಕುಟುಂಬದವರು ಕಾರಣ–ರಾಗಿದ್ದರೆ ಅದನ್ನು ವರದಕ್ಷಿಣೆ ಕೊಲೆ ಎಂದು ಪರಿಗಣಿಸಲಾಗುತ್ತದೆ.

ಈ 8000 ಸಾವಿನಲ್ಲಿ ಬಹುಪಾಲು ಹಿಂದೂಧರ್ಮದವರು. ಇಂದು ಮುಸ್ಲಿಂ ಮಹಿಳೆಯರ ಹಕ್ಕುಗಳ ಪರವಾಗಿ ಗಟ್ಟಿ ಧ್ವನಿ ಮಾಡುತ್ತಿರುವ ಹಿಂದುತ್ವ ಸಂಘಟನೆಗಳು ಕನಿಷ್ಟ ಮಾತನಾಡಿದ್ದಿದೆಯಾ? ವ್ಯತಿರಿಕ್ತವಾಗಿ ಕೌಟುಂಬಿಕ ದೌರ್ಜನ್ಯದಂಥಹ ಕಾನೂನುಗಳನ್ನು 'ಹಿಂದೂ ಸಂಸ್ಕೃತಿ'ಗೆ ವಿರುದ್ಧವೆಂದು ಪ್ರಚಾರ ಮಾಡಿ ಅದನ್ನು ಜಾಳಾಗಿಸಲು ಪ್ರಯತ್ನಿಸುತ್ತಾವೆ.

ವರದಕ್ಷಿಣೆಯ ಪಿಡುಗು ಈಗ ಮುಸ್ಲಿಂ ಸಮುದಾಯಕ್ಕೂ ಹಬ್ಬಿದೆ. ಮುಸ್ಲಿಂ ಸಮುದಾಯಗಳು ವಾಸಿಸುವ ಪ್ರದೇಶಗಳಲ್ಲಿ ಮಹಿಳಾ ಸಂಘಟನೆಗಳು ನಡೆಸುವ ಕಾನೂನು ಸಲಹಾ ಕೇಂದ್ರಗಳಿಗೆ ಬರುವ ಪ್ರಕರಣಗಳಿಂದ ಈ ಅಂಶ ಬೆಳಕಿಗೆ ಬರುತ್ತಿದೆ. ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿ ಮತ್ತು ಇತರ ಸಂಘಟನೆಗಳಿಗೆ ಕೂಡ ಇದು ಗೊತ್ತು. ಆದರೆ ಯಾವತ್ತಾದರೂ ಇದು ಧರ್ಮಕ್ಕೆ ವಿರುದ್ಧವೆಂದು ಅವರು ಮಾತನಾಡಿದ್ದಿದೆಯೇ? ಬದಲಿಗೆ ಮಹಿಳೆಯರಿಗೆ ಯಾವತ್ತೂ ಅಂಥಹ ಸಂದರ್ಭಗಳಲ್ಲಿ ಬೆಂಬಲವೂ ಸಿಗುವುದಿಲ್ಲ.

ಇಂಥಹ ಗೋಸಂಬೆತನದ ವಿರುದ್ಧವೇ ಡಾ. ಅಂಬೇಡ್ಕರ್ ಹೋರಾಟ ಮಾಡಿದ್ದರು. ಅವರ ಇಂಥಹ ಧೀರೋದಾತ್ತ ನಡೆಯ ಮೂಲಕವೇ ಪಾಠ ಕಲಿಯಬೇಕಾದ ನಾವು ಅದನ್ನು ಮುನ್ನಡೆಸಬೇಕು ಕೂಡ.

JANASHAKTHI KANNADA VARA PATRIKE April 24-30, 2017 Price : Rs. 10/- Date of Publication : 21 April 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ದಲಿತ ಹಕ್ಕುಗಳ ಕುರಿತ ಬಹಿರಂಗ ಸಭೆಯಲ್ಲಿ ಕಾಂ. ಸುಭಾಷಿಣಿ ಅಲಿ ಯವರ ಭಾಷಣ

ಘನತೆ, ಗೌರವ ಮತ್ತು ಸಮಾನತೆಗಾಗಿ ದಲಿತರ, ಮಹಿಳೆಯರ ಆಂದೋಲನ

ಭಾರತರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ 126ನೆಯ ಜಯಂತಿ ಹಿನ್ನೆಲೆಯಲ್ಲಿನ ರಾಜ್ಯ ಮಟ್ಟದ ಅಧ್ಯಯನ ಶಿಬಿರದ ಅಂಗವಾಗಿ 2017 ರ ಎಪ್ರಿಲ್ 15 ರಂದು ಹೊಸಪೇಟೆಯ ಮುನ್ಸಿಪಲ್ ಮೈದಾನದಲ್ಲಿ ನಡೆದ ಬಹಿರಂಗ ಸಭೆಗೆ ರಾಜ್ಯದಿಂದ ಆಗಮಿಸಿದ್ದ ಶಿಬಿರಾರ್ಥಿಗಳ ಜೊತೆ ಬಳ್ಳಾರಿ ಜಿಲ್ಲೆ ಮತ್ತು ಸುತ್ತಲಿನ ಕೊಪ್ಪಳ, ರಾಯಚೂರು, ದಾವಣಗೆರೆ ಮುಂತಾದ ಜಿಲ್ಲೆಗಳಿಂದ ಭಾಗವಹಿಸಿದ್ದರು. ವಿಶೇಷವಾಗಿ ಬಳ್ಳಾರಿ ಜಿಲ್ಲೆಯ ವಿವಿಧ ತಾಲೂಕುಗಳಿಂದ ಅತ್ಯಧಿಕ ಸಂಖ್ಯೆಯಲ್ಲಿ ಸಾವಿರಾರು ಜನ ಉತ್ಸಾಹದಿಂದ ಪಾಲ್ಗೊಂಡಿದ್ದರು. ಸುಮಾರು 3000 ಕ್ಕೂ ಮೀರಿ ಸೇರಿದ್ದ ಜನರಲ್ಲಿ ಮಹಿಳೆಯರು, ಅದರಲ್ಲೂ ದೇವದಾಸಿ ಮಹಿಳೆಯರ ಪಾಲ್ಗೊಳ್ಳುವಿಕೆ ಗಮನಾರ್ಹವಾಗಿತ್ತು.

ಬಹಿರಂಗ ಸಭೆಯನ್ನುದ್ದೇಶಿಸಿ ಮಾಜಿ ಶಾಸಕರು, ಸಿಪಿಐ(ಎಂ) ಪಕ್ಷದ ರಾಜ್ಯ ಕಾರ್ಯದರ್ಶಿಗಳಾದ ಕಾಂ.ಜಿ.ವಿ. ಶ್ರೀರಾಮರೆಡ್ಡಿ, ಕೃಷಿ ಕೂಲಿಕಾರರ ಸಂಘದ ರಾಜ್ಯಾಧ್ಯಕ್ಷರಾದ ಕಾಂ.ನಿತ್ಯಾನಂದಸ್ವಾಮಿ, ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ ಯು. ಬಸವರಾಜ್, ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ.ಆರ್.ಎಸ್. ಬಸವರಾಜ್, ದೇವದಾಸಿಯರ ಸಂಘದ ರಾಜ್ಯ ಮುಖಂಡರಾದ ಕಾಂ. ಮಾಳಮ್ಮ, ಮಾತನಾಡಿದರು. ಕಾಂ.ಎಸ್.ವೈ.ಗುರುಶಾಂತ್ ಸುಬಾಷಿಣಿ ಅಲಿಯವರ ಭಾಷಣ ಅನುವಾದಿಸಿದರು. ಅಂಗನವಾಡಿ ಸಂಘಟನೆಯ ಮುಖಂಡರಾದ ಕಾಂ.ಕೆ. ನಾಗರತ್ನ ಸ್ವಾಗತಿಸಿದರು. ಸಿಪಿಐ(ಎಂ) ಹೊಸಪೇಟೆ ತಾಲೂಕು ಕಾರ್ಯದರ್ಶಿ ಕಾಂ. ಭಾಸ್ಕರರೆಡ್ಡಿ, ಜಿಲ್ಲಾ ಕಾರ್ಯದರ್ಶಿ ಮಂಡಲಿ ಸದಸ್ಯರಾದ ಕಾಂ.ಸತ್ಯಬಾಬು, ಕಾಂ.ಶಿವಶಂಕರ್, ಕಾಂ.ಅಡಿವೆಪ್ಪ, ಕಾಂ.ಎಸ್.ಜಗನ್ನಾಥ್, ದೇವದಾಸಿ ಸಂಘದ ರಾಜ್ಯ ಮುಖಂಡರಾದ ಕಾಂ.ರೇಣುಕಮ್ಮ ಮುಂತಾದವರು ಉಪಸ್ಥಿತರಿದ್ದರು. ಸಭೆಯ ಅದ್ಯಕ್ಷತೆಯನ್ನು ದಲಿತ ಹಕ್ಕುಗಳ ಸಮಿತಿಯ ಮುಖಂಡರಾದ ಕಾಂ.ಎಂ.ಜಂಬಯ್ಯ ನಾಯಕ್ ವಹಿಸಿದ್ದರು.

ಸಹೋದರಿ, ಸಹೋದರರೇ,

ಡಾ. ಬಾಬಾ ಸಾಹೇಬ್ ಅಂಬೇಡ್ಕರ್‌ರವರ 126 ನೆಯ ಜಯಂತಿಯನ್ನು ನಿಮ್ಮೊಂದಿಗೆ ಆಚರಿಸುತ್ತಿರುವುದು ಸಂತೋಷದಾಯಕ. ಸಹಸ್ರಾರು ಸಂಖ್ಯೆಯಲ್ಲಿ ಸೇರಿರುವ ಬಹುತೇಕ ತಾವೆಲ್ಲರೂ ಜಾತಿ ವ್ಯವಸ್ಥೆಯ ಕ್ರೌರ್ಯ, ದಬ್ಬಾಳಿಕೆ, ವಂಚನೆಗಳಿಗೆ ಬಲಿಯಾದವರೇ.ಈ ಅಸಹನೀಯ ದಮನದ ವಿರುದ್ಧ ಹೋರಾಡುತ್ತಿರುವವರೇ ಆಗಿದ್ದೀರಿ.

ಡಾ. ಅಂಬೇಡ್ಕರ್‌ರವರು ಈ ದೇಶದ ಜನತೆಗೆ ಸ್ಫೂರ್ತಿ ನೀಡಿದವರು. ನಾನು ಒಬ್ಬ ಮಹಿಳೆಯಾಗಿ ಹೇಳಬೇಕೆಂದರೆ ಅತೀ ಹೆಚ್ಚಿನ ಗೌರವಕ್ಕೆ ಪಾತ್ರರಾದವರು ಅವರು. ಅವರಿಗೆ ಮಹಿಳೆಯೆಂದರೆ ಅಪಾರವಾದ ಕಳಕಳಿ ಮತ್ತು ಗೌರವ. ಸಮಾಜದಲ್ಲಿ ಮಹಿಳೆ ಅತ್ಯಂತ ಶೋಷಿತೆ ಎಂದೇ ಅವರು ಹೇಳುತ್ತಿದ್ದರು. 1944 ರಲ್ಲಿ ಕಾನ್ಪುರಕ್ಕೆ ಭೇಟಿ ನೀಡಿ ಮಹಿಳಾ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದರು. ಮಹಿಳೆಯರ, ಅದರಲ್ಲೂ ದಲಿತ ಮಹಿಳೆಯರ ಸ್ಥಾನ ಮಾನ ನಿಕೃಷ್ಟವಾಗಿರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಮುಖ್ಯವಾಗಿ, 'ದಲಿತ ಮಹಿಳೆಯರ ದಮನದ ಪ್ರಶ್ನೆಯನ್ನು ಗಂಭೀರವಾಗಿ ತೆಗೆದುಕೊಂಡಿರದ ಬಗ್ಗೆ ನನಗೆ ನಾಚಿಕೆಯಾಗುತ್ತಿದೆ' ಎಂದರು. 'ಮಹಿಳೆಯರಿಗೆ ಸಮಾನತೆ ಸಿಗದೇ ಜಾತಿ ವ್ಯವಸ್ಥೆಯ ಶಾಪ ತೊಲಗದು' ಎಂದು ಹೇಳಿದರು.

ಕಾನೂನು ಮಂತ್ರಿಯಾದಾಗ ಸಂವಿಧಾನ ರಚನೆಯ ಹೊಣೆ ಅವರ ಮೇಲಿತ್ತು. ಮಹಿಳೆಯರಿಗೆ ಸಮಾನ ಸ್ಥಾನಮಾನ ಕಲ್ಪಿಸುವಲ್ಲಿ ಅವರ ಕ್ರಮ ಭಾರತದ ಇತಿಹಾಸದಲ್ಲೇ ಪ್ರಮುಖ ಹೆಜ್ಜೆಯಾಗಿದೆ. ಅದು ಅಸಮಾನತೆಯ ಕಾಲಮಾನ. ಧಾರ್ಮಿಕ ಸಂವಿಧಾನದ ಕಾಲದಲ್ಲಿ ದುರ್ಬಲರು, ದಲಿತರ ಮೇಲೆ ದಬ್ಬಾಳಿಕೆ, ಅಸಮಾನತೆ ಹೇರಲ್ಪಟ್ಟಿತ್ತು. ಆದರೆ ಬಾಬಾ ಸಾಹೇಬರು ಪುರುಷ–ಮಹಿಳೆಯರ ನಡುವೆ ಸಮಾನತೆಯನ್ನು ಪ್ರತಿಪಾದಿಸಿ ಸಂವಿಧಾನದಲ್ಲಿ ಕಲ್ಪಿಸಿದರು. ಮನುಸ್ಮೃತಿಯು ಜಾತಿ ಆಧಾರದಲ್ಲಿ ಅಪರಾಧವನ್ನು, ಅಪರಾಧಿಗಳಿಗೆ ಶಿಕ್ಷೆಯನ್ನು ನೀಡುತ್ತಿತ್ತು. ಬ್ರಾಹ್ಮಣರು ದಲಿತರನ್ನು, ಕೆಳ ಜಾತಿ ಜನರನ್ನು ಕೊಂದರೂ ಶಿಕ್ಷೆಯಿಲ್ಲ, ಅವರು ಪಶ್ಚತ್ತಾಪ ಪಟ್ಟರೆ ಸಾಕು. ಆದರೆ ಒಂದು ಸಣ್ಣ ತಪ್ಪೆಸಗಿದರೂ ದಲಿತರನ್ನು ಕ್ರೂರವಾಗಿ ದಂಡಿಸಲಾಗುತ್ತಿತ್ತು ಕೊಲ್ಲಲಾಗುತ್ತಿತ್ತು. ಬಾಬಾ ಸಾಹೇಬರು ಸಂವಿಧಾನ ರಚಿಸುವಾಗ ಅದನ್ನು ವಿರೋಧಿಸಿದರು. ಆಗ ಸ್ತ್ರೀ–ಪುರುಷರ ನಡುವಿನ ಸಮಾನತೆಯನ್ನು ಹಿಂದು ಮಹಾಸಭಾ ಖಂಡ ತುಂಡವಾಗಿ ವಿರೋಧಿಸಿತು. ಇಂದು ಈಗಲೂ ಅದು ಮುಂದುವರಿದಿದೆ. ಈಗ ಕೇಂದ್ರದಲ್ಲಿ ಸರಕಾರ ಹಿಡಿದಿರುವ ಅವರು ಸಂವಿಧಾನದ ಆತ್ಮವನ್ನೇ ಹಿಸುಕುತ್ತಿದ್ದಾರೆ. ಹಿಂದೂ ಕೋಡ್ ಬಿಲ್ ತರುವಾಗ ಮಹಿಳೆಯು ಪುರುಷನಷ್ಟೇ ಸಮಾನಳು. ಆಕೆಗೆ ಆಸ್ತಿಯಲ್ಲಿಯೂ ಸಮಾನ ಹಕ್ಕು ಸಿಗಬೇಕು ಎಂದ ಅಂಬೇಡ್ಕರ್‌ರವರ ಪ್ರತಿಪಾದನೆಯನ್ನು ಹಿಂದೂ ಮಹಾಸಭಾ ವಿರೋಧಿಸಿತು. ಮತ್ತು ಅದು ಅಂಗೀಕಾರವಾಗದಂತೆ ನೋಡಿಕೊಂಡಿತು. ಆಗ ಇಂತಹ ಕನಿಷ್ಠ ಅಂಶವನ್ನು ತರಲಾಗದೇ ಹೋದರೆ ಕಾನೂನು ಮಂತ್ರಿಯಾಗಿದ್ದು ಏನು ಪ್ರಯೋಜನ ಎಂದು ಸ್ಥಾನಕ್ಕೆ ರಾಜಿನಾಮೆ ಕೊಟ್ಟು ಹೊರ ಬಂದರು. ಸಹೋದರಿಯರೇ, ಡಾ.ಅಂಬೇಡ್ಕರ್‌ರವರು ನಮ್ಮ ಹಕ್ಕಿಗಾಗಿ ರಾಜಿನಾಮೆ ನೀಡಿದ್ದಾರೆ. ಇಂದು ಅವರ ಪ್ರತಿಮೆ, ಫೋಟೋಗಳಿಗೆ ಹೂ ಮಾಲೆ ಹಾಕುವ ಮಂತ್ರಿ ಮಹೋದಯರು ತಮ್ಮನ್ನೇ ಪ್ರಶ್ನಿಸಿಕೊಳ್ಳಬೇಕು. ಅವರು ದಲಿತರ,



ಮಹಿಳೆಯರ ಹಕ್ಕುಗಳನ್ನು ರಕ್ಷಿಸುತ್ತಿದ್ದಾರೆಯೇ ಎಂದು.

ಈ ಗತಿಸಿದ 70 ವರುಷಗಳಲ್ಲಿ ಯಾರು ಯಶಸ್ವಿಯಾಗಿದ್ದಾರೆ. ಸಮಾನತೆ ಬಯಸುವ ಶಕ್ತಿಗಳಾ ಅಥವಾ ಅಸಮಾನತೆಯ ಶಕ್ತಿಗಳಾ? ವರ್ಣಾಶ್ರಮ, ಪುರುಷಾಧಿಪತ್ಯ, ಮಹಿಳೆಯರ ದಮನದ ಶಕ್ತಿಗಳಾ? ಈ ವರ್ಣಾಶ್ರಮ ಧರ್ಮದ ರಾಜಕಾರಣಕ್ಕೆ ಅತಿ–ದೊಡ್ಡ ಸಾಕ್ಷಿಯೆಂದರೆ ದೇವದಾಸಿ ಪದ್ಧತಿ ಮತ್ತು ದೇವದಾಸಿಯರು. ಈ ಪದ್ಧತಿಯ ಮೂಲ ಹೇಗೆ? ಇದು ಯಾರ ಸೃಷ್ಟಿ? ದೇವಾಲಯಗಳಲ್ಲಿ ಶ್ರೀಮಂತ ಪಟ್ಟಭದ್ರರ ಸಂತೋಷ, ಅವರ ಅಗತ್ಯಗಳನ್ನು ಪೂರೈಸಲು ಈ ಪದ್ಧತಿಯನ್ನು ಸೃಷ್ಟಿಸಲಾಯಿತು. ಇದು ಅತ್ಯಂತ ಅಮಾನವೀಯ, ಹೀನ ದೈಹಿಕ, ಮಾನಸಿಕ ಶೋಷಣಾ ವ್ಯವಸ್ಥೆ. ದಕ್ಷಿಣ ಭಾರತದಲ್ಲಿರುವ ಈ ಪದ್ಧತಿಗೆ ಧಾರ್ಮಿಕ ಮುಸುಕನ್ನು ಹಾಕಲಾಗಿದೆ. ದೇವರು ಮತ್ತು ಧಾರ್ಮಿಕತೆ ಹೆಸರಿನಲ್ಲಿ ವಿಕೃತ ಆಚರಣೆಯು ಜಾರಿಯಲ್ಲಿದೆ. ಹೀಗಾದಲ್ಲಿ ಜನರನ್ನು ನಂಬಿಸುವುದು, ತೊಡಗಿಸುವುದು ಸುಲಭವೆಂದು ಶೋಷಕರು ಬಗೆದಿದ್ದಾರೆ. ಜಾತಿ ದಮನ, ಮಹಿಳಾ ಶೋಷಣೆ, ಅಸಹನೀಯ ದಬ್ಬಾಳಿಕೆಗಳನ್ನೂ ಇದೇ ಹೆಸರಿನಲ್ಲಿ ನಡೆಸುತ್ತಾ ಬಂದಿದ್ದಾರೆ. ಒಪ್ಪುವಂತೆ ಮಾಡಿದ್ದಾರೆ. ಆದರೆ ಈ ಧರ್ಮದ ಮುಸುಕನ್ನು ಕಿತ್ತೆಸೆದರೆ ಆಗ ಇವರ ವಂಚನೆ, ಶೋಷಣೆ ನಿಜ ಮುಖ ಬಟ್ಟ ಬಯಲಾಗುತ್ತದೆ.

ಈ ದೇವದಾಸಿ ಪದ್ಧತಿ ಬಗ್ಗೆ ಹಲವು ಕಥೆಗಳಿವೆ. ಸಾವಿರಾರು ವರುಷಗಳ ಹಿಂದೆ ಬ್ರಾಹ್ಮಣನೊಬ್ಬನ 'ಪವಿತ್ರ' ಪೂಜೆಗೆ ನೀರು ತಂದುಕೊಡುತ್ತಿದ್ದ ಹೆಂಡತಿ ತಡವಾಗಿ ಬಂದದ್ದಲ್ಲದೇ ನೀರು ತರದೇ ಇದ್ದುದ–ರಿಂದ ಕೋಪಗೊಂಡು ಅವಳ ತಲೆಯನ್ನೇ ಕಡಿಸಿದ. ಈ ರೇಣುಕಾ ಎಲ್ಲಮ್ಮನಿಗೆ ದೇವದಾಸಿಯರನ್ನು ಬಿಡುವ ಪದ್ಧತಿ ಇಲ್ಲಿದೆ. ಜಗಳವಾಡಿದ ಗಂಡ ಹೆಂಡತಿ ಇಬ್ಬರೂ ಬ್ರಾಹ್ಮಣ ಜಾತಿಗೆ ಸೇರಿದವರು. ಆದರೂ ಮಹಿಳೆಯನ್ನೂ ಕೀಳಾಗಿ ಕಾಣಲಾಯಿತು ಎಂಬುದನ್ನು ಗಮನಿಸಬೇಕು. ಈ ದೇವದಾಸಿ ಪದ್ಧತಿಯಲ್ಲಿ ದಲಿತ, ಕೆಳ ಜಾತಿ ಮಹಿಳೆಯರನ್ನೇ ದೂಡಲಾಗಿದೆ. ಇದು ಅತ್ಯಂತ ಕೆಟ್ಟ ವಿಧದ ದೈಹಿಕ ಶೋಷಣೆ. ಹೊಸಪೇಟೆ ಸುತ್ತಲಿನ ಜನ ಹುಲಿಗೆಮ್ಮ, ಎಲ್ಲಮ್ಮಗೆ ಈ ಪದ್ಧತಿ ಮೂಲಕ ನಡೆದು ಕೊಳ್ಳುತ್ತಿರುವುದು ನಿಲ್ಲಬೇಕು. ನೀವು ಖಚಿತವಾಗಿ ಒಂದು ದಾರಿಯನ್ನು ಆರಿಸಿಕೊಳ್ಳಲೇ ಬೇಕು. ಜಾತಿ, ಧರ್ಮ, ದೇವರ ಹೆಸರಿನಲ್ಲಿ ಇಂತಹ ಅಮಾನವೀಯ, ಮೌಢ್ಯತೆಯ ದಾರಿಯಾ ಅಥವಾ ಸಮಾನತೆ, ಮಾನವೀಯತೆಯ ಜಾಗೃತ ಚಿಂತನೆಯ, ಸ್ವಾಭಿಮಾನೀ ದಾರಿಯಾ ಎಂದು.

1956 ರಲ್ಲಿ ಡಾ.ಅಂಬೇಡ್ಕರ್‌ರವರು 'ವರ್ಣಾಶ್ರಮ ಧರ್ಮವನ್ನು ತ್ಯಜಿಸಿ' ಬೌದ್ಧಧರ್ಮವನ್ನು ಸ್ವೀಕರಿಸಿದರು. 'ನಾನು ಹಿಂದುವಾಗಿ ಹುಟ್ಟಿದ್ದೇನೆ. ಇದರಲ್ಲಿ ನನ್ನ ಪಾತ್ರವೇನೂ ಇರಲಿಲ್ಲ. ಆದರೆ ಹಿಂದುವಾಗಿ ಸಾಯಲಾರೆ. ನನ್ನ ಆಯ್ಕೆ ಬೌದ್ಧಧರ್ಮ. ಅದನ್ನು ನಾನು ಸ್ವೀಕರಿಸುತ್ತಿದ್ದೇನೆ' ಎಂದಿದ್ದಾರೆ. ಇಂದು ನಿಜಕ್ಕೂ ಯಾರು ಅಂಬೇಡ್ಕರ್‌ರವರ ಅನುಯಾಯಿಗಳು? ಹಾರ ಹಾಕುವ ಮಂತ್ರಿ ಮಹೋದಯರಾ? ಯೋಚಿಸಿ. ಯಾರು ದಲಿತರು, ದಮನಿತರ, ಮಹಿಳೆಯರ ಹಕ್ಕುಗಳನ್ನು, ಸಮಾನತೆಯನ್ನು ಎತ್ತಿ ಹಿಡಿದು ಹೋರಾಡುತ್ತಾರೋ ಅವರೇ ನಿಜವಾಗಿಯೂ ಅಂಬೇಡ್ಕರ್‌ರವರ ಅನುಯಾಯಿಗಳು.

ಒಂದು ವಾಸ್ತವಿಕ ಘಟನೆಯನ್ನುಇಲ್ಲಿ ಪ್ರಸ್ತಾಪಿಸುತ್ತೇನೆ. ಇದೇ ಬಳ್ಳಾರಿ ಜಿಲ್ಲೆಯ ಬಾದನಟ್ಟಿ ಗ್ರಾಮದಲ್ಲಿ ಯಂಕಮ್ಮ ಎಂಬ ದೇವದಾಸಿ ಮಹಿಳೆ ಇದ್ದಳು. ಆಕೆ ತನ್ನ ಮೊಮ್ಮಗಳನ್ನು ದೇವದಾಸಿಯನ್ನಾಗಿಸುವ ಹುನ್ನಾರವನ್ನು ತೀವ್ರವಾಗಿ ವಿರೋಧಿಸಿದಳು. 'ಈ ಅನಿಷ್ಠ ಪದ್ಧತಿಯಿಂದ ನಾನೂ, ನನ್ನ ಮಗಳೂ ನರಳಿದೆವು. ನನ್ನ ಮೊಮ್ಮಗಳು ಕೂಡದು' ಎಂದು ದಿಟ್ಟತನದಿಂದ ಪ್ರತಿಭಟಿಸಿದಳು. ಇದು ಅಲ್ಲಿನ ಭೂಮಾಲೀಕ ಶ್ರೀಮಂತರನ್ನು ಕೆರಳಿಸಿತು. ಆದರೆ ಆಕೆ ಹೆದರಲಿಲ್ಲ, ತಲೆ ಬಾಗಲಿಲ್ಲ. ಇದಕ್ಕೆ ಪ್ರತೀಕಾರವಾಗಿ ಗುಡಿಸಿಲಿಗೆ ಬೆಂಕಿ ಹಾಕಿ ಆಕೆಯನ್ನು ಸುಟ್ಟರು.

ಈ ಕ್ರೌರ್ಯಗಳ ವಿರುದ್ಧ ಹೋರಾಡುತ್ತೇವೆ. ಮಹಿಳೆಯರ ಹಕ್ಕುಗಳಿಗಾಗಿ ಹೋರಾಡುತ್ತೇವೆ. ನಾವು ಈಗ ಕೇಳುತ್ತಿರುವುದು ಅವರ ಶ್ರೀಮಂತಿಕೆಯನ್ನಲ್ಲ. ಕೇಳುತ್ತಿರುವುದು ಮಹಿಳೆಯರಿಗೆ ಮೊದಲು ಗೌರವದ, ಘನತೆಯ ಬದುಕನ್ನು ಕೊಡಿ ಎಂದು. ಶಿಕ್ಷಣ, ಬದುಕುವ ಹಕ್ಕು ಕೊಡಿ ಎಂದು. ಬದುಕುವ ಹಕ್ಕು ಸಂವಿಧಾನದಲ್ಲಿದೆ. ಮನೆ, ಕನಿಷ್ಠ 5 ಎಕರೆ ಭೂಮಿ, ಸಾಲ ಕೊಡಬೇಕೆಂದು ಸರಕಾರಕ್ಕೆ ಆಗ್ರಹಿಸಿ ಸಂಘಟನೆ ಹೋರಾಡುತ್ತಿದೆ.

ಈ ಕೇಂದ್ರ–ರಾಜ್ಯ ಸರಕಾರಗಳು ಬಾಬಾ ಸಾಹೇಬರ ಹೆಸರನ್ನು ಹೇಳುತ್ತವೆ. ಆದರೆ ಇವಾವನ್ನೂ ಕೊಡುವುದಿಲ್ಲ. ರಾಜ್ಯ ಸರಕಾರ ಕೆಲವು ಸವಲತ್ತು ಕೊಟ್ಟಿದೆ ಎನ್ನುತ್ತಾರೆ. ಆದರೆ ಬದುಕಿಗೆ ಭದ್ರತೆಯನ್ನು ನೀಡಿದೆಯೇ? ಡಾ.ಅಂಬೇಡ್ಕರ್‌ರವರ ಹೆಸರೇಳುವ ಕೇಂದ್ರ ಸರಕಾರವಂತೂ ದಲಿತರಿಗೆ, ಮಹಿಳೆಯರಿಗೆ ಸಮಾನತೆಯನ್ನು ನಿರಾಕರಿಸುತ್ತಿದೆ. ಹಿಂದೆ ಹಿಂದೂ ಮಹಾಸಭಾ ವಿರೋಧಿಸಿತ್ತು. ಅದೇ ಈಗ ಬಿಜೆಪಿಯಾಗಿ ವಿರೋಧಿಸುತ್ತಿದೆ. ಸರಕಾರದಲಿತರ ಬೇಡಿಕೆಗಳನ್ನು ತಿರಸ್ಕರಿಸುತ್ತಿದೆ. ದಲಿತರು, ಆದಿವಾಸಿ–ಬುಡಕಟ್ಟುಗಳು, ಮಹಿಳೆಯರ ಕಲ್ಯಾಣಕ್ಕೆಂದೇ ಇದ್ದ ಎಸ್.ಸಿ., ಎಸ್.ಟಿ. ಉಪ ಯೋಜನೆಯನ್ನೇ ಮೋದಿ ಸರಕಾರ ರದ್ದು ಮಾಡಿ ಬಿಟ್ಟಿದೆ. ಕೇಂದ್ರದ ಬಜೆಟ್ಟಿನಲ್ಲಿ ಕನಿಷ್ಠ ಶೇ.22 ರಷ್ಟು ಹಣ ಈ ಸಮುದಾಯಗಳ ಕಲ್ಯಾಣಕ್ಕೆ ಮೀಸಲಿಡಬೇಕು. ಆದರೆ ಅದನ್ನೂ ಕಡಿತ ಮಾಡಿದೆ. ಹೀಗಾದಲ್ಲಿ ಕನಿಷ್ಠ ರಕ್ಷಣೆ ಹೇಗೆ ಸಾ ಧ್ಯ? ಕಲ್ಯಾಣದ, ಶಿಕ್ಷಣದ ಕಾರ್ಯಕ್ರಮಗಳಿಗೆ ಹೊಡೆತ ಬಿದ್ದಿದೆ. ಭೂಮಿ ಇಲ್ಲದ, ಉದ್ಯೋಗದ ಅವಕಾಶಗಳೇ ಇಲ್ಲದ ಸಮುದಾಯಗಳು ಬದುಕುವುದಾದರೂ ಹೇಗೆ? ಇರುವ ಅವಕಾಶಗಳನ್ನು ಕಿತ್ತುಕೊಳ್ಳುವುದರ ವಿರುದ್ಧ ಹೋರಾಡಬೇಕು. ಆದ್ದರಿಂದ ಕಲ್ಯಾಣದ ಯೋಜನೆಗಳನ್ನು ಕಿತ್ತುಕೊಳ್ಳುವುದರ ವಿರುದ್ಧ, ಭೂಮಿ, ಮನೆ, ಸಾಲ ಸೌಲಭ್ಯ, ಶಿಕ್ಷಣ, ಘನತೆಯ ಜೀವನಕ್ಕಾಗಿ ಆಗ್ರಹಿಸಿ ಹೋರಾಟ ನಡೆಸೋಣ.

ಇಂದು ದೇಶದಲ್ಲಿ ಕೋಮುವಾದ ಅಪಾಯಕಾರಿ ಬೆಳೆಯುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಎದುರಿಸಬೇಕಿದೆ.

ಈಗ ಮೀಸಲಾತಿ ವ್ಯವಸ್ಥೆಯನ್ನೇ ಕಿತ್ತುಕೊಳ್ಳುವ ಹುನ್ನಾರ ನಡೆಯುತ್ತಿದೆ. ಮೀಸಲಾತಿ ವ್ಯವಸ್ಥೆ ಮುಂದುವರಿಯಲೇಬೇಕು. ದಲಿತರು, ಆದಿವಾಸಿಗಳು, ಭೂರಹಿತರು, ಮಹಿಳೆಯರ ಹಕ್ಕುಗಳಿಗಾಗಿ, ಕೋಮುವಾದದ ವಿರುದ್ಧ, ಮಾನವ ವಿರೋಧಿ ಕೃತ್ಯಗಳನ್ನು ಎದುರಿಸಿ ಹೋರಾಡಬೇಕು. ಅದಕ್ಕಾಗಿ ಬಲಿಷ್ಠ ಸಂಘಟನೆ ಅತ್ಯಗತ್ಯ. ಸಾಮಾಜಿಕ ನ್ಯಾಯಕ್ಕಾಗಿ ವಿಶಾಲವಾಗಿ ಎಲ್ಲಾ ಶೋಷಿತ ಸಮುದಾಯಗಳೊಂದಿಗೆ ಕೈ ಜೋಡಿಸಬೇಕು. ದಲಿತ, ದಮನಿತ, ಮಹಿಳಾ ಸಮುದಾಯಗಳಲ್ಲಿ ನಾಯಕತ್ವ ಬೆಳೆಯಲಿ.



JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana**, No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**